ಕರ್ನಾಟಕ ಸರ್ಕಾರ

ವೆಂಕಟಾಚಲಪತಿ

ಕನ್ನಡ ಸಮಕಾಲೀನ ಶಿಲ್ಪಕಲೆಯ ಜಕಣಾಚಾರಿ

ಕೆ.ವಿ. ಸುಬ್ರಮಣ್ಯಂ



ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಬೆಂಗಳೂರು-560002.

ವೆಂಕಟಾಚಲಪತಿ

ಕನ್ನಡ ಸಮಕಾಲೀನ ಕಲೆಯ ಜಕಣಾಚಾರಿ

ಲೇಖಕರು

ಕೆ.ವಿ. ಸುಬ್ರಮಣ್ಯಂ

ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಕನ್ನಡ ಭವನ, ಬೆಂಗಳೂರು–560002.

VENKATACHALAPATI

Kannada Samakaleena Shilpakaleya Jakanachary

A Monograph written by
K.V. Subramanyam,
visualart historian and critic,
Bengaluru-560 026.
Email : keveesubramanyam@gmail.com.

Published by : **Smt : Indramma .H.V.** Registrar,
Karnataka Shilpakala Academy,
Kannada Bhavana, J.C. Road,
Bengaluru - 560 002.

Year of Publication : 2014

Pages : VIII + colour 8+104
Price :   70/-
Copies : 1000

Book conceived and designed by the author.

ಮುದ್ರಣ:
ರಾಜಾ ಪ್ರಿಂಟರ್ಸ್
ನಂ.59, 4ನೇ ಹಂತ, ಲಾಲ್‌ಬಾಗ್‌ರಸ್ತೆ,
ಕೆ.ಎಸ್. ಗಾರ್ಡನ್, ಬೆಂಗಳೂರು-560 027.
ದೂರವಾಣಿ: 080-22234066, 22219965
ಇಮೇಲ್: rajaprinters@gmail.com

ನಿರ್ದೇಶಕರ ಮಾತು...

ಕನ್ನಡ ಸಂಸ್ಕೃತಿಯ ಬೆಳವಣಿಗೆಗೆ ಕರ್ನಾಟಕ ಸರ್ಕಾರವು ಹತ್ತು ಹಲವು ರೀತಿಯ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಇದಕ್ಕೆ ಮೂರ್ತ ರೂಪ ಕೊಡುವ ನಿಟ್ಟಿನಲ್ಲಿ ದೃಶ್ಯ ಕಲೆಯ ವಿಭಾಗಗಳಾದ ಚಿತ್ರ, ಶಿಲ್ಪ, ಇತ್ಯಾದಿಗಳಿಗೇ ಅಲ್ಲದೆ ದೃಶ್ಯಕಲೆಯ ಸಾಹಿತ್ಯದ ಪ್ರಕಟಣೆಗೂ ಹೆಚ್ಚಿನ ಗಮನ ನೀಡುತ್ತಿದೆ. ಕರ್ನಾಟಕ ಲಲಿತಕಲಾ ಅಕಾಡೆಮಿ, ಶಿಲ್ಪಕಲಾ ಅಕಾಡೆಮಿ ಇತ್ಯಾದಿ ಅಕೆಡೆಮಿಗಳ ಮೂಲಕ ಕನ್ನಡದ ದೃಶ್ಯಕಲಾರಂಗದ ಬೆಳವಣಿಗೆಗೆ ಬಹು ದೊಡ್ಡರೀತಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ತನ್ನನ್ನು ತೊಡಗಿಸಿಕೊಂಡಿದೆ.

ಪ್ರಸ್ತುತ ನಿಮ್ಮ ಕೈಯಲ್ಲಿರುವ 'ವೆಂಕಟಾಚಲಪತಿ': ಸಮಕಾಲೀನ ಶಿಲ್ಪಕಲೆಯ ಜಕಣಾಚಾರಿ ಪುಸ್ತಕವು ನಮ್ಮ ನಾಡಿನ ಬಹುದೊಡ್ಡ ಸಮಕಾಲೀನ ಶಿಲ್ಪಿಗಳಾದ ವೆಂಕಟಾಚಲಪತಿಯವರ ಜೀವನ ಮತ್ತು ಶಿಲ್ಪಕಲಾ ಸೃಷ್ಟಿಗಳನ್ನು ಒಳಗೊಂಡಿದೆ. ಅವರ ವಿನಯ, ಶಿಲ್ಪ ಸೌಂದರ್ಯಗಳೆರಡೂ ಈ ಪುಸ್ತಕದಲ್ಲಿವೆ. ನಮ್ಮ ಸಂದರ್ಭದ ದೃಶ್ಯಕಲೆಯ ಮುಖ್ಯ ಇತಿಹಾಸಕಾರರು ಮತ್ತು ವಿಮರ್ಶಕರೂ ಆಗಿರುವ ಶ್ರೀ. ಕೆ.ವಿ. ಸುಬ್ರಮಣ್ಯಂರವರು ವೆಂಕಟಾಚಲಪತಿಯವರನ್ನು ಚೆನ್ನಾಗಿ ಬಲ್ಲವರು. ಅವರ ಸಂದರ್ಭ, ಶಿಲ್ಪಸೃಷ್ಟಿಗಳನ್ನು ನೋಡಿರುವವರು. ಈ ವಿಶಿಷ್ಟ ಪುಸ್ತಕವು ನನ್ನ ಸಂದರ್ಭದಲ್ಲಿ ಮೂಡಿಬಂದಿರುವುದು ಸಂತೋಷದ ವಿಷಯ. ಅಕಾಡೆಮಿಯ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಈ ಹಿಂದಿನ ಮಾನ್ಯ ಅಧ್ಯಕ್ಷರಿಗೂ ಹಾಗೂ ಸದಸ್ಯರು, ರಿಜಿಸ್ಟ್ರಾರ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ಅಭಿನಂದನೆಗಳು. ಕನ್ನಡ ಶಿಲ್ಪಕಲಾ ಲೋಕಕ್ಕೆ ಇದೊಂದು ಉತ್ತಮ ಕೊಡುಗೆ ಎಂದೇ ನನ್ನ ನಂಬಿಕೆ. ಎಲ್ಲರಿಗೂ ಶುಭಾಶಯಗಳು.

2014

ನಿರ್ದೇಶಕರು
ಬಿ.ಟಿ. ಮುನಿರಾಜಯ್ಯ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು-560002.


ನಿಮ್ಮೊಂದಿಗೆ...

2010ರ ಕರ್ನಾಟಕ ಸರ್ಕಾರದ ಜಕಣಾಚಾರಿ ಪ್ರಶಸ್ತಿಗೆ ಪಾತ್ರರಾಗಿರುವ ಶಿಲ್ಪಿ ವೆಂಕಟಾಚಲಪತಿಯವರ ಮನಸ್ಸು ಸಂಪ್ರದಾಯ ಹಾಗೂ ಸಮಕಾಲೀನತೆಗಳ ಸಂಗಮ. ಕುಶಲತೆ ಮತ್ತು ತಾಂತ್ರಿಕತೆಗಳ ಲೇಪ ಹೊಂದಿದ ಅನನ್ಯ ಶಿಲ್ಪಗಳು ಅವರಿಂದ ಮೂಡಿ ಬಂದಿವೆ. ಸೃಜನಶೀಲತೆಯ ಬೆರಗು ಅವರ ಹಲವು ಶಿಲ್ಪಗಳಲ್ಲಿದೆ. ಹಾಗಾಗಿ ರಾಷ್ಟ್ರೀಯ ಖ್ಯಾತಿ ಅವರದು. ಅವರ ಶಿಲ್ಪಗಳಂತೆ ಹೊರಗೆ ಮೃದುವಾಗಿ ಕಾಣುವ ಅವರು ಒಳಗೆ ಕಠಿಣರು. ಸುತ್ತಲೂ ಸಹೃದಯರನ್ನೇ ಹೊಂದಿರುವವರು. ಅವರ ಜನಪ್ರಿಯತೆಯ ಗ್ರಾಫ್ 2013ರಲ್ಲಿ ಅತಿ ಎತ್ತರದಲ್ಲಿತ್ತು.

ನಮ್ಮ ಭಾವಶಿಲ್ಪಗಳ ಸಾಲಿನಲ್ಲಿ ಅತಿ ಉನ್ನತ ಸ್ಥಾನ ಅಲಂಕರಿಸಿರುವ ಅವರನ್ನು ನನ್ನ ದೇವನ ಹಳ್ಳಿಯ ದಿನಗಳಿಂದಲೂ, ಹನುಮಂತಾಚಾರ್ಯರ ಕಾಲದಿಂದಲೂ ಬಲ್ಲೆ. ಕಷ್ಟಪಟ್ಟು ಇಷ್ಟವಾದ ದಾರಿಯಲ್ಲಿ ಮುನ್ನಡೆಯುತ್ತಿರುವ ಸಾಧಕರು ಅವರು; ಅವರ ಕುರಿತ ಈ ಕೃತಿ ಅಪೂರ್ಣವೇ ಸರಿ.

ಈ ಪುಸ್ತಕದ ಪ್ರಕಟಣೆಯ ಸಂದರ್ಭದ ಹಲವು ಅಡಚಣೆಗಳನ್ನು ನಿವಾರಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಶ್ರೀ. ಬಿ.ಟಿ. ಮುನಿರಾಜಯ್ಯನವರು ಮತ್ತು ಕರ್ನಾಟಕ ಶಿಲ್ಪ ಕಲಾ ಅಕಾಡೆಮಿಯ ರಿಜಿಸ್ಟಾರ್ ಇಂದ್ರಮ್ಮ .ಹೆಚ್.ವಿ. ಅವರು ನೀವು ನೋಡುತ್ತಿರುವ ರೀತಿಯಲ್ಲಿ ಸುಂದರವಾಗಿ ಪುಸ್ತಕ ಮೂಡಿ ಬರಲು ಕಾರಣರಾಗಿದ್ದಾರೆ; ಧನ್ಯವಾದಗಳು. ಮುದ್ರಣ ಸಂದರ್ಭದಲ್ಲಿ ಎಲ್ಲ ರೀತಿಗಳಲ್ಲಿ ಸಹಕರಿಸಿ ಮುದ್ರಿಸಿದ **ರಾಜಾ ಪ್ರಿಂಟರ್ಸ್** ಮಾಲೀಕರನ್ನು ಇಲ್ಲಿ ನೆನಪು ಮಾಡಿಕೊಳ್ಳಲೇ ಬೇಕು. ಇನ್ನೂ ನನ್ನ ಪುಸ್ತಕದ ಓದುಗರಾದ ನಿಮ್ಮ ಹಲವು ಓದು, ಮರು ಓದುಗಳು ನನಗೆ ಉಪಯುಕ್ತವಾಗಬಲ್ಲವು. ವೆಂಕಟಾಚಲಪತಿಯವರ ಶಿಲ್ಪಗಳ ಕುರಿತ ಇಲ್ಲಿನ ನೋಟಗಳು ಆ ಕುರಿತ ಅಧ್ಯಯನಗಳ ಒಂದು ಸಣ್ಣನೋಟ ಅಷ್ಟೆ. ನಿಮ್ಮೆಲ್ಲರಿಗೂ ವಂದನೆಗಳು.

ಬೆಂಗಳೂರು–26 **–ಕೆ.ವಿ. ಸುಬ್ರಮಣ್ಯಂ, 2014**



ಶಿಲ್ಪಿ ವೆಂಕಟಾಚಲಪತಿ



ಪರಿವಿಡಿ

ಚಿತ್ರ : 2 "ಸರ್ವಜ್ಞ", ಕಂಚು, ಎತ್ತರ : 10 ಅಡಿ,
2001, ಹಾವೇರಿ ಜಿಲ್ಲೆಯ ಮಾಸೂರಿನಲ್ಲಿದೆ.




ಮುಗ್ಧತೆಯ ಮಾಯೆಯ ಪಯಣ

ಕಲಾಮಂದಿರ ಕಲಾಶಾಲೆ ಕನ್ನಡ ದೃಶ್ಯಕಲೆಯ ಇತಿಹಾಸದ ಪುಟಗಳನ್ನು ಸುಂದರಗೊಳಿಸಿರುವ ರೀತಿಯೇ ವಿಶಿಷ್ಟ. ಸ್ಥಳೀಯ ಸತ್ವಗಳನ್ನು ಅರಗಿಸಿಕೊಳ್ಳುತ್ತಲೇ ಸ್ವಾತಂತ್ರ್ಯ ಪೂರ್ವದಲ್ಲಿ ಬೆಳೆದು ಬಂದ ಈ ಶಾಲೆಯಲ್ಲಿ ವೆಂಕಟಾಚಲಪತಿ ಎಂಬ ಅನನ್ಯ ಶಿಲ್ಪಿ ಮೂಡಿಬರಲು ಅ.ನ. ಸುಬ್ಬರಾವ್‌ರವರು ಕಾರಣರಾದರು. ಆ ಬೆಳವಣಿಗೆಯೇ ಒಂದು ದಂತಕತೆ. ನಮ್ಮ ಮುಂದೆ ಇರುವ ಅದ್ಭುತ ಉದಾಹರಣೆಯಂತೆ ಆ ಹಿಂದೆಯೂ ಸುಬ್ಬರಾವ್‌ರವರು ಅವರ ವಿದ್ಯಾರ್ಥಿಗಳನ್ನು ತಂದೆಯಂತೆ ಪೋಷಿಸುತ್ತಿದ್ದರು.[1] ವಿದ್ಯಾರ್ಥಿಗಳ ದೇಹ ಮತ್ತು ಮನಸ್ಸು ಪರಸ್ಪರ ಸಹಸಂಬಂಧ ಹೊಂದಿರುವುದರಿಂದ ಆ ಎರಡೂ ಆರೋಗ್ಯಕರವಾಗಿರುವಂತೆ ನೋಡಿಕೊಳ್ಳುತ್ತಿದ್ದರು. ವೆಂಕಟಾಚಲಪತಿಯವರ ವಿಷಯದಲ್ಲಿಯೂ ಹಾಗೆಯೇ; ಅವರ ದೇಹ ಮತ್ತು

ಚಿತ್ರ : 1 ಅ.ನ. ಸುಬ್ಬರಾಯರ ಭಾವ ಶಿಲ್ಪ ಸೃಷ್ಟಿಯ ಸಂದರ್ಭದಲ್ಲಿ ವೆಂಕಟಾಚಲಪತಿ, 1974.



ಮನಸ್ಸುಗಳ ಬೆಳವಣಿಗೆಗೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಹಲವು ರೀತಿಗಳಲ್ಲಿ ನೆರವಾದರು. ಸ್ವಾತಂತ್ರ್ಯಪೂರ್ವದಲ್ಲಿಯೇ ಬೆಂಗಳೂರಿನ ದೃಶ್ಯ ಕಲಾ ಚಟುವಟಿಕೆಯ ಬೇರುಗಳಂತಿದ್ದ ಸುಬ್ಬರಾವ್‌ರವರು ಸ್ಥಳೀಯರಿಗೆ ಅವೆಲ್ಲವನ್ನೂ ಪರಿಚಯಿಸುವ ಅತ್ಯಂತ ಶ್ರಮದ, ಕೆಲವೊಮ್ಮೆ ತೊಂದರೆಗೆ ಸಿಕ್ಕಿಕೊಳ್ಳುವ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತಿದ್ದರು. ಆ ತೊಡಗಿಕೊಳ್ಳುವಿಕೆಗೆ ಜನರ ಸೌಂದರ್ಯ ಪ್ರಜ್ಞೆ ಬೆಳೆಸುವ ಮಹತ್ವದ ಉದ್ದೇಶವೂ ಇದ್ದಿತು. 1960ರ ದಶಕದಲ್ಲಿಯೇ ಕಲಾಮಂದಿರ ಅನಕೃರಂತಹ ನವೋದಯ ದೃಷ್ಟಿಯ ವ್ಯಕ್ತಿತ್ವಗಳು ದೃಶ್ಯಕಲೆಯ ಕುರಿತು ಮಾತನಾಡುವ ಸಂದರ್ಭಗಳನ್ನೂ ಸೃಷ್ಟಿಸಿತು. ಜೀವನ ಮತ್ತು ಸೌಂದರ್ಯಗಳೆರಡೂ ಕಲಾವಿದನ ಸೃಷ್ಟಿಯ ಆಶಯವಾಗುವಂತಹ ದೃಷ್ಟಿಯ ಮಂದಿರದ ಕಲಾ ಶಿಕ್ಷಣದಲ್ಲಿ ಮೂಡಿ ಬಂದವರು ವೆಂಕಟಾಚಲಪತಿ. ಬಹುತೇಕ ಸಂಪ್ರದಾಯ ವೈಭವದ ಕರಕುಶಲತೆಯ ಮೂಲದ ಅಂದಿನ




ಚಿತ್ರ: 3, ವೆಂಕಟಾಚಲಪತಿಯವರ ಒಂದು ರೇಖಾಚಿತ್ರ, 1984.

ದೃಶ್ಯಕಲೆ ಆಗತಾನೆ ಹೊಸತನವನ್ನು ಮೈಗೂಡಿಸಿಕೊಳ್ಳುತ್ತಿದ್ದ ಸಂದರ್ಭ. ಬಂಗಾಳದ 'ಪುನರುಜ್ಜೀವನ', ಮುಂಬಯಿಯ Progressive ಕಲಾಚಳುವಳಿಗಳ ಹಿನ್ನೆಲೆ ಹಾಗೂ ವೆಂಕಟಪ್ಪ, ರೂಮಾಲೆ, ಇನಾಮತಿಯವರುಗಳ ಕಾಲ. ಅನ್ನದ ಸಮಸ್ಯೆ ಮೀರಿ ಕಲೆಯ ಹಸಿವನ್ನು ತಣಿಸಿಕೊಳ್ಳಬೇಕಲ್ಲವೆ?[2] ದೇಹದ ಹಸಿವು–ಪಂಚಭೂತಗಳ ಪಾರಮ್ಯ ಒಪ್ಪಿಕೊಂಡೇ 'ನಾನು' ಎಂಬುದನ್ನು ಸಾಧಿಸಬೇಕಷ್ಟೇ.[3] ಸುತ್ತಲಿನ ಎಲ್ಲವನ್ನೂ ಅರಗಿಸಿಕೊಂಡೇ ಬದುಕನ್ನು ಸುಂದರವಾಗಿ ಕಟ್ಟುವ–ಮುರಿಯುವ, ಪುನಃ ಕಟ್ಟುವ ನಿರಂತರ ಪ್ರಕ್ರಿಯೆಯ ನಡುವೆಯೇ ದೃಶ್ಯಕಲೆಯ ಸೃಷ್ಟಿ ಪ್ರಕ್ರಿಯೆಯೂ ನಡೆದು ಬಂದಿದೆ.

ಬದುಕನ್ನು ಸುಂದರವಾಗಿ ಮಾಡಿಕೊಳ್ಳುವ ಹಾದಿಯಲ್ಲಿ ದೃಶ್ಯಕಲಾವಿದ / ಕಲಾವಿದೆಯರ ನಡೆಯುವಿಕೆ ಅಸಾಮಾನ್ಯವಾದುದೇ ಸರಿ.. "ನನ್ನ ಅಭಿವ್ಯಕ್ತಿಯೇ ಒಂದು ಪಯಣ" ಎನ್ನುವವರೂ ಉಂಟು. ಹಾಗಾಗಿಯೇ ಅವರ ಕಲಾಕೃತಿಗಳ ಶೀರ್ಷಿಕೆಯೂ 'ಪಯಣ'ವೇ ಆಗಿರುವುದು ಕುತೂಹಲಕಾರಿ.[4] ಶಿಲ್ಪಿ ವೆಂಕಟಾಚಲಪತಿಯವರ ಅಭಿವ್ಯಕ್ತಿಯ ಹಾದಿಯೂ ಅಗಾಧ ಆತಂಕಗಳನ್ನು

ಚಿತ್ರ: 4, ರೂಪದರ್ಶಿಯಾಗಿ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು (2000).





ಚಿತ್ರ: 5 ಪ್ರಜಾವಾಣಿ ಪತ್ರಿಕೆಯ ಸಂಸ್ಥಾಪಕರು,
ಕೆ.ಎನ್. ಗುರುಸ್ವಾಮಿ, ಮಾಧ್ಯಮ : ಕಂಚು, 2004.

ದಾಟುತ್ತಲೇ ನೋಡುಗರಿಗೆ[5] ತನ್ನ ಒಳನೋಟಗಳನ್ನು ದರ್ಶಿಸುತ್ತಲೇ ನಡೆದಿರುವ ಆಟದ ಮಾಟ. ಗ್ಯಾಲರಿ ಹಾಗೂ ಕೊಳ್ಳುವ, ಸಂಗ್ರಹಿಸುವವರಿಂದ ದೂರವೇ ಉಳಿದು ತಮ್ಮಷ್ಟಕ್ಕೆ ತಾವೇ ಗ್ರಹಿಸಿದ ಅಭಿವ್ಯಕ್ತಿಗಳ ಕಲಾಸೃಷ್ಟಿಗಳೊಂದಿಗೆ ಶಿಲ್ಪಿಗಳು ಇರಲಾಗದ ಸಂದರ್ಭದಲ್ಲಿ ನಾವಿದ್ದೇವೆ. ಶಿಲ್ಪಿ ವೆಂಕಟಾಚಲಪತಿಯವರ ಶಿಲ್ಪಗಳು 2014ರ ಸಂದರ್ಭದಲ್ಲಿ ರಾಜ್ಯ-ರಾಷ್ಟ್ರದ ಗಡಿಗಳನ್ನು ಮೀರಿ ವಿಶ್ವಾತ್ಮಕತೆಯನ್ನು ಸಾಧಿಸಿರುವ ಸಂದರ್ಭವನ್ನೂ ಸೃಷ್ಟಿಸಿವೆ. ಈ ಸೃಷ್ಟಿಶೀಲತೆಯ ಹಿನ್ನೆಲೆಗೆ ಹಲವು ಆತ್ಮೀಯ ಮುಖಗಳ ಚಹರೆಗಳಿವೆ. ಆ ಚಹರೆಗಳ ಪ್ಲಾಶ್‌ಬ್ಯಾಕ್‌ನ ಪುಟಗಳ ಹಲವು ಮುಖಗಳು ನಿಮ್ಮ ನೆರಮನೆಯವರೊಬ್ಬರ ಬದುಕಿನ ಪಯಣದ ದಿನಚರಿಯಂತೆ ತೆರೆದುಕೊಳ್ಳುತ್ತವೆ;[6] ಅವರೊಂದಿಗೆ ಮಾತು-ಮತ್ತು ಶಿಲ್ಪಗಳ ಕುರಿತ ದೃಶ್ಯ ಸೌಂದರ್ಯದ ಹೊಳಹುಗಳು ಮುಗ್ಧತೆ ಹಾಗೂ ಗಾಢಜೀವನ ಪ್ರೀತಿಗಳ ಅನುಭವ ನೀಡುತ್ತವೆ. ಇಲ್ಲಿ 'ಮುಗ್ಧತೆ'ಯ ಆಯಾಮ[7]ದ ಗಾಂಭೀರ್ಯತೆಯೂ ಗಣನೀಯ; ತಮ್ಮ 'ನಾನು'ಕವನದಲ್ಲಿ ಕವಿ ದ.ರಾ. ಬೇಂದ್ರೆಯವರು ಹೇಳುವ ಅವರ ವ್ಯಕ್ತಿತ್ವದ ಅಸ್ತಿತ್ವದ ಮೂಲ ಮಾಯೆಯ ಸೊಬಗಿನಂತೆ.

ಚಿತ್ರ : 6. ವೆಂಕಟಾಚಲಪತಿಯವರ ಮೂಡಿ ಬಂದ ಹೆಚ್.ಎಲ್. ನಾಗೇಗೌಡರ ಭಾವಶಿಲ್ಪ 2005–06. ಮಾಧ್ಯಮ : ಕಂಚು, ಸಂಗ್ರಹ ಮತ್ತು ಪ್ರದರ್ಶನ : ಜಾನಪದ ಲೋಕ, ರಾಮನಗರ.



ಭೂಮಿಗೀತೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ 2014ರ ಸಂದರ್ಭದಲ್ಲಿ ತನ್ನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಕಾರಣಕ್ಕಾಗಿ ವಿಖ್ಯಾತ. ಆದರೆ 1940ರ ದಶಕದಲ್ಲಿ ಒಂದು ಸಾಮಾನ್ಯ ಊರು. ಹಳ್ಳಿಯಲ್ಲದ ಊರು. ಟಿಪ್ಪು ಸುಲ್ತಾನರು ಹುಟ್ಟಿದ ಊರೆಂಬ ಖ್ಯಾತಿ ಬೇರೆ. ಕೋಟೆ, ವೇಣುಗೋಪಾಲಸ್ವಾಮಿಯ ದೇವಾಲಯಗಳ ಸೊಬಗು. ಬದುಕಲು ವ್ಯವಸಾಯವೇ ಮುಖ್ಯವಾದ ಆಸರೆ. ಅಂತಹ ಕೃಷಿಕರ ಕುಟುಂಬವೊಂದರಲ್ಲಿ 1948ರಲ್ಲಿ ಹುಟ್ಟಿದವರೇ ವೆಂಕಟಾಚಲಪತಿ. ತಂದೆ ಚಿಕ್ಕಚೆನ್ನಪ್ಪ, ತಾಯಿ ಮಂಗಮ್ಮ, ತಂದೆ ತಾಯಿಯವರ ಬಗ್ಗೆ ಅಷ್ಟೇನೂ ನೆನಪುಗಳಿಲ್ಲದೆಯೇ ಅಜ್ಜಿ ನಾಗಮ್ಮನ ಆಶ್ರಯದಲ್ಲಿಯೇ ಬೆಳೆದ ಬಾಲ್ಯ. ಆದರೆ ಬಾಲ್ಯದ ನೆನಪುಗಳು ವೆಂಕಟಾಚಲಪತಿಯವರನ್ನು ಕಾಡುವಂತೆ ಕಾಣುವುದಿಲ್ಲ. ಬಹುತೇಕ ಸ್ವಾತಂತ್ರ್ಯ ಬಂದ ನಂತರದ ಕೆಲವು ದಶಕಗಳಲ್ಲಿ ಗ್ರಾಮೀಣ ಭಾರತೀಯ ಮಕ್ಕಳ ಬಾಲ್ಯವೇನೂ ಅಷ್ಟೊಂದು ಸಂತೋಷಕರವಾಗಿ ಇದ್ದಂತೆ ಕಾಣುವುದಿಲ್ಲ. ಶ್ರಮಕೇಂದ್ರಿತ



ಚಿತ್ರ: 7 ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಕುಕ್ಕೆಯವರ ಭಾವಶಿಲ್ಪ ಸೃಷ್ಟಿಯ ಸಂದರ್ಭ...
ವೆಂಕಟಾಚಲಪತಿಯವರ ಪ್ರಾತ್ಯಕ್ಷಿಕೆಯ ಕಾರ್ಯಕ್ರಮ ಅದು.

ದಶಕಗಳಲ್ಲಿಯೂ ಮಕ್ಕಳ ಮುಗ್ಧತೆಯ ಬಾಲ್ಯವೇನೂ ತನ್ನ ಪ್ರಕೃತಿ ಸಹಜ ಜಿಗಿಯುವ ಗುಣಲಕ್ಷಣಗಳನ್ನೇನೂ ಅರಗಿಸಿಕೊಳ್ಳಲಿಲ್ಲ. 1940ರ ದಶಕದ ವೆಂಕಟಾಚಲಪತಿಯವರ ಬಾಲ್ಯವೂ ಕಣ್ಣಿಗೆ ಬೀಳುತ್ತಿದ್ದ ಗಿಡ-ಮರ, ಕೆರೆ-ಕುಂಟೆ, ಹೊಲ ತೋಟಗಳ ಪರಿಸರದಲ್ಲಿ ಕಳೆದಿರಬೇಕು. ಅಷ್ಟೇನೂ ಪ್ರಭಾವ ಬೀರದ ಪ್ರಾಥಮಿಕ ಶಿಕ್ಷಣದ ಅವಧಿಯಲ್ಲಿನ ದಿನಗಳೂ ನಾಲ್ಕು ವರ್ಷ ಪೂರೈಸುವಂತೆ ಮಾಡಿರಬೇಕು. ಆ ಸಂದರ್ಭದ ಯಾವುದೇ ಆಕರ್ಷಕ ವಸ್ತು, ವ್ಯಕ್ತಿ, ದೃಶ್ಯ, ಆಚರಣೆ ಇತ್ಯಾದಿಗಳು ಅವರ ನೆನಪಿನಲ್ಲಿ ಉಳಿದು ಕಾಡುವಂತೆ ಕಾಣುವುದೇ ಇಲ್ಲ. 1956ರ ಹೊತ್ತಿಗೆ ಸರ್ಕಾರಿ ಪ್ರಾಥಮಿಕ ಶಾಲೆಯ 4ನೆಯ ತರಗತಿಗೆ ದೇವನಹಳ್ಳಿಯಲ್ಲಿ ದಾಖಲೆಗೊಂಡು ಕಲಿಯಲಾರಂಭಿಸಿದ ದಿನಗಳು ಸ್ವಲ್ಪಮಟ್ಟಿಗೆ ಆಕರ್ಷಕವಾಗಿರಬೇಕು. ತರಗತಿಯಲ್ಲಿಯೇ ಸ್ಲೇಟಿನಲ್ಲಿ ಬಳಪದಿಂದ ಗೀಚುವ ಸಹಜ ಪ್ರವೃತ್ತಿ! ಸುತ್ತಲಿನ ಮರಗಳ ಬೊಡ್ಡೆಗಳ ಒರಟುತನದ ಆಕಾರಗಳು, ಮರಗಳ ಸುತ್ತಮುತ್ತಲಿನ ಆಟ-ಪಾಟ ವೆಂಕಟಾಚಲಪತಿಯವರಿಗೆ ಸಂತೋಷವನ್ನೇ ಅಲ್ಲದೆ ಪ್ರಕೃತಿ ಪ್ರೀತಿಯ ಸೌಂದರ್ಯ ಪ್ರಜ್ಞೆಯನ್ನು ಉಂಟುಮಾಡಿದಂತಿವೆ. ಭವಿಷ್ಯದ ಅಸಾಮಾನ್ಯ ಶಿಲ್ಪಿಯ ಕೈ-ಕಣ್ಣು-


ಚಿತ್ರ: 8. ನಾಗಪುರದ ದಕ್ಷಿಣ ಕೇಂದ್ರ ವಲಯದ ಸಾಂಸ್ಕೃತಿಕ ಕೇಂದ್ರದ ಆಶ್ರಯದಲ್ಲಿ ಪೂನಾದಲ್ಲಿ ಡಾ. ವೆಂಕಟೇಶ್ ಮೂಡ್ ಗೋಡ್ಕರ್‌ರವರ ಭಾವಶಿಲ್ಪ ಸೃಷ್ಟಿಯ ಸಂದರ್ಭ. ಸಾಂಸ್ಕೃತಿಕ ಕೇಂದ್ರದ ನಿರ್ದೇಶಕರು ಪ್ರೊ. ಸೊಂಟಕ್ಕಿ, ಮೂಡ್‌ಗೋಡ್ಕರ್, ಡಿ. ವಾದಿರಾಜ್, ವೆಂಕಟಾಚಲಪತಿ ಹಾಗೂ ಪ್ರದರ್ಶನಾಧಿಕಾರಿ ದೇಶ್‌ಮುಖ್.

ಮನಸ್ಸುಗಳು ಸುತ್ತಲಿನ ಎಲ್ಲದಕ್ಕೂ ತೀವ್ರತೆಯಿಂದಲೇ ಸ್ಪಂದಿಸಿರಬೇಕು. ಹುಡುಗಾಟವನ್ನು ಮೀರಿ ಹುಡುಕಾಟದ ಪ್ರವೃತ್ತಿಗೆ ಇಳಿದ ಮನಸ್ಸು ಹಲವೆಡೆ ಹರಿದಾಡಿರಬಹುದಲ್ಲವೆ? ಹಾಗಾಗಿಯೇ ಅಂತಹ ಓಡಾಟದ ಸಂದರ್ಭದಲ್ಲಿ ರಾಜ್ಯದ ಸಂಪ್ರದಾಯ ಶೈಲಿಯ ಬಹುಮುಖ್ಯ ಶಿಲ್ಪಿಗಳಲ್ಲಿ ಒಬ್ಬರಾಗಿದ್ದ ಎ.ಸಿ. ಹನುಮಂತಾಚಾರ್ಯರು ಬಾಲಕ ವೆಂಕಟಾಚಲಪತಿಯವರನ್ನು ಆಕರ್ಷಿಸಿದರು. ದೇವನಹಳ್ಳಿಯ ಮುನಿಸಿಪಲ್ ಕಛೇರಿ ಬಳಿ ಇದ್ದ ಪ್ರದರ್ಶನ ಕೊಠಡಿಯೊಂದರಲ್ಲಿ ಜನರು ಒಮ್ಮೆ ಕ್ಯೂ ನಿಂತು ನೋಡುತ್ತಿದ್ದರು. ಚನ್ನಪಟ್ಟಣದ ಗೊಂಬೆಗಳು, ಶಿಲ್ಪಿ ಎ.ಸಿ. ಹನುಮಂತಾಚಾರ್ಯರ ಶಿಲ್ಪ, ಚಿತ್ರ ಇತ್ಯಾದಿಗಳ ಪ್ರದರ್ಶನವದು.


ದೇವನಹಳ್ಳಿ ಶಿಲ್ಪಕಲಾ ಶಾಲೆಯ ಆಕರ್ಷಣೆ:

ಜನಜಂಗುಳಿ ಎಂದರೆ ಮಕ್ಕಳಿಗೆ ಆಕರ್ಷಕ ಅಲ್ಲವೆ! ಅಲ್ಲಿ ಏನು ನಡೆಯುತ್ತಿದೆ? ಎಂಬ ಕೌತುಕ ವೆಂಕಟಾಚಲಪತಿಯವರಿಗೆ, ಆಗ ಸರ್ಕಾರಿ ಶಾಲೆಯ ಹೊರಗೆ ಒಳಗೆ ಎರಡೂ ಒಂದೇ ಆಗಿರುತ್ತಿದ್ದವು. ವಿರಾಮ ಕಾಲದ ಸದುಪಯೋಗವನ್ನು ಜಾಣ ಮಕ್ಕಳು ಹೆಚ್ಚಾಗಿಯೇ ಪಡೆದುಕೊಳ್ಳುತ್ತಾರೆ. ವೆಂಕಟಾಚಲಪತಿಯವರ ಬಗ್ಗೆ ಅಷ್ಟೇನೂ



ಚಿತ್ರ: 9. ಪೂನದಲ್ಲಿ ನಾಗಪುರದ ದಕ್ಷಿಣ ಕೇಂದ್ರ ವಲಯದ
ಸಾಂಸ್ಕೃತಿಕ ಕೇಂದ್ರದ ಆಶ್ರಯದ ಭಾವಶಿಲ್ಪ ಶಿಬಿರದಲ್ಲಿ
ಮಾಹಾರಾಷ್ಟ್ರದ ಹಿರಿಯ ಸಾಹಿತಿಗಳಲೊಬ್ಬರಾದ
ಮೂಡ್ ಗೋಡ್ಕರ್‌ರವರ ಭಾವಶಿಲ್ಪ ಸೃಷ್ಟಿಯಲ್ಲಿ ತಲ್ಲೀನರಾಗಿರುವ ವೆಂಕಟಾಚಲಪತಿ.

ಆಸಕ್ತಿ ತೋರದ ಶಿಕ್ಷಕರೇ ಇದ್ದ ಶಾಲೆ. ವಿರಾಮದ ಬಹುಪಾಲು ಸಮಯ ಶಿಲ್ಪಕಲಾ ಶಾಲೆಯ ಸುತ್ತಮುತ್ತ ಕಳೆಯುತ್ತಿತ್ತು.[8] ಹನುಮಂತಾಚಾರ್ಯರ ದೇವ-ದೇವಿಯರ ಶಿಲ್ಪಗಳೇ ಅಲ್ಲದೆ ಆ ಸಂದರ್ಭದಲ್ಲಿ ಆಜಾನುಬಾಹು, ಆಕರ್ಷಕ ಎತ್ತರದ ಹನುಮಂತಾಚರ್ಯರ ಗೂಪವೂ, ಅಸಾಮಾನ್ಯ ಶಿಲ್ಪಕಲಾ ಶಾಲೆಯ ಸಂದರ್ಭವೂ ಒಂದು ವಿಚಿತ್ರ ಆಕರ್ಷಣೆಯನ್ನು ಉಂಟು ಮಾಡಿದ್ದವು. ದೂರದಲ್ಲಿ ನಿಂತು ನೋಡುತ್ತಿದ್ದ ನೋಟ, ಕ್ರಮೇಣ ಪಲ್ಲಟಗೊಂಡು ಕಲಾಶಾಲೆಯ ಒಳಕ್ಕೆ ಹರಿಯಲಾರಂಭಿಸಿತು. ನೋಡುವುದೆಂದರೆ, ಬಹಳ ಕಾಲ ನಿಂತುಕೊಂಡೇ ಗಮನ ನೀಡುವುದೆಂದರೆ ಸಾಮಾನ್ಯವೆ? ಎಲ್ಲ ಮಕ್ಕಳಿಗೂ ಸಾಧ್ಯವೆ? ವೆಂಕಟಾಚಲಪತಿಯವರ ಅಪರೂಪದ ಆಸಕ್ತಿ ಹನುಮಂತಾಚಾರ್ಯರ ಗಮನ ಸೆಳೆಯಲು ಬಹಳ ದಿನಗಳೇನೂ ಬೇಕಾಗಲಿಲ್ಲ. ಕೆಲವೇ ದಿನಗಳಲ್ಲಿ, ಬಹುಶಃ ಮೂರು-ನಾಲ್ಕನೇ ದಿನಗಳಿಗೇ ಹನುಮಂತಾಚಾರ್ಯರು



ಚಿತ್ರ: 10. ಆಕಾರ: 10x10 ಇಂಚು, 1977–78,
ಮಾಧ್ಯಮ : ಕನಕಪುರದ ಬಳಿಯ ಆವಲಹಳ್ಳಿಯ ಗ್ರಾನೈಟ್‌ಶಿಲೆ



ಚಿತ್ರ: 11. 'ಮುಖ', 1973, ಮಾಧ್ಯಮ :
ಟೆರಾಕೋಟ, ಎತ್ತರ 6 ಇಂಚುಗಳು.



ಚಿತ್ರ: 12. 'ಚೆಲುವೆ'. 1980. ಮಾಧ್ಯಮ :ಗ್ರಾನೈಟ್ (ಮಹಾಬಲಿಪುರ ಶಿಲೆ), ಅಖಿಲಭಾರತ ಶಿಲ್ಪಕಲಾ ರೀಜನಲ್ ಕೇಂದ್ರ, ಕೇಂದ್ರಲಲಿತ ಕಲಾ ಅಕಾಡೆಮಿ

ಚಿತ್ರ: 13. 'HANDICAP' 1981, ಮಾಧ್ಯಮ : ಮೈಸೂರು ಶಿಲೆ. ಸಂಗ್ರಹ : ಕೇಂದ್ರ ಲಲಿತಕಲಾ ಅಕಾಡೆಮಿಯ ವಿಭಾಗೀಯ ಕೇಂದ್ರ, ಚೆನ್ನೈ



ತೆಲುಗು ಭಾಷೆಯಲ್ಲಿ 'ನುವ್ವೂ ಚೇಸ್ತಾವೇಮಯ್ಯ?!' ಎಂದು ಕೇಳಿದಾಗ, ಬಾಲಕ ವೆಂಕಟಾಚಲಪತಿಯವರಿಗೆ ಅಚ್ಚರಿ; ಆತಂಕ. ಪ್ರಶ್ನೆಯ ಹಿಂದೆಯೇ 'ಹೌದು' ಎಂದು ಆತ್ಯಂತಿಕವಾಗಿ ಹೇಳಿಯೇ ಬಿಟ್ಟರು. ಅಲ್ಲಿಗೆ ಶಿಲ್ಪಕಲಾ ಶಾಲೆಯೊಂದಿಗೆ ಸಂಪರ್ಕ ಸಾಧಿತವಾಯಿತು. ಮಿಡ್ಲ್ ಸ್ಕೂಲಿನ 7ನೆಯ ವರ್ಷ, ಅಂದರೆ 6ನೆಯ ತರಗತಿ. ಹಾಗೆಯೇ ಬೆಳೆದ 'ಹೋಗಿ-ಬರುವಿಕೆ' ಅಲ್ಲಿಯೇ ಮಲಗುವ ಅನಿವಾರ್ಯತೆಯನ್ನೂ ಉಂಟುಮಾಡಿತು.


ಚಿತ್ರ; 14 'PAIN-3', 1984–85 ಮಾಧ್ಯಮ : ಪ್ಲಾಸ್ಟರ್ ಆಫ್ ಪ್ಯಾರೀಸ್.

ಸುತ್ತಲಿನ ಹಲವು ಶಿಲ್ಪಗಳು ಅವರನ್ನು ಆಕರ್ಷಿಸಿದ್ದು ಮಾತ್ರವೇ ಅಲ್ಲದೆ ಸೃಷ್ಟಿಸಲು ಅವರನ್ನು ಪ್ರೇರೇಪಿಸಿದವು. ಅಲ್ಲಿಯೇ ಮಲಗುವ ಪರಿಪಾಠ ವೆಂಕಟಾಚಲಪತಿಯವರಲ್ಲಿ ಶಾಲಾ ಅಭ್ಯಾಸದ ಜತೆಜತೆಗೇ ದೈಹಿಕವಾಗಿಯೂ ಹಲವು ಶಿಸ್ತುಗಳನ್ನು ಕಲಿಸಿತು. ಪ್ರಾತಃಕಾಲ ನಿದ್ರೆಯಿಂದ ಎಚ್ಚರಗೊಳ್ಳುವ ಹಾಗೆಯೇ ಸ್ನಾನ, ಜಪ, ಮಂತ್ರ ಇತ್ಯಾದಿಗಳನ್ನೆಲ್ಲಾ ಅಭ್ಯಾಸವಾಗಿಸಿಕೊಂಡು ಬೆಳಗ್ಗೆ 7 ಗಂಟೆಗೆ ಹನುಮಂತಾಚಾರ್ಯರು ತೋರಿಸಿ, ಹೇಳಿಕೊಟ್ಟಂತೆ ಕೆತ್ತುವ ಕೆಲಸದಲ್ಲಿ ತಲ್ಲೀನರಾಗುತ್ತಿದ್ದರು. ಮಿಡ್ಲ್‌ಸ್ಕೂಲ್ ಕಲಿಕೆ ಮುಕ್ತಾಯಗೊಳ್ಳುವ ಕಾಲಕ್ಕೆ ಕಲಾಶಾಲೆಯಲ್ಲಿಯೇ ಉಳಿದುಕೊಳ್ಳಲು ವ್ಯವಸ್ಥೆಗಳಾದವು. ಅಜ್ಜಿಯ ಮನೆಗೆ ಹೋಗಿ ಬರಲು ಸಮಯವೇ ಉಳಿಯುತ್ತಿರಲಿಲ್ಲ. ಶಾಲೆಯ ಪಠ್ಯ ಹಾಗೂ ಶಿಲ್ಪ ಕಲಾಶಾಲೆಯ ಕಲಿಕೆಗಳೆರಡೂ ಜತೆಜತೆಗೇ ಸಾಗುತ್ತಿದ್ದವು. ರೇಖಾಚಿತ್ರ ರೂಪಗಳ ಅಧ್ಯಯನ, ಮಣ್ಣಿನ ರೂಪ ಸಾಧ್ಯತೆಗಳ ಹುಡುಕಾಟ ನಡೆಯಿತು. ಮಿಡ್ಲ್‌ಸ್ಕೂಲಿನ ಕಲಿಕೆ ಮೊದಲೇ ಹೇಳಿರುವಂತೆ ಮುಗಿಯುವ ಹೊತ್ತಿಗೆ ಹೈಸ್ಕೂಲಿನ ಕಲಿಕೆ ಪ್ರಾರಂಭ. 1–2 ವರ್ಷಗಳು ಉರುಳಿದವು. ದೇವನಹಳ್ಳಿಯ ಐತಿಹಾಸಿಕ ಕೋಟೆ, ದೇವಾಲಯ, ಭೂದೃಶ್ಯಗಳು ವೆಂಕಟಾಚಲಪತಿಯವರಿಗೆ ಮತ್ತಷ್ಟು ಆಕರ್ಷಕವಾಗಿ ಕಂಡವು. 1962 ಇರಬೇಕು ಬಿ.ಕೆ.ಎಸ್. ವರ್ಮ ಹನುಮಂತಾಚಾರ್ಯರ ಕಲಾಶಾಲೆಗೆ ಬಂದು ಹೋಗುತ್ತಿದ್ದರು. ಆ ಸಂದರ್ಭದಲ್ಲಿ ಕಲೆಯ ಬಗ್ಗೆ ಅವರು ಹೊಂದಿದ್ದ ಹುಚ್ಚು ಕೌತುಕಮಯ. ಬೆಂಗಳೂರಿನ ಅ.ನ. ಸುಬ್ಬರಾವ್‌ರವರ ಕಲಾ ಮಂದಿರದಲ್ಲಿ ವರ್ಮ ಕಲಿಯುತ್ತಿದ್ದರು. ಚಲಪತಿಯವರಿಗೆ ಸುಬ್ಬರಾವ್‌ರವರ ಬಗ್ಗೆ ಹೇಳಿ, ಕಲಾಮಂದಿರದ ವಿಳಾಸ ಕೊಟ್ಟರು.

ದೇವನಹಳ್ಳಿಯ ಶಿಲ್ಪಕಲಾ ಶಾಲೆಯಲ್ಲಿ 1964ರಲ್ಲಿ ಕೇಂದ್ರ ಸರ್ಕಾರದ ಯೋಜನೆಯೊಂದರಡಿ 6 ತಿಂಗಳ ತರಬೇತಿಯ ಶಿಲಾ ಕೆತ್ತನೆಯಲ್ಲಿ ಕುಶಲತೆಗಳಿಸಲು ವೆಂಕಟಾಚಲಪತಿ, ಸರೋಜಮ್ಮ, ಕರಿಕೃಷ್ಣ ಮೊದಲಾದವರು ಸೇರ್ಪಡೆಗೊಂಡರು. ರೇಖಾ ರೂಪಗಳ ಅಭ್ಯಾಸದ ಜತೆಜತೆಗೇ ಕಲ್ಲಿನ ಹಾಗೂ ಮರದ ಕೆತ್ತನೆಯ ತಂತ್ರಗಳನ್ನು ವಿಶೇಷವಾಗಿ ಹನುಮಂತಾಚಾರ್ಯರು ತಿಳಿಸಿಕೊಟ್ಟರು; ಹೊಸ ದೃಷ್ಟಿಂಯುಧ್ಯಾನ. ತಿಂಗಳಿಗೆ 60 ರೂಪಾಯಿ ವಿದ್ಯಾರ್ಥಿವೇತನ. ವೆಂಕಟಾಚಲಪತಿಯವರ ಎಲ್ಲ ಅಗತ್ಯಗಳನ್ನೂ ಆ ಕಾಲಕ್ಕೆ ಹನುಮಂತಾಚಾರ್ಯರೇ ನೋಡಿಕೊಳ್ಳುತ್ತಿದ್ದರು. ಹೈಸ್ಕೂಲಿನ ವರ್ಷ. ಎಸ್.ಎಸ್.ಎಲ್.ಸಿ. ಪರೀಕ್ಷೆಯ ಒತ್ತಡ ಹಾಗೆಯೇ ವೆಂಕಟಾಚಲಪತಿಯವರ ಬಗ್ಗೆ ಮಾವನ ಮನೆಯವರಿಗೆ ಆಸಕ್ತಿ ಉಂಟಾದಂತಿತ್ತು. ಬದುಕಿನ ಸಹಜ ಒತ್ತಡಗಳಿಗೆ ಮಣಿಯದ ವೆಂಕಟಾಚಲಪತಿ ಕೃಷಿಕನಾಗಿರುವುದಕ್ಕಿಂತಲೂ ಶಿಲ್ಪಿಯಾಗಲು ಇಷ್ಟಪಟ್ಟರು.

ಹನುಮಂತಾಚಾರ್ಯರ ಸಹವಾಸದಲ್ಲಿ ಯೋಗ, ಯಂತ್ರ, ತಂತ್ರ, ಮಂತ್ರಗಳ ಪರಿಚಯ. ಹನುಮಂತಾಚಾರ್ಯರಂತೂ ಆ ಭಾಗದ ಜನರಿಗೆ ಎಲ್ಲವೂ ಆಗಿದ್ದವರು. ಆಯುರ್‌ವೇದ ಔಷಧ–ಉಪಚಾರ, ಭೂತಚೇಷ್ಟೆ ಬಿಡಿಸುವಿಕೆ, ಆ ಉದ್ದೇಶಕ್ಕಾಗಿ ಬಂದವರನ್ನು ಉಪಚರಿಸುತ್ತಿದ್ದ ರೀತಿ ಇತ್ಯಾದಿಗಳೆಲ್ಲಾ ವೆಂಕಟಾಚಲಪತಿಯವರಿಗೆ



ಚಿತ್ರ: 15. ತಾಯಿಮಗು, ಮಾಧ್ಯಮ : ಪ್ಲಾಸ್ಟರ್ ಆಫ್ ಪ್ಯಾರೀಸ್.

ಮಾಂತ್ರಿಕತೆಯ ಅನುಭವಲೋಕವನ್ನು ದರ್ಶಿಸಿತು. ಆ ಸಂದರ್ಭದ ಬೆಂಗಳೂರಿನ ಹಲವು ದೃಶ್ಯಕಲಾವಿದರು, ಬರಹಗಾರರು ಆಚಾರ್ಯರ ಶಿಲ್ಪಕಲಾ ಶಾಲೆಗೆ ಬಂದು ಹೋಗುವಿಕೆ ಸಾಮಾನ್ಯವಾಗಿತ್ತು. ಈ ಎಲ್ಲದರ ನಡುವೆ ವೆಂಕಟಾಚಲಪತಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪಾಸಾಗಲೇ ಇಲ್ಲ; ಬೇಜಾರಾಯಿತು. ಎರಡು ಬಾರಿ ಸಪ್ಲಿಮೆಂಟರಿ ಪರೀಕ್ಷೆಗೆ ಕುಳಿತರು. ವರ್ಮಾ ಕೊಟ್ಟಿದ್ದ ಕಲಾಮಂದಿರದ ಸುಬ್ಬರಾವ್‌ರವರ ವಿಳಾಸಕ್ಕೆ ಈ ಹಿಂದೆಯೇ ಒಮ್ಮೆ ಪತ್ರ ಬರೆದಿದ್ದ ವೆಂಕಟಾಚಲಪತಿಯವರಿಗೆ ಅವರು ಪ್ರೀತಿಯಿಂದ ಉತ್ತರಿಸಿದ್ದರು. "ಧೈರ್ಯವಾಗಿ ಬೆಂಗಳೂರಿಗೆ ಬಾ ನನ್ನ ನೆರವು ನಿನಗೆ ಇದೆ" ಎಂದಿದ್ದರು. ವೆಂಕಟಾಚಲಪತಿ ಖಾಸಗಿ ಬಸ್ ಹತ್ತಿ ದೇವನಹಳ್ಳಿಯಿಂದ ಕಲಾಸಿಪಾಳ್ಯ ಬಸ್‌ನಿಲ್ದಾಣದಲ್ಲಿ ಬಂದಿಳಿದರು.



ಚಿತ್ರ: 16. ಮಹಾಬಲಿಪುರಂ ಹಾದಿಯ ಚೋಳಮಂಡಲ ಕಲಾಗ್ರಾಮಕ್ಕಾಗಿ 1983ರಲ್ಲಿ ವೆಂಕಟಾಚಲಪತಿಯವರು ಸೃಷ್ಟಿಸಿದ ಸಿಮೆಂಟ್ ಮಾಧ್ಯಮದ ಶಿಲ್ಪ.



ಚಿತ್ರ: 17. 'ಸಾಕುಪ್ರಾಣಿಗಳು – 1' 1983–84, ಮಾಧ್ಯಮ : ಟೆರಾಕೋಟ,
ಸಂಗ್ರಹ : ಅಮಿತ್ ಸರ್ಕಾರ್, ಕೊಲ್ಕತ್ತ.


ಬೆಂಗಳೂರಿನ ಕಲಾ ಮಂದಿರಕ್ಕೆ:

ಅದೊಂದು ಆತಂಕಮಯ ಪಯಣ; ಬದುಕಿನ ಭದ್ರತೆಯ–ಬೇರು–ಬಣ್ಣ ರೂಪಗಳ ಹುಡುಕಾಟದ ಅಯನ. ಬಸವನಗುಡಿಯ ಡಿ.ವಿ. ಗುಂಡಪ್ಪ ರಸ್ತೆಯ ಕಲಾಮಂದಿರದಲ್ಲಿ ಸುಬ್ಬರಾವ್‌ರವರ ಭೇಟಿ. ಅಲ್ಲಿಯೇ ಉಳಿದುಕೊಳ್ಳುವ ವ್ಯವಸ್ಥೆ. ಊಟದ ಸಮಸ್ಯೆಯೂ ಇರಲಿಲ್ಲ. ಕಲಾಮಂದಿರದಲ್ಲಿ ಆಗ ಶಿಲ್ಪಕಲೆಯನ್ನು ಕಲಿಸುವವರೇ ಇರಲಿಲ್ಲ ಹಾಗಾಗಿ ಚಿತ್ರಕಲೆಗೇ ಹೆಚ್ಚಿನ ಗಮನ ನೀಡಬೇಕಾಯಿತು. ಶಿಲ್ಪಕಲೆಯ ಸಂಪ್ರದಾಯದ ಬೇರುಗಳನ್ನು ಅನುಭವಿಸಲು ವೆಂಕಟಾಚಲಪತಿಯವರಿಗೆ ದೇವನಹಳ್ಳಿಯಲ್ಲಿ ಸಾಧ್ಯವಾಗಿತ್ತಷ್ಟೆ. ಬೆಂಗಳೂರಿನಲ್ಲಿ ಆ ಕ್ಷಣಕ್ಕೆ ಆ ಹಾದಿಯಲ್ಲಿ ಮುಂದುವರಿಯಲಾಗಲಿಲ್ಲ. ಹೌದು ಕಲಾಮಂದಿರ[8] ಅ.ನ. ಸುಬ್ಬರಾವ್‌ರವರ ಬಹುಮುಖಿ ಪ್ರತಿಭೆಯ ಪ್ರಯೋಗ ಶಾಲೆ. ಕಲೆಯನ್ನು ಒಂದು ವೃತ್ತಿಯಾಗಿ ಅವಲಂಬಿಸುವ ಆಶಯದಿಂದ ಆರಂಭವಾಗಿತ್ತು.




ಚಿತ್ರ: 18. ವುಮನ್ ಆಸ್ ಎ ಪಪೆಟ್, 1984.

ಪಿ.ಎಸ್.ರಾವ್, ಎಸ್.ಆರ್. ಸ್ವಾಮಿ, ರುಮಾಲೆ ಚೆನ್ನಬಸವಯ್ಯ, ಕಾಳಪ್ಪ, ಪಿ.ಆರ್. ಕಮಲಮ್ಮ, ಕೃಷ್ಣಪ್ಪ, ಬಿ.ಕೆ.ಎಸ್. ವರ್ಮ, ಹರಿರಾಮ್, ಕನಕಾಮೂರ್ತಿ ಮೊದಲಾದವರೆಲ್ಲಾ ಅಲ್ಲಿಂದ ಬಂದವರೇ ಆಗಿದ್ದಾರೆ. ಅ.ನ. ಸುಬ್ಬರಾವ್‌ರವರು ಚಿತ್ರಕಲೆಯ ಆ ಸಂದರ್ಭದ ಎಲ್ಲ ಸಾಧ್ಯತೆಗಳನ್ನು ಅರಿತಿದ್ದರು. ತಮ್ಮ ದೃಶ್ಯ ಸಾಹಿತ್ಯದ ಬರವಣಿಗೆಗಳೇ




ಚಿತ್ರ: 19. 'ಯಕ್ಷ-ಯಕ್ಷಿ', 1990-1991, ಮಾಧ್ಯಮ : ಟೆರಾಕೋಟಾ ಭಿತ್ತಿ ಶಿಲ್ಪ.



ಚಿತ್ರ: 20. 'Youth Spirit', ಆಕಾರ : 18x6 ಇಂಚುಗಳು, ಮಾಧ್ಯಮ : ಪ್ಲಾಸ್ಟರ್ ಆಫ್ ಪ್ಯಾರೀಸ್, 1986–87.

ಅಲ್ಲದೆ ವಿಚಾರಪೂರ್ಣ ಮಾತು, ಸಭೆ ಸಮಾರಂಭಗಳ ಸಂದರ್ಭದ ಭಾಷಣಗಳಿಂದಲೂ ತಮ್ಮ ವಿದ್ಯಾರ್ಥಿಗಳ ಕಲಿಕೆಯನ್ನು ಪ್ರಭಾವಿಸುತ್ತಿದ್ದರು. ಗಾಂಧಿಮಾರ್ಗದ ಅನುಯಾಯಿಯಾದ ಅವರು ವಿದೇಶಿ ಬಣ್ಣಗಳಿಗಿಂತಲೂ ದೇಶೀ ಬಣ್ಣಗಳನ್ನೇ ತಯಾರಿಸಿ ಉಪಯೋಗಿಸುತ್ತಿದ್ದದು ಅಸಾಮಾನ್ಯ ನಡೆಯೇ ಸರಿ. ಇವೆಲ್ಲಾ ವೆಂಕಟಾಚಲಪತಿಯಂಥವರನ್ನು ಪ್ರಭಾವಿಸಿವೆ. ಕಲೆಯನ್ನು ಬದುಕಲು ರೂಢಿಸಿಕೊಂಡ ಸುಬ್ಬರಾಯರು ತಮ್ಮಲ್ಲಿಗೆ ಬಂದವರೆಲ್ಲಾ ಬದುಕನ್ನು ಸುಂದರವಾಗಿಸಿಕೊಳ್ಳುವಂತೆ ನೋಡಿಕೊಂಡರು.



ಚಿತ್ರ: 21. SAARC ಸಮ್ಮೇಳನ 1986ರ ಅಂಗವಾಗಿ ಚಿತ್ರಕಲಾ ಪರಿಷತ್ತಿನಲ್ಲಿ ನಡೆದ ಅಖಿಲ ಭಾರತ ಶಿಲ್ಪ ಶಿಬಿರದಲ್ಲಿ ವೆಂಕಟಾಚಲಪತಿಯವರಿಂದ ಮೂಡಿ ಬಂದ ಒಂದು ಶಿಲ್ಪ. ಮಾಧ್ಯಮ : ಮೈಸೂರು ಶಿಲೆ, ಸಂಗ್ರಹ : ಚಿತ್ರಕಲಾ ಪರಿಷತ್ತು.

ನಾಲ್ಕು ಗೋಡೆಗಳ ಆವರಣದಾಚೆ...

1966ರ ಕಾಲಕ್ಕೆ ವೆಂಕಟಾಚಲಪತಿ ಕಲಾ ಮಂದಿರದ ನಾಲ್ಕುಗೋಡೆಗಳ ಆವರಣ ದಾಟುವಂತೆ ಸುಬ್ಬರಾಯರು ಹಲವು ಸಂದರ್ಭಗಳನ್ನು ಸೃಷ್ಟಿಸಿದರು. ಜತೆಜತೆಗೇ ಆರ್.ವಿ. ಶಿಕ್ಷಕರ ಕಾಲೇಜಿನಲ್ಲಿ ಶಿಕ್ಷಕರ ಬೋಧನೆಗೆ ಪೂರಕವಾಗಿ ನೆರವಾಗುವ ಕಲಿಕಾ ಸಮಾಗ್ರಿಯ ಮಾದರಿಗಳ ಚಿತ್ರರೂಪದ ಚಾರ್ಟ್‌ಗಳ ರಚನೆಯಲ್ಲಿ ವೆಂಕಟಾಚಲಪತಿ ಬಿಡುವಿನ ಸಮಯಗಳಲ್ಲಿ ತೊಡಗಿಕೊಂಡರು.






ಚಿತ್ರ: 22.
ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಬೆಳ್ಳಿಹಬ್ಬದ (1989) ಸಂದರ್ಭದಲ್ಲಿ ಶಿಲ್ಪಿವಾದಿರಾಜರ ನಿರ್ದೇಶನದಲ್ಲಿ ಮೂಡಿಬಂದ ಸಮೂಹ ಶಿಲ್ಪ. ಇದನ್ನು ಸಾರ್ವಜನಿಕ ಶಿಲ್ಪ ಎನ್ನಬಹುದು. ಏಕೆಂದರೆ ಈ ಶಿಲ್ಪದ ನಡುವೆ, ಅತ್ತ ಇತ್ತ, ಜನರು ಮಕ್ಕಳು ನಡೆದಾಡಬಹುದು.
ಆಟದ ಅನುಭವ ಪಡೆಯಬಹುದು. ಈ ಶಿಲ್ಪ ಸಮೂಹದಲ್ಲಿ ಡಿ. ವಾದಿರಾಜ್, ಆರ್.ಎಂ. ಹಡಪದ್, ವೆಂಕಟಾಚಲಪತಿ, ಸೋಮಸುಂದರ್, ಜಾನ್‌ದೇವರಾಜ್, ಕನಕಾಮೂರ್ತಿ; ಕೆ.ವಿ. ಸೋಮಶೇಖರ್, ಎನ್.ಹೆಚ್. ಕುಲಕರ್ಣಿ, ಜಿ.ಎಲ್. ಭಟ್, ಎಂ.ಸಿ. ರಮೇಶ್, ಅಶೋಕ ಗುಡಿಗಾರ್ ಶಣ್ಮುಖಸುಂದರಂ ಮೊದಲಾದವರ ಶಿಲ್ಪಗಳು ಸಂಕಲನಗೊಂಡಿವೆ. ಈ ಶಿಲ್ಪ ಸಮೂಹದ ಕೆಲವೇ ಅಡಿಗಳ ದೂರದಲ್ಲಿ ಶ್ಯಾಮ್ ಸುಂದರ್‌ರವರ ಶಿಲ್ಪ ಪ್ರತ್ಯೇಕವಾಗಿ ಅಂತರ ಕಾಯ್ದುಕೊಂಡು ಪ್ರತಿಷ್ಠಾಪಿಸಲ್ಪಟ್ಟಿತ್ತು! ಆದರೆ ಇದು ಕೆಲವರು ಭಾವಿಸಿರುವಂತೆ ಇನ್‌ಸ್ಟಾಲೇಷನ್ ಕಲೆ ಅಲ್ಲ ಇದೊಂದು ಸಾರ್ವಜನಿಕ ಶಿಲ್ಪ. ಅದು ಮುಖ್ಯ ರಸ್ತೆಯಿಂದ ಜನರ ಕಣ್ಣಿಗೆ ಕಾಣದಂತಹ ಸ್ಥಿತಿಯಲ್ಲಿ ಇರುವುದರ ಹಿಂದೆ ಸಮಕಾಲೀನ ಕಲೆಯ ವಿರೋಧಿಗಳ ರಾಜಕಾರಣವಿದೆ.



1966ರಲ್ಲಿ ಅ.ನ. ಸುಬ್ಬರಾವ್‌ರವರ ವಿರಾಟ್ ಸ್ವರೂಪದ ನೆರವಿನಡಿ ಮೂರೇ ತಿಂಗಳಲ್ಲಿ ಕಲೆಯ ಹೈಯರ್ ಗ್ರೇಡ್ ಪರೀಕ್ಷೆಯಲ್ಲಿ ಉತ್ತಮ ದರ್ಜೆಯಲ್ಲಿ ವೆಂಕಟಾಚಲಪತಿ ಪಾಸಾದರು. ಆ ಸಂದರ್ಭದ ಅವರ ಮಾತುಗಳನ್ನು ಗಮನಿಸಿ. "ಮೂರೇ ತಿಂಗಳಲ್ಲಿ ಹೈಯರ್ ಗ್ರೇಡ್ ಪರೀಕ್ಷೆಯಲ್ಲಿ "ಡಿಸ್ಟಿಂಕ್ಷನ್"ನಲ್ಲಿ ಪಾಸಾದೆ. ಇದು ನನ್ನಲ್ಲಿ ಹೆಚ್ಚಿನ ಕಲಾಭಿರುಚಿಗೆ ಕಾರಣವಾಯಿತು. 3 ತಿಂಗಳೂ ನನ್ನನ್ನು ಸುಬ್ಬರಾವ್‌ರವರು ಸಾಕಿದರು. ಅಲ್ಲಿ ಇಲ್ಲಿ ಸಣ್ಣ ಪುಟ್ಟ ಕೆಲಸಗಳನ್ನು ಕೊಡಿಸಿ ನನಗೆ ಮಾರ್ಗದರ್ಶನ ಮಾಡಿದರು." ಎಂದು ನಮ್ರತೆಯಿಂದ ನೆನಪು ಮಾಡಿಕೊಂಡಿದ್ದಾರೆ. 1968ರ ಹೊತ್ತಿಗೆ ಕಲಾಮಂದಿರದಲ್ಲಿ ವಿದ್ಯಾರ್ಥಿಯಾಗಿದ್ದವರು ಜನಾರ್ಧನರಾವ್. ರಕ್ಷಣಾ ಇಲಾಖೆಯಲ್ಲಿ ಕಲಾವಿದರಾಗಿದ್ದು ಇನ್ನಷ್ಟು ಕಲಿಯುವ ಉತ್ಸಾಹದಿಂದ ಕಲಾಮಂದಿರದಲ್ಲಿದ್ದರು. ಅವರಿಗೆ ಶಿಲ್ಪಿಯಾಗಿದ್ದ ಎಲ್.ಪಿ. ಅಂಚನ್ ಪರಿಚಯವಿದ್ದರು. ಅಂಚನ್‌ರವರು ಆಗ ವಿಶ್ವೇಶ್ವರಯ್ಯ ಕೈಗಾರಿಕೆ ಮತ್ತು ತಾಂತ್ರಿಕ ಮ್ಯೂಸಿಯಂನಲ್ಲಿ ಕಲಾವಿದರಾಗಿ ಕೆಲಸ ಮಾಡುತ್ತಿದ್ದವರು. ಹೀಗೆ ಜನಾರ್ಧನರಾವ್ ಹಾಗೂ ಅಂಚನ್‌ರವರ ಪರಸ್ಪರ ಪರಿಚಯ ವೆಂಕಟಾಚಲಪತಿಯವರು ಮ್ಯೂಸಿಯಂನಲ್ಲಿ ತಾತ್ಕಾಲಿಕವಾಗಿ ಕೆಲಸ ಮಾಡುವ ಅವಕಾಶವನ್ನು ಸೃಷ್ಟಿಸಿತು. ಅದೊಂದು ವಿಶೇಷ ಅವಕಾಶವೂ ಹೌದು! ಆ ಸಂದರ್ಭದಲ್ಲಿ ಮ್ಯೂಸಿಯಂನಲ್ಲಿ ಜನಪ್ರಿಯ ವಿಜ್ಞಾನ ಶೀರ್ಷಿಕೆಯಡಿ ಗ್ಯಾಲರಿಯೊಂದನ್ನು ರೂಪಿಸುತ್ತಿದ್ದರು. ವಿಶಿಷ್ಟ ದೃಶ್ಯ ಲೋಕದ ಅದು ವಿಜ್ಞಾನ ಮತ್ತು ಕಲೆಗಳ ಸಂಗಮದಂತಹ ನಿರ್ಮಾಣ. ಅಲ್ಲಿನ ದೃಶ್ಯ ಮಾದರಿಗಳನ್ನು ಡೈ ರಾಮಾ ಮಾಡುವ ಪ್ರಕ್ರಿಯೆ ನಡೆದಿತ್ತು. ಅಂದರೆ ಪ್ರದರ್ಶಿತ ಮಾದರಿಯು ವೀಕ್ಷಕರಿಗೆ ವಿಶಿಷ್ಟವಾಗಿ ಕಾಣುವ – ಆಕರ್ಷಿಸುವ ದೃಶ್ಯಲೋಕ. ಮಾದರಿಯು ಏಕಕಾಲಕ್ಕೆ 3ಡಿ ಶಿಲ್ಪ, ಅರ್ಧ ಉಬ್ಬು ಶಿಲ್ಪ, ಹಾಗೂ ವರ್ಣಚಿತ್ರ ಮಾಧ್ಯಮಗಳನ್ನೂ ದುಡಿಸಿಕೊಂಡು **perspective** ಮೂಲದ ದೂರವನ್ನು ಸಾಧಿಸಿಕೊಂಡು ವೀಕ್ಷಕರನ್ನು ಆಕರ್ಷಿಸುವ ಎಲ್ಲ ಲಕ್ಷಣಗಳನ್ನೂ ಅರಗಿಸಿಕೊಂಡಿತ್ತು.



ಚಿತ್ರ: 23. 'Environmental sculpture' medium : Magadi granite (pink) 2012.



ರೈಲ್ವೆಯ ಅಂಚೆಯನ್ನು ಸಾಗಣೆ ಮಾಡುವ ವಿಷಯವೂ ಅಲ್ಲಿತ್ತು. ರೈಲ್ವೇ ಬೋಗಿಗಳು, ರೈಲು ನಿಲ್ದಾಣದ ಮುಂಭಾಗ, ಅಲ್ಲೆಲ್ಲಾ ಗಡಿಬಿಡಿಯಿಂದ ಓಡಾಡುವ ಜನ ಜಂಗುಳಿ, ಅಂಚೆ ಇಲಾಖೆಯ ಕಾರ್ಮಿಕರು ಇತ್ಯಾದಿ ರೂಪಗಳು, 3ಡಿಯಲ್ಲಿ ಟೆರಾಕೋಟಾ ಶಿಲ್ಪಗಳು, ರಿಲೀಫ್ ಶಿಲ್ಪಗಳು (ಅರ್ಧ/ಉಬ್ಬು ಶಿಲ್ಪಗಳು) ಪೂರ್ಣಗೊಂಡನಂತರ ಅವುಗಳನ್ನು ನಿರ್ದಿಷ್ಟ ಸ್ಥಳದಲ್ಲಿ ಹೊಂದಿಸಿದ ನಂತರ ಆ ರೂಪಗಳಿಗೆ ಪೂರಕವಾದ ಭೂದೃಶ್ಯಗಳನ್ನು ಬಣ್ಣಗಳಲ್ಲಿ ಸೃಷ್ಟಿಸಬೇಕಾಗಿತ್ತು. ಈ ಹಿನ್ನೆಲೆಯಲ್ಲಿ ವೆಂಕಟಾಚಲಪತಿಯವರಿಗೆ ಹಲವು ರೀತಿಯ ಕೆಲಸಗಳಿರುತ್ತಿದ್ದವು.

ವೆಂಕಟಾಚಲಪತಿಯವರು ತಮ್ಮ ಮುಂದಿನ ದಿನಗಳ ಶಿಲ್ಪ ಸೃಷ್ಟಿಗೆ ಪೂರಕವಾದ

ಹಲವು ಸಾಂಪ್ರಾದಾಯಿಕ ಮಾಧ್ಯಮಗಳ ಹೊಸರೀತಿಯ ಬಳಕೆಯನ್ನೂ ಅಲ್ಲಿ ತಿಳಿದರು. ಕೊಲ್ಕತ್ತದ ಬಿರ್ಲಾ ಕೈಗಾರಿಕಾ ಮತ್ತು ತಾಂತ್ರಿಕ ಮ್ಯೂಸಿಯಂನ ಮಾಡೆಲರ್ ಜಯಂತುಪಾಲ್ ಸಹ ಬೆಂಗಳೂರಿನ ಮ್ಯೂಸಿಯಂಗೆ ಆಹ್ವಾನಿತರಾಗಿ ಬಂದಿದ್ದರು. ಪಶ್ಚಿಮ ಬಂಗಾಳದಲ್ಲಿ ಟೆರಾಕೋಟಾ ಶಿಲ್ಪಗಳ ಸಂಯೋಜನೆಯ ದೇವಾಲಯಗಳೇ ಇವೆ. ವಿಷ್ಣುಪುರ್ ಗ್ರಾಮವು ಅಲ್ಲಿನ ಟೆರಾಕೋಟಾ ಇಟ್ಟಿಗೆಗಳಂತಹ ಉಬ್ಬುಶಿಲ್ಪಗಳಿಗಾಗಿ ಖ್ಯಾತವಾಗಿದೆ. ಹಾಗೆಯೇ ವೆಂಕಟಾಚಲಪತಿಯವರು ಹೇಳುವಂತೆ ಆ ರಾಜ್ಯದ ಕೃಷ್ಣನಗರ್ ಟೆರಾಕೋಟಾ ಶೈಲಿಯಲ್ಲೂ ಶಿಲ್ಪಗಳನ್ನು ಮಾಡುವುದರಲ್ಲಿ ಜಯಂತುಪಾಲ್ ನಿಪುಣರು. ಅವರ ಕುಶಲತೆ ತಿಳಿಯುವ ವಿಶಿಷ್ಟ ಸಂದರ್ಭ ವೆಂಕಟಾಚಲಪತಿಯವರಿಗೆ ಮ್ಯೂಸಿಯಂನಲ್ಲಿ ಸೃಷ್ಟಿಯಾಗಿತ್ತು!



ಚಿತ್ರ: 24. ನಾಗಪುರದ ದಕ್ಷಿಣ ಕೇಂದ್ರ ಸಾಂಸ್ಕೃತಿಕ ವಲಯದ ಆವರಣದಲ್ಲಿ ನಡೆದ ಅಖಿಲ ಭಾರತ ಶಿಲ್ಪ ಶಿಬಿರದಲ್ಲಿ ವೆಂಕಟಾಚಲಪತಿಯವರಿಂದ ಮೂಡಿ ಬಂದ ಶಿಲ್ಪ. ಮಾಧ್ಯಮ ಕಂದು ಬಣ್ಣದ ಅಮೃತ ಶಿಲೆ, ಕಾಂಗಾನ್ (ಮಹಾರಾಷ್ಟ್ರ), 1994.

ಶಿಲ್ಪಕಲಾ ಶಿಬಿರದಲ್ಲಿ ಮೂಡಿಬಂದ ಶಿಲ್ಪ. ಎತ್ತರ : 7
ಅಡಿ. ಮಾಧ್ಯಮ : ಫೈಬರ್ ಗಾಜು. 2004.



ಜಯಂತುಪಾಲ್‌ರವರು ಮಾಡಿದ ಮಣ್ಣಿನ 3 ಅಂಗುಲಗಳಿಂದ 12 ಅಂಗುಲಗಳ ಎತ್ತರದ ಶಿಲ್ಪಗಳನ್ನು ವಿಶಿಷ್ಟ ರೀತಿಯಲ್ಲಿ ಶಾಖ ನೀಡಿ ಟೆರಾಕೋಟಾವಾಗಿಸುವುದರಲ್ಲಿ


ವೆಂಕಟಾಚಲಪತಿಯವರೂ ನೆರವಾಗುತ್ತಿದ್ದರು. ಟೆರಾಕೋಟಾ ತಾಂತ್ರಿಕ ಅಂಶಗಳನ್ನೂ ತಿಳಿಯುವ ಅವಕಾಶ ಅದು. ಜಯಂತುಪಾಲ್‌ರವರ ಟೆರಾಕೋಟಾ ತಯಾರಿಕಾ ವಿಧಾನ ವಿಶಿಷ್ಟ. ಹಾಗೆ ನೋಡಿದರೆ ಇಡೀ ಭಾರತದ ಹಲವೆಡೆ ಹಲವು ವಿಧಾನಗಳಿರುವ ಸಾಧ್ಯತೆಗಳಿವೆ. ಪಾಲ್‌ರವರು ಅತಿ ಸರಳ ರೀತಿಯಲ್ಲಿ ಫಲಿತಾಂಶವನ್ನು ಸಾಧಿಸುತ್ತಿದ್ದರು. ನೆಲಮಟ್ಟದಿಂದ ಕೆಳಭಾಗ ಅಗೆದು ಹಳ್ಳ ನಿರ್ಮಿಸುತ್ತಿದ್ದರು. ನಂತರ ಗಾಳಿಗಾಗಿ ಬೇರೆ ರಂದ್ರ ಕೊರೆದು ಕೆಳಭಾಗಕ್ಕೆ ಸೇರಿಸುತ್ತಿದ್ದರು. ಆ ಭಾಗದಲ್ಲಿ ಕಬ್ಬಿಣದ

ಸರಳುಗಳನ್ನು ಜೋಡಿಸಿ ಅವುಗಳ ಮೇಲೆ ಬೆರಣಿ, ಇದ್ದಿಲುಗಳ ಒಂದೊಂದು ಪದರ ಏರ್ಪಡಿಸಿ ಮಣ್ಣಿನ ಶಿಲ್ಪಗಳನ್ನು ಇಡಲಾಗುತ್ತಿತ್ತು. ಮತ್ತೆ ಅವುಗಳ ಮೇಲೆ ಬೆರಣಿ ಇದ್ದಿಲುಗಳ ಪದರಗಳನ್ನು ಏರ್ಪಡಿಸಿ ಎಲ್ಲವನ್ನೂ ಒಡೆದ ಹೆಂಚು ಅಥವಾ ಮಡಕೆಗಳಿಂದ ಮುಚ್ಚಲಾಗುತ್ತಿತ್ತು. ಮೇಲ್ಭಾಗದಲ್ಲಿ ಹಸಿಮಣ್ಣಿನಿಂದ ಸೀಲ್ ಮಾಡಿದ ನಂತರ ಪಕ್ಕದ ಕಿಂಡಿಯಿಂದ ಒಳಕ್ಕೆ ಬೆಂಕಿಯನ್ನು ಹಾಯಿಸಲಾಗುತ್ತಿತ್ತು. ಆ ನಂತರ ಕಿಂಡಿಯನ್ನು ಗಾಳಿ ಹೊರಬರದಂತೆ ಮುಚ್ಚಲಾಗುತ್ತಿತ್ತು. ಇಡೀ ರಾತ್ರಿ ಒಳಭಾಗದ ಶಿಲ್ಪಗಳು ಸುಟ್ಟು ಟೆರಾಕೋಟಾ ಶಿಲ್ಪಗಳಾಗುತ್ತಿದ್ದವು. ವಿಶಿಷ್ಟ ಟೆರಾಕೋಟಾ ಮಾಧ್ಯಮದ ಪ್ರಕ್ರಿಯೆಯ ಮೊದಲ ದರ್ಶನ ವೆಂಕಟಾಚಲಪತಿಯವರಿಗೆ! ಪಾಲ್‌ರವರ ಸೂಚನೆಗಳಂತೆ ಇವರೂ ಕೆಲವು ಶಿಲ್ಪಗಳನ್ನು ಆ ಮಾಧ್ಯಮದಲ್ಲಿ ಮಾಡಿದರು. ಆ ಅನುಭವ ಮುಂದಿನ ದಿನಗಳಲ್ಲಿ ವೆಂಕಟಾಚಲಪತಿಯವರು ಭಿತ್ತಿ ಶಿಲ್ಪಗಳನ್ನು ದೊಡ್ಡ ರೀತಿಯಲ್ಲಿ **(Mural)** ಮಾಡಲು ನೆರವಾಯಿತು.

ಕಲಾಮಂದಿರದಲ್ಲಿ ಕಲಿಸುತ್ತಿದ್ದವರಲ್ಲಿ ಒಬ್ಬರಾಗಿದ್ದ ಕಂಠಪ್ಪಗೌಡರು **sketch** ಮಾಡುವ ರೀತಿ, ಅದರ ಅಗತ್ಯ, ಬಿಂದು, ರೇಖೆ, ಮೈವಳಿಕೆ **(texture)** ಇತ್ಯಾದಿಗಳನ್ನು ಕಲಿಸುತ್ತಿದ್ದರು.[9] ಅ.ನ. ಸುಬ್ಬರಾವ್‌ರವರು 'ದೃಗ್ದರ್ಶನ' ಕೃತಿ (1973) ಪ್ರಕಟಿಸಿದವರು.[10] ಭೂದೃಶ್ಯ ಪ್ರಕಾರಗಳಲ್ಲಿ **perpective** ನೆಲೆಯ ಹಿನ್ನೆಲೆ ಮುನ್ನೆಲೆಗಳನ್ನು ಪರಿಣಾಮಕಾರೀ ವಿಧಾನಗಳಲ್ಲಿ ಕಲಿಸಿದ್ದಾರೆ. ಚಲಪತಿಯವರ ರೇಖಾಚಿತ್ರಗಳಲ್ಲಿ, ಶಿಲ್ಪಗಳ ಕಲ್ಪನೆಯಲ್ಲಿ – ಗಾತ್ರ ರೇಖಾ ರೂಪ ಸಂರಚನೆಗಳಲ್ಲಿ ಅ.ನ. ಸುಬ್ಬರಾವ್‌ರವರ ದೃಷ್ಟಿಯ ಹೊಳಹುಗಳನ್ನು ಗುರುತಿಸಬಹುದು.

1969–70 ವೆಂಕಟಾಚಲಪತಿಯವರ ದೃಶ್ಯಕಲಾ ಕಲಿಕೆಯ ಪುಟಗಳಲ್ಲಿ ಒಂದು ವಿಶಿಷ್ಟ ಸಂದರ್ಭ. ಕಲಾಮಂದಿರದಲ್ಲಿ ಚಿತ್ರಕಲೆಯ ಡಿಪ್ಲೊಮಾಗೆ ಅಭ್ಯಾಸ ಮಾಡುತ್ತಿದ್ದಾಗಲೇ ಬೆಂಗಳೂರಿನ ವಿಶ್ವೇಶ್ವರಯ್ಯ ಕೈಗಾರಿಕೆ ಮತ್ತು ತಾಂತ್ರಿಕ ಮ್ಯೂಸಿಯಂನಲ್ಲಿ ಮಾದರಿಗಳನ್ನು ರೂಪಿಸುವ ಹುದ್ದೆಯೊಂದಕ್ಕೆ ಅರ್ಜಿಹಾಕುವ ಅವಕಾಶ. 1970ರ ಒಂದು ದಿನ ಚಿತ್ರಕಲೆಯ ಡಿಪ್ಲೊಮಾ ಪರೀಕ್ಷೆಯ ದಿನದಂದೇ


ಚಿತ್ರ 26. ಹಂಪಿ ಕನ್ನಡ ವಿಶ್ವವಿದ್ಯಾಲಯದ ಅಖಿಲ ಭಾರತ ಶಿಲ್ಪ ಕಲಾಶಿಬಿರದಲ್ಲಿ ನಿರ್ದೇಶಕರೂ ಆಗಿದ್ದ ವೆಂಕಟಾಚಲಪತಿಯವರು ಸೃಷ್ಟಿಸಿದ ಶಿಲ್ಪ, 2010. ಮಾಧ್ಯಮ : ಬಾದಾಮಿಯ ಮರಳುಗಲ್ಲು.




ಮ್ಯೂಸಿಯಂನ ಕೆಲಸದ ಆಯ್ಕೆಗೆ ಸಂದರ್ಶನವೂ ಇದ್ದಿತು. ಸಮೃದ್ಧಿ ಇದ್ದ ಕಡೆ ಮಾತ್ರ ನಾಗರೀಕತೆಗಳು ಬೆಳೆದು ಬಂದಿವೆಯಲ್ಲವೆ? 'ಸುಬ್ಬರಾಯರ ಪ್ರಭಾವ' ವೆಂಕಟಾಚಲಪತಿ ಚಿತ್ರಕಲೆಯ ಪರೀಕ್ಷೆಗೆ ಗೈರುಹಾಜರಾಗಿ ಮ್ಯೂಸಿಯಂನ ಸಂದರ್ಶನ ಅವಧಿಗೆ ಹಾಜಾರಾದರು; ಆಯ್ಕೆಯೂ ಆದರು! ದಿನಾಂಕ 16 ಏಪ್ರಿಲ್, 1670 ರಂದು ಮ್ಯೂಸಿಯಂನ **modeller** ಹುದ್ದೆಯ ಕೆಲಸಕ್ಕೆ ಸೇರಿಕೊಂಡರು. ತೆರೆದ ಮ್ಯೂಸಿಯಂನಂತಿದ್ದ ದೇವನ ಹಳ್ಳಿಯ ಸಂಪ್ರದಾಯ ಹಿನ್ನೆಲೆಯ ವೆಂಕಟಾಚಲಪತಿ ಗೋಡೆಗಳಿರುವ ಮ್ಯೂಸಿಯಂಗೆ ಸೇರಿಕೊಂಡರು! ಹಾಗಾಗಿಯೂ ಅವರು ಕಲಾಮಂದಿರ ಹಾಗೂ ಚಿತ್ರಕಲೆಯನ್ನು ಬಿಡಲಿಲ್ಲ. ಕಲಾಮಂದಿರಕ್ಕೆ ಪ್ರತಿದಿನದ ಹಾಜರಿ ಅಗತ್ಯವೇನೂ ಆಗಿರಲಿಲ್ಲ; ಕಲಿಯುವಿಕೆಯಲ್ಲಿ ಪ್ರಗತಿಯ ಸಾಧನೆ ಮುಖ್ಯವಾಗಿ ಪರಿಗಣಿಸಲ್ಪಡುತ್ತಿತ್ತು.

ದೇವನಹಳ್ಳಿಯಲ್ಲಿ ವೆಂಕಟಾಚಲಪತಿ ಕಲಿತಿದ್ದ ಸಂಪ್ರದಾಯ ಶಿಲ್ಪದ ವ್ಯಾಕರಣ ಮ್ಯೂಸಿಯಂನಲ್ಲಿ ತನ್ನ ವ್ಯಾಪ್ತಿಯ ಹೊಸತನವನ್ನು ಹೆಚ್ಚಿಸಿಕೊಂಡಿತು. ಹೊಸ ಹೊಸ ಮಾಧ್ಯಮಗಳು ಸಾಧ್ಯತೆಗಳ ಹಲವು ಹಾದಿಗಳಿಗೆ ಕುತೂಹಲದಿಂದ ಮುಖಾಮುಖಿಯಾಗುವ ಸಂದರ್ಭ ಅದು.

ಚಿತ್ರ: 27. 'Harmony - viii', 2007
ಆಕಾರ : 51x11 ಇಂಚುಗಳು,
ಮಾಧ್ಯಮ : ಕಂಚು, 2011





ಚಿತ್ರ: 28. HARMONY-20, 2010, ಆಕಾರ : 7X4 ಅಡಿ.
ಮಾಧ್ಯಮ: ಮೈಸೂರು ಶಿಲೆ. ಸಂಗ್ರಹ : ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ.

1972ರಲ್ಲಿ ಕಲಾಮಂದಿರದ ಸುಬ್ಬರಾಯರ ಆಶ್ರಯದಲ್ಲಿ ಮಹತ್ವಾಕಾಂಕ್ಷೆಯ ಚಿತ್ರಕಲೆಯ ಡಿಪ್ಲೊಮೋ ಪಡೆದ ವೆಂಕಟಾಚಲಪತಿಯವರು ಸಂತಸಪಟ್ಟರು. ಆ ಹಿಂದೆ ದೇವನಹಳ್ಳಿಯ ಆಚಾರ್ಯರ ಮಾರ್ಗದರ್ಶನದಲ್ಲಿ ನೋಡಿದ್ದು ಮಾಡಿದ್ದು ಮ್ಯೂಸಿಯಂನಲ್ಲಿ ಉಪಯುಕ್ತವಾಯಿತು. ಅಲ್ಲಿನ ಪೂರ್ಣ ಶಿಲ್ಪಗಳ ಅಭ್ಯಾಸ ಮ್ಯೂಸಿಯಂನ ಮೂರು ಆಯಾಮಗಳ ಶಿಲ್ಪಗಳು **(3D)**, ಭಿತ್ತಿ ಶಿಲ್ಪಗಳು ಇತ್ಯಾದಿಗಳ ರಚನೆಯಲ್ಲಿ ನೆರವಿಗೆ ಬಂದಿತು. ಶಿಲ್ಪಕಲೆಯ ಹಲವು ಆಯಾಮಗಳೇ ಅಲ್ಲದೆ ಸಾಧ್ಯತೆಗಳನ್ನೂ ಅನ್ವೇಷಿಸುವ ಕ್ಷೇತ್ರ ಮ್ಯೂಸಿಯಂ ಆಗಿದ್ದುದರಿಂದ ಸಹಜವಾಗಿಯೇ ವೆಂಕಟಾಚಲಪತಿ ಶಿಲ್ಪಕಲೆಯ ಪ್ರಕಾರಕ್ಕೆ ಹೆಚ್ಚು ಒಲಿಯಲಾರಂಭಿಸಿದರು. ಶಿಲ್ಪಕಲೆಯನ್ನು ತಮ್ಮ ಪ್ರಮುಖ ಮಾಧ್ಯಮವನ್ನಾಗಿಸಿಕೊಳ್ಳುವ ಉದ್ದೇಶದ ಹಾದಿಯಲ್ಲಿ ಹೆಜ್ಜೆ ಇಡಲಾರಂಭಿಸಿದರು. 1974ರಲ್ಲಿ ಕಲಾಮಂದಿರದಿಂದ **modelling**ನಲ್ಲಿ ಡಿಪ್ಲೊಮಾ ಪಡೆಯುವ ಉದ್ದೇಶದಿಂದ ಅಲ್ಲಿ ವಾದಿರಾಜರ ಮಾರ್ಗದರ್ಶನದಲ್ಲಿ ಕಲಿಯಲಾರಂಭಿಸಿದರು. 1977ರಲ್ಲಿ ಡಿಪ್ಲೊಮಾವನ್ನು ಮೊದಲ ರ್‍ಯಾಂಕಿನಲ್ಲಿ ಪಡೆದರು.

ಹೀಗೆ ದಿನಗಳು ಉರುಳಿದವು. ಭಾವಶಿಲ್ಪ ಮತ್ತು ಪ್ರಕೃತಿಯ ರೂಪಗಳೊಂದಿಗೆ ಆಡಿದ ಆಟದಂತಹ ಹಲವು ಶಿಲ್ಪಗಳು ಆಗಾಗ ವೆಂಕಟಾಚಲಪತಿಯವರಿಂದ ಮೂಡಿಬಂದವು. ಶಿಲೆ, ಫೈಬರ್, ಕಂಚು ಇತ್ಯಾದಿ ಮಾಧ್ಯಮಗಳಲ್ಲಿಯೇ ಅಲ್ಲದೆ ಪ್ಲಾಸ್ಟರ್ ಆಫ್ ಪ್ಯಾರೀಸ್ ಮಾಧ್ಯಮದಲ್ಲಿಯೂ ನೇರವಾಗಿ ರೂಪಗಳನ್ನು ರೂಪಿಸುತ್ತಿದ್ದರು.

1979ರಲ್ಲಿ ವೆಂಕಟಾಚಲಪತಿಯವರ ವಿವಾಹವೂ ನಡೆಯಿತು. ಮ್ಯೂಸಿಯಂನಲ್ಲಿನ ವಾತಾವರಣ ರಾಜ್‌ಕುಮಾರ್ ಸಿನಿಮಾಗಳ ಕುಟುಂಬದಂತೆ ಇರುತ್ತಿತ್ತು. ಅಮಿತ್ ಸರ್ಕಾರ್‌ರವರು **VITM**ನ ನಿರ್ದೇಶಕರಾಗಿದ್ದ ಆ ದಿನಗಳಲ್ಲಿ ಅಲ್ಲಿ ಕೆಲಸ ಮಾಡುತ್ತಿದವರಿಗೆ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಸಲ್ಪಡುತ್ತಿದ್ದವು.

ದಸರೆಯ ಸಂದರ್ಭದಲ್ಲಿ ದುರ್ಗಾಪೂಜೆ ಮಾಡುವ ಪರಂಪರೆಯ ಬಂಗಾಳದಿಂದ ಅಮಿತ್ ಸರ್ಕಾರ್ ಬಂದವರಲ್ಲವೆ! ಮ್ಯೂಸಿಯಂನ ಕೊಲ್ಕತ್ತೆಯ ಕಲಾವಿದರು ದುರ್ಗಾ ಮೂರ್ತಿಯನ್ನು ಮಣ್ಣಿನಲ್ಲಿ ಮಾಡಿ ಅದಕ್ಕೆ ಬಣ್ಣ ಮತ್ತಿತರ ಅಲಂಕಾರ ಮಾಡುವ ವಿಧಾನ ನಮ್ಮ ಕಡೆಯವರಿಗೆ ಹೊಸದು.

ಪ್ರಾರಂಭದಲ್ಲಿ ಬಿದಿರಿನ ಕಟ್ಟಿಗೆಯ ಆರ್‌ಮೇಚರ್ ರಚಿಸಿ, ಅದಕ್ಕೆ ಪ್ರಮಾಣಬದ್ಧವಾಗಿ ಬತ್ತದ ಹುಲ್ಲು ಹೊದಿಸಿ ಕಟ್ಟುತ್ತಿದ್ದರು. ಆದರ ಮೇಲ್ಮೈಯಲ್ಲಿ ಜೇಡಿಮಣ್ಣು ಮತ್ತು ಬತ್ತದ ಒಣಪುಡಿ, ಹುಲ್ಲು ಸಮ್ಮಿಶ್ರ ಮಾಡಿದ ಮಣ್ಣಿನ ಮೇಲ್ಮೈಯಲ್ಲಿ ಮಾಡಲಿಂಗ್ ಮಾಡಿ ಮೂರ್ತಿಯನ್ನು ರೂಪಿಸಲಾಗುತ್ತಿತ್ತು. ಪುನಃ ಅದರ ಮೇಲೆ ಮಣ್ಣು ಮತ್ತು ಬತ್ತದ ಹೊಟ್ಟು ಸೇರಿಸಿ ಸಿದ್ಧಪಡಿಸಿದ ಮಣ್ಣಿನಲ್ಲಿ ಇನ್ನಷ್ಟು ಅಂದರೆ ಬಹುಶಃ ಮುಖ್ಯ ಅಲಂಕಾರ / ವಿವರಗಳನ್ನು ಮೂಡಿಸುತ್ತಿದ್ದರು. ಅಂತಿಮವಾಗಿ ಮಣ್ಣು ಮತ್ತು ಬತ್ತದ ನಯವಾದ ತೌಡನ್ನು ಮಿಶ್ರಮಾಡಿದ ಮಣ್ಣಿನಲ್ಲಿ ಅತಿ ಕುಶಲತೆಯ, ನಾಜೂಕಿನ ಅಲಂಕಾರ ಕೆಲಸಗಳನ್ನು ಮಾಡುತ್ತಿದ್ದರು. ಶಿಲ್ಪ ಒಣಗಿದ ಮೇಲೆ ಹುಣಿಸೆ ಬೀಜ

ತ್ರ: 29. 'Harmony - XIV', 2007, ಆಕಾರ: 17x12
ಂಚುಗಳು, ಮಾಧ್ಯಮ : ಮೈಸೂರು ಕಲ್ಲು ಮತ್ತು ಕಂಚು,
ಂಗ್ರಹ : ಮುಂಬಯಿಯ ಖಾಸಗಿ ಗ್ಯಾಲರಿ.



ಹುರಿದು ಎರಡು ಹೋಳುಗಳಾಗಿ ಒಡೆದು ನೀರಿನಲ್ಲಿ ಬೇಯಿಸುತ್ತಿದ್ದರು. ಬೆಂದ ವಿಶಿಷ್ಟ ಗಂಜಿಯು ಬಲು ಅಂಟು. ಅದರ ಜತೆಗೆ ಝಿಂಕ್ ಆಕ್ಸೈಡ್ ಸೇರಿಸಿ ಇಡೀ ಶಿಲ್ಪಕ್ಕೆ ಲೇಪಿಸಿ ನಯವಾದ ನಂತರ ಬಣ್ಣಗಳಿಂದ ಸೂಕ್ತ ರೀತಿಯಲ್ಲಿ ಅಲಂಕರಿಸುತ್ತಿದ್ದರು. ನಂತರ ದುರ್ಗಾಪೂಜೆಯ ದಿನ ಎಲ್ಲರೂ ಪೂಜೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಮ್ಯೂಸಿಯಂನಲ್ಲಿ ಹಲವು ನಾಟಕಗಳ ವಿಶೇಷ ಪ್ರದರ್ಶನಗಳೂ ನಡೆಯುತ್ತಿದ್ದವು. ದೃಶ್ಯಕಲೆಗೆ ಸಂಬಂಧಿಸಿದ ವಿಚಾರ ಸಂಕಿರಣಗಳೂ ಸಾಕಷ್ಟು ಆಸಕ್ತಿಯಿಂದಲೇ ಆಯೋಜಿತಗೊಂಡಿವೆ. ಮಕ್ಕಳಿಗಾಗಿ ಬೇಸಿಗೆಯಲ್ಲಿ ಚಿತ್ರಕಲೆ ಹಾಗೂ ಮಣ್ಣಿನ ಮಾದರಿಗಳನ್ನು ಮಾಡುವ ರೀತಿನೀತಿಗಳನ್ನು ಶಿಬಿರಗಳಲ್ಲಿ ಕಲಿಸಲಾಗುತ್ತಿತ್ತು.



ಚಿತ್ರ: 30. 'Harmony - IV', 2007, ಆಕಾರ: 17x11 ಇಂಚುಗಳು, ಮಾಧ್ಯಮ : ಕಂಚು.

ಆ ಸಂದರ್ಭದ ಖ್ಯಾತ ಶಿಲ್ಪಿ ಬಸ್ತಾರ್‌ನ ಜಯದೇವ ಬಾಗದ ಬೆಂಗಳೂರಿಗೆ ಬಂದಿದ್ದಾಗ ಬೆಲ್ ಲೋಹದ ಎರಕದ ಪ್ರಾತ್ಯಕ್ಷಿಕೆಯೊಂದನ್ನೂ ಆಯೋಜಿಸಲಾಗಿತ್ತು. ಹೀಗೆ ಹಲವಾರು ಸಂದರ್ಭಗಳು ಚಲಪತಿಯವರ ಭವಿಷ್ಯದ ಕಲ್ಪನೆಗಳಿಗೆ ಪೂರಕವಾಗುವ, ಮಾಧ್ಯಮಗಳನ್ನು ಹುಡುಕಿಕೊಳ್ಳುವ ಸಾಧ್ಯತೆಗಳನ್ನು ಮುಂದಿಟ್ಟವು; ಕಲಿಯುವ ಪ್ರಕ್ರಿಯೆ ನಡೆದೇ ಇತ್ತು.

ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ಮ್ಯೂಸಿಯಂ "ಒಂದು ವಿಶ್ವವಿದ್ಯಾಲಯವಾಗಿ ತೋರಿತು" ಎನ್ನುವ ವೆಂಕಟಾಚಲಪತಿ "ಅಲ್ಲಿ ನನಗೆ ನನ್ನ ಕಲಾ ವಿಭಾಗ ಒಂದು ದೇವಾಲಯವಿದ್ದಂತೆ, ಅಮಿತ್ ಸರ್ಕಾರ್, ಅಂಚನ್,



ಚಿತ್ರ: 31. 'Harmony - VI', 2007, ಆಕಾರ: 13x10 ಇಂಚುಗಳು, ಮಾಧ್ಯಮ : ಕಂಚು, 2011.

ಎಸ್. ದತ್ತ, ಮೊದಲಾದವರು ಒಬ್ಬೊಬ್ಬರೂ ಒಂದೊಂದು ವಿಷಯದಲ್ಲಿ ಪಾರಂಗತರಾಗಿದ್ದರು. ಅಮಿತ್ ಸರ್ಕಾರ್ ಭಿತ್ತಿಶಿಲ್ಪ / ಚಿತ್ರದಲ್ಲಿ: ಮಾಡೆಲಿಂಗ್‌ನಲ್ಲಿ ದತ್ತ ಹೇಗೆ ನಿಪುಣರೋ ಹಾಗೆಯೇ ಡೈರಾಮಾ ಮಾಡುವುದರಲ್ಲಿಯೂ ಗಟ್ಟಿಗರು. ಪುರಾತನ ಶಿಲ್ಪ, ಗಾರೆ ಶಿಲ್ಪ ಇತ್ಯಾದಿಗಳನ್ನು ಮಣ್ಣಿನಲ್ಲಿ ಮೌಲ್ಡ್ ಮಾಡಿ ಪ್ಲಾಸ್ಟರ್ ಕಾಸ್ಟ್ ಮಾಡುವುದು ನನ್ನ ಅನುಭವಕ್ಕೆ ಬಂದಿತು. ಅಮಿತ್ ಸರ್ಕಾರ್‌ರವರ ಸರಳತೆಯೇ ಅಲ್ಲದೆ ಭಿತ್ತಿಶಿಲ್ಪ ತಂತ್ರಗಳು ಸಾಕಷ್ಟು ಪ್ರಭಾವ ಬೀರಿದವು. ಆ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಭಿತ್ತಿಶಿಲ್ಪ ಮಾಡುವವರೇ ಇರಲಿಲ್ಲ. ಅಂತಹ ದಿನಗಳಲ್ಲಿ ಮೊದಲ ಬಾರಿಗೆ ಅಂದರೆ ಹೊಸದಾಗಿ ಫೈಬರ್ ಗಾಜು ಮಾಧ್ಯಮವನ್ನು ನಾನು ಬಳಸಿದ್ದೆ. ಮ್ಯೂಸಿಯಂ ಹಾಗೂ ಹಲವು ಗ್ಯಾಲರಿಗಳಲ್ಲಿ ಅನೇಕ ಮ್ಯೂರಲ್‌ಗಳನ್ನು ಮಾಡಿದ್ದೇವೆ. ಅಂಚನ್‌ರವರೂ ಸಹ ಮ್ಯೂರಲ್‌ಗಳನ್ನು ಮಾಡಿದ್ದಾರೆ." ಎಂದು ಸಂತಸದಿಂದ ಹೇಳಿಕೊಳ್ಳುತ್ತಾರೆ. ಇದೇ ಸಂದರ್ಭ, ಹೆಚ್ಚು ಹೆಚ್ಚು ಸ್ವಚ್ಛಂದ ಆಟದಂತಹ ಸೃಜನಶೀಲ ದೃಷ್ಟಿಯ ಶಿಲ್ಪಗಳು ವೆಂಕಟಾಚಲಪತಿಯವರಿಂದ ಹಲವು ಮಾಧ್ಯಮಗಳಲ್ಲಿ ಮೂಡಿಬಂದವು. ಕೆ.ಕೆ. ಹೆಬ್ಬಾರರು ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಅಧ್ಯಕ್ಷರಾಗಿ ಬಂದ ವರ್ಷ; ಸಮಕಾಲೀನ ಕಲೆಗೆ ಹೆಚ್ಚಿನ ಆಸಕ್ತಿ ಕಂಡುಬಂದಿತು.[11] ಹೊಸ ಪೀಳಿಗೆಯ ದೃಶ್ಯ ಕಲೆಯ ಅಭ್ಯಾಸಿಗಳು ನಾಳೆಗಳನ್ನು ಮಾಡುವವರಂತೆ ಕಂಡರು. ವೆಂಕಟಾಚಲಪತಿ ತಮ್ಮ 'ತಾಯಿ ಮತ್ತು ಮಗು' ಶಿಲ್ಪವನ್ನು ಅಕಾಡೆಮಿಯ ವಾರ್ಷಿಕ ಕಲಾ ಪ್ರದರ್ಶನಕ್ಕೆ ಕಳುಹಿಸಿಕೊಟ್ಟರು. ನೇರವಾಗಿ ಪ್ಲಾಸ್ಟರ್ ಆಫ್ ಪ್ಯಾರಿಸ್ ಮಾಧ್ಯಮದಿಂದ ಮೂಡಿ ಬಂದ ಶಿಲ್ಪ ಅದು. ಈ ಶಿಲ್ಪದ ಜತೆಗೇ **Sun Civilization** ಶೀರ್ಷಿಕೆಯದೂ ಇದ್ದತು. ಕಂಚಿನ ಮಾಧ್ಯಮದ ಸೃಷ್ಟಿ ಅದು. ಆ ಶಿಲ್ಪವನ್ನು ಲಲಿತ ಕಲಾ ಅಕಾಡೆಮಿ ತನ್ನ ಸಂಗ್ರಹಕ್ಕಾಗಿ ಖರೀದಿಸಿತು!


ಮರುವರ್ಷವೇ ಅಂದರೆ 1980ರಲ್ಲಿ ವೆಂಕಟಾಚಲಪತಿಯವರ 'ಸೂರ್ಯ–ರಾಹು' ಕಲ್ಲಿನ ಶಿಲ್ಪವು ರಾಜ್ಯ ಲಲಿತಕಲಾ ಅಕಾಡೆಮಿಯ ವಾರ್ಷಿಕ ಪ್ರದರ್ಶನದಲ್ಲಿ ಬಹುಮಾನಕ್ಕಾಗಿ ಆಯ್ಕೆಗೊಂಡಿತು.

ಮ್ಯೂಸಿಯಂನಲ್ಲಿ ವೆಂಕಟಾಚಲಪತಿಯವರ ಮಾದರಿಗಳನ್ನು, ಶಿಲ್ಪಗಳನ್ನು ನೋಡಿ ಹಲವರಿಗೆ ಸಂತೋಷವಾದದ್ದಿದೆ. ಅಲ್ಲಿಗೆ ಆಗಾಗ ಹಲವರು ಬಂದು ಹೋಗುತ್ತಿದ್ದರಷ್ಟೆ. ಗಣ್ಯಾತಿಗಣ್ಯ ಶಿಲ್ಪಿಗಳೂ, ಚಿತ್ರ ಕಲಾವಿದರೂ ವೆಂಕಟಾಚಲಪತಿಯವರ ಕುಶಲತೆಯನ್ನು ಗಮನಿಸಿ ಗುರುತಿಸಿ ಹೋಗಿದ್ದಾರೆ. ಒಮ್ಮೆ ನವದೆಹಲಿಯ ಖ್ಯಾತ ಶಿಲ್ಪಿ ರಾಮ್‌ಸುತಾರ್ ಸಹ ಇವರ ಶಿಲ್ಪ ಹಾಗೂ ಭಿತ್ತಿ ಶಿಲ್ಪಗಳನ್ನು ನೋಡಿ–ಕರೆಸಿ ಮೆಚ್ಚುಗೆ ತೋರಿ ಹೋದರು. "ಅವರ ಸೌಜನ್ಯ, ಕಲಾವಿದರಿಗೆ ಇರಬೇಕಾದ ಪ್ರಜ್ಞೆ ಸದಾ ನನ್ನ ನೆನಪಿನಲ್ಲಿದೆ" ಎಂದು ಹೇಳಿಕೊಳ್ಳುವ ಚಲಪತಿಯವರು ಮುಂದೆ ಒಮ್ಮೆ ದೆಹಲಿಗೆ ಕಾರ್ಯನಿಮಿತ್ತ ಭೇಟಿ ನೀಡಿದಾಗ ರಾಮ್‌ಸುತಾರ್‌ರವರ ಸ್ಟುಡಿಯೋಗೆ ಭೇಟಿ ನೀಡಿ ಮಾತನಾಡಿಸಿ ಬಂದರು. ದೆಹಲಿಯಲ್ಲಿ ಬೃಹತ್ ಶಿಲ್ಪಗಳಿಗಾಗಿ ಖ್ಯಾತರಾದ ಅವರ ಸ್ಟುಡಿಯೋ, ಮತ್ತು ಅವರ ಕಾರ್ಯಕ್ಷಮತೆಗಳು ವೆಂಕಟಾಚಲಪತಿಯವರನ್ನು

ಬೆರಗುಗೊಳಿಸಿದವು. ಬೆಂಗಳೂರಿನ ಮ್ಯೂಸಿಯಂನಲ್ಲಿ ಅಮಿತ್ ಸರ್ಕಾರ್ ವೆಂಕಟಾಚಲಪತಿಯವರನ್ನು ದೇವನಹಳ್ಳಿಯ ಹನುಮಂತಆಚಾರ್ಯ, ಕಲಾಮಂದಿರದ ಸುಬ್ಬರಾವ್‌ರವರಂತೆಯೇ ಪ್ರೀತಿಯಿಂದ ನೋಡಿಕೊಂಡರು.



ಚಿತ್ರ: 32. 'ಶಿಲ್ಪ–1' ಮಾಧ್ಯಮ : ಮೈಸೂರು ಶಿಲೆ (ಹೆಗ್ಗಡದೇವನಕೋಟೆಯ ಗ್ರಾನೈಟ್). ಆಕಾರ : 14x25 ಇಂಚುಗಳು, 2011.



ಚಿತ್ರ: 33. "ಸೂರ್ಯ ಮತ್ತು ರಾಹು" 1984–85, ಮಾಧ್ಯಮ ಕಂಚು. ಜನಪದೀಯ ಸತ್ವಗಳನ್ನು ಅರಗಿಸಿಕೊಂಡ ಚಲಪತಿಯವರ ಶಿಲ್ಪಗಳ ಮಾಲೆಯಲ್ಲಿ ಇದೊಂದು.





ಚಿತ್ರ: 34. ವೆಂಕಟಾಲಪತಿಯವರು ರೂಪಿಸಿದ್ದ, ತಮ್ಮದೇ ಭಾವಶಿಲ್ಪಕ್ಕೆ ಸಹಿಮಾಡಲು ಅಣಿಯಾಗುತ್ತಿರುವ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ, 2000.


1982ರ ಹೊತ್ತಿಗೆ ವೆಂಕಟಾಚಲಪತಿ ಕೌಟುಂಬಿಕ ಜೀವನಕ್ಕೆ ಹೊಂದಿಕೊಂಡಿದ್ದರು. ಅವರ ವೃತ್ತಿ ಜೀವನವು ಹಲವು ಉಪಯುಕ್ತ, ಪ್ರಭಾವಶಾಲಿ ಸಂದರ್ಭಗಳನ್ನು ಕಂಡಿತು. ಅದೇ ವರ್ಷ ಅನ್ನಿ: **VITM** ನಲ್ಲಿ **techno art,** 1982 ಶಿಲ್ಪ ಶಿಬಿರ ನಡೆಯಿತು[12] ಶಿಬಿರದ ಉದ್ಘಾಟನೆಗೆ ಆ ದಿನಗಳ ಸಮಕಾಲೀನ ಶಿಲ್ಪಿಗಳಲ್ಲಿ ದೊಡ್ಡ ಹೆಸರಾಗಿದ್ದ ಚಿಂತಾಮಣಿ ಕರ್ ಆಹ್ವಾನಿತರಾಗಿ ಆಗಮಿಸಿದ್ದರು. ಉದ್ಘಾಟನೆಯ ನಂತರ ಸಂಜೆ ಮ್ಯೂಸಿಯಂಗೆ ಹತ್ತಿರವಾಗಿದ್ದ ಏರ್‌ಲೈನ್ಸ್ ಹೋಟೆಲ್‌ನಲ್ಲಿ ಅಮಿತ್ ಸರ್ಕಾರ್‌ರೊಂದಿಗೆ ಚಿಂತಾಮಣಿಕರ್ ಕಾಫಿ ಕುಡಿಯಲು ಬಂದಿದ್ದರು. ವೆಂಕಟಾಚಲಪತಿಯವರ ಅನುಭವ ಅವರದೇ ಮಾತುಗಳಲ್ಲಿ ಓದಿ : "ನಾನು ಕೆಲಸ ಮಾಡುತ್ತಿದ್ದ ಕಲಾವಿಭಾಗದ ಪ್ರದರ್ಶನಾಧಿಕಾರಿಯವರಾದ ಅಮಿತ್ ಸರ್ಕಾರ್, ನಾನು ಹಾಗೂ ಜಿ. ಸುಬ್ರಮಣಿಯಮ್ ಹೋಟೆಲ್ ನಲ್ಲಿ ಸಂಜೆ ಕಾಫಿ, ತಿಂಡಿಗಾಗಿ ಬಂದಿದ್ದೆವು. ಅಮಿತ್ ಸರ್ಕಾರ್ ನನ್ನನ್ನು ಚಿಂತಾಮಣಿಕರ್‌ಗೆ ಪರಿಚಯಿಸುತ್ತಾ ನಾನು ಮ್ಯೂಸಿಯಂಗಾಗಿ ಉತ್ತಮ ಶಿಲ್ಪಗಳನ್ನು ಮಾಡುತ್ತೇನೆಂದು ತಿಳಿಸಿದರು. ನನ್ನ ಶಿಲ್ಪಗಳ ಕೆಲವು ಚಿತ್ರಗಳನ್ನು ತೋರಿಸಿದೆ. ಮುಜುಗರದಿಂದ ಶಿಲ್ಪಕಲೆ ಕಲಿಯುವ ಯಾವ ಸ್ಕೂಲ್ ಆಫ್ ಆರ್ಟ್‌ಗೂ ಹೋಗಲಿಲ್ಲ ಎಂದಾಗ, ಅವರೆಂದರು, "ನೀನು ಯಾವುದಾದರೂ ಸ್ಕೂಲ್ ಆಫ್ ಆರ್ಟ್‌ಗೆ



ಚಿತ್ರ: 35. ಸ್ಟುಡಿಯೋದಲ್ಲಿ
ತಮ್ಮ ಸೃಷ್ಟಿಯೊಂದಿಗೆ ವೆಂಕಟಾಚಲಪತಿ.


ಹೋಗಿದ್ದಿದ್ದರೆ ಆ ಕಲಾ ಶಾಲೆಯ ಶಿಕ್ಷಕರ ಪ್ರಭಾವಗಳು, ಇತರ ಕಲಾವಿದರ ಪ್ರಭಾವಗಳು ನಿನ್ನ ಶಿಲ್ಪಗಳಲ್ಲಿ ಬರುತ್ತಿತ್ತು. ಆದರೆ ಈಗ ನಿನ್ನ ಶಿಲ್ಪಗಳಲ್ಲಿ ದೇಶೀಯತೆ, ತನ್ನತನಗಳು ಕಾಣುತ್ತಿವೆ; ಇದೇ ಉತ್ತಮ". ಇದು ಸಮಕಾಲೀನ ಶಿಲ್ಪಕಲೆಯಲ್ಲಿ ಯೋಚಿಸಬೇಕಾದ ಸಂಗತಿಯೇ ಸರಿ. ತನ್ನ ತನ, ಸ್ವಂತಿಕೆ, ಪ್ರಯೋಗಶೀಲತೆಗಳು ಅವರ ಮಾತುಗಳಲ್ಲಿ ಪ್ರಸ್ತಾಪಗೊಂಡವು ನಂತರ casting ವಿಷಯ, oxidize ವಿಷಯಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿದೆ. ಅವರೆಂದರು "ನನ್ನ ಕಾಲದಲ್ಲಿ ಟೆಕ್ನಿಕ್ ಹಾಗೂ ಆಕ್ಸಿಡೈಸ್ ವಿಷಯಗಳಲ್ಲಿ ನಮ್ಮ ದೇಶದಲ್ಲಿ ಹೆಚ್ಚು ತಿಳಿದಿರಲಿಲ್ಲ. ನಾವು ತುಂಬಾ ಕಷ್ಟಪಟ್ಟು ಅನೇಕ ಫಾರ್ಮುಲಾಗಳನ್ನು ಕೇಳಿ ತಿಳಿದುಕೊಂಡೆವು. ಆದರೆ ಇಂದು ನಿಮಗೆ ಯಾವ ಕಷ್ಟವೂ ಇಲ್ಲದೆ ಆ ಫಾರ್ಮುಲಾಗಳು ಸಿಗುತ್ತವೆ. ನೀವು ಕಷ್ಟಪಟ್ಟು ಗಳಿಸಿದ್ದರೆ ಅದರ ಬೆಲೆ ಗೊತ್ತಾಗುತ್ತಿತ್ತು. ನಿಮಗೆ ಎಷ್ಟೊಂದು ಸುಲಭ" ಎಂದು ಚಟಾಕಿ ಹಾರಿಸಿದರು. ಅವರ ಆ ಭೇಟಿಯ ಅವಕಾಶ ವೆಂಕಟಾಚಲಪತಿಯವರಿಗೆ ಸಿಕ್ಕಿದ್ದು ಶಿಲ್ಪ ಮಾಧ್ಯಮದ ಕಲಿಕೆಗೆ ಮಾಗದರ್ಶನ ಸಿಕ್ಕಂತಾಯಿತು. ಮುಂದೆ ಅಮಿತ್ ಸರ್ಕಾರ್ ಕೊಲ್ಕತ್ತೆಗೆ ಹಿಂತಿರುಗುವವರೆಗೂ ವೆಂಕಟಾಚಲಪತಿಯವರಿಗೆ ಮ್ಯೂಸಿಯಂ ತಮ್ಮ ಮನೆಯಂತೆಯೇ ಪ್ರೀತಿಯ ಸ್ಥಳವಾಗಿತ್ತು. ಕೆಲಸದ ಸ್ಥಳವೆಂದು ಅನ್ನಿಸಲೇ ಇಲ್ಲ. ಅಮಿತ್ ಸರ್ಕಾರ್‌ರವರ ವ್ಯಕ್ತಿತ್ವ ಅಂತಹುದು.

1988ರ ಸುಮಾರಿಗೆ **vitm** ಗೆ ಕೊಲ್ಕತ್ತೆಯಿಂದ ಸಮೀರ್ ಮಂಡಲ್, ಪ್ರದರ್ಶನ ಅಧಿಕಾರಿಯಾಗಿ ಬಂದರು. ಯುವಕರಾಗಿದ್ದ ಅವರು ಸದಾ ನಗುಮೊಗದವರೇ ಆಗಿದ್ದರು. ಜಲವರ್ಣ ಮಾಧ್ಯಮದ ಚಿತ್ರಗಳು ಅವರದೇ ಆದ ಆಕರ್ಷಕ ಅಂಶಗಳನ್ನು ಹೊಂದಿದ್ದವು. ಬೆಂಗಳೂರಿನ ಕಲಾವಿದರೊಂದಿಗೆ ತಮ್ಮ ಸಮಯವನ್ನು ಹೆಚ್ಚಾಗಿಯೇ ಕಳೆಯುತ್ತಿದ್ದ ಅವರು ಬಹುಬೇಗ ಬೆಂಗಳೂರಿನ ಕಲಾವಲಯಕ್ಕೆ ಹತ್ತಿರವಾದರು. ಅವರ ಆಸಕ್ತಿಯ ಫಲವಾಗಿಯೇ ಮ್ಯೂಸಿಯಂನಲ್ಲಿ ಕೆಲಸ ಮಾಡುವ ಕಲಾವಿದರ ಅಭಿವ್ಯಕ್ತಿಗಳ ಪ್ರದರ್ಶನವೊಂದು ವೆಂಕಟಪ್ಪ ಕಲಾಗ್ಯಾಲರಿಯಲ್ಲಿ ನಡೆಯಿತು. ವೆಂಕಟಾಚಲಪತಿಯವರ ಶಿಲ್ಪಗಳೂ ಆ ಪ್ರದರ್ಶನದಲ್ಲಿದ್ದವೆಂದು ನೀವು ಊಹಿಸಿಯೇ ಇರುತ್ತೀರಿ : ಹೌದು. ಇದರ ಬೆನ್ನಿಗೇ **VITM** ಕಲಾವಿದರ ಕೃತಿಗಳ ಪ್ರದರ್ಶನ ಕೊಲ್ಕತ್ತೆಯಲ್ಲಿ ನಡೆದು ಉತ್ತಮ ಪ್ರತಿಕ್ರಿಯೆ ಪಡೆಯಿತು. ಸಮೀರ್‌ಮಂಡಲ್‌ರವರ ಉತ್ಸಾಹಭರಿತ ಪ್ರೋತ್ಸಾಹದಿಂದ ವೆಂಕಟಾಚಲಪತಿ ತಮ್ಮ ಶಿಲ್ಪಗಳನ್ನು ಕೊಲ್ಕತ್ತೆಯಲ್ಲಿ ಪ್ರದರ್ಶಿಸಿದರು. ಅಕಾಡೆಮಿ ಆಫ್ ಫೈನ್ ಆರ್ಟ್‌ನಲ್ಲಿ ನಡೆದ ಆ ಪ್ರದರ್ಶನದಲ್ಲಿ ವೆಂಕಟಾಚಲಪತಿಯವರ ಶಿಲ್ಪಗಳು ವಿಮರ್ಶಕರ ಗಮನ ಸೆಳೆದವು.



ಮ್ಯೂಸಿಯಂನ ಸಹವಾಸ ವೆಂಕಟಾಚಲಪತಿಯವರನ್ನು ರೂಪಾಂತರಿಸಿತು; ಸಂಪ್ರದಾಯ ಮೂಲ ಪ್ರೀತಿಯನ್ನು ಸಮಕಾಲೀನಗೊಳಿಸಿದ ಹಲವು ವಿಶೇಷ ಸಂದರ್ಭಗಳು ಒದಗಿ ಬಂದವು. ಮ್ಯೂಸಿಯಂ ಪರವಾಗಿ ಗುಲ್ಬರ್ಗಾ, ನವದೆಹಲಿ, ಇತ್ಯಾದಿ ಕೇಂದ್ರಗಳಿಗೆ ಭೇಟಿ ನೀಡಿದರು. ಒಮ್ಮೆ ನವದೆಹಲಿಯಲ್ಲಿ **Technology Fair-ASIA** 72 ನಡೆದಾಗ ಒಂದು ತಿಂಗಳ ಕಾಲ ಅಲ್ಲಿದ್ದಾಗ ಹಲವು ಶಿಲ್ಪಿಗಳ ಪರಿಚಯವೂ ಆಯಿತು. ರಾಷ್ಟ್ರೀಯ ಮ್ಯೂಸಿಯಂ, ಆಧುನಿಕ ದೃಶ್ಯಕಲೆಯ ರಾಷ್ಟ್ರೀಯ ಗ್ಯಾಲರಿ **(NGMA)** ಹಾಗೂ ಕೇಂದ್ರ ಲಲಿತ ಕಲಾ ಅಕಾಡೆಮಿಯ ಗ್ಯಾಲರಿಗಳನ್ನು ಸಂದರ್ಶಿಸಿದ್ದು ಅವರ ಅನುಭವ ಲೋಕ ವಿಸ್ತಾರಗೊಳ್ಳಲು ಸಾಧ್ಯವಾಯಿತು. ಅಲ್ಲಿಂದಾಚೆಗೆ ರಾಜ್ಯದ ಹೊರಗಿನ ಕಲಾ ಪ್ರದರ್ಶನಗಳಲ್ಲಿ ವೆಂಕಟಾಚಲಪತಿ ಹೆಚ್ಚು ಹೆಚ್ಚು ಕಾಣಿಸಿಕೊಂಡರು.

1974ರಲ್ಲಿ ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಆಶ್ರಯದಲ್ಲಿ ನಡೆದ ಮೊದಲನೆಯ ಅಖಿಲ ಭಾರತ ಶಿಲ್ಪಶಿಬಿರದಲ್ಲಿ ವೀಕ್ಷಕರಾಗಿ



ಚಿತ್ರ : 36. Reclining form, granite pink 30′x14′, 1983,

ಭಾಗವಹಿಸಿದ್ದರು. ಕರ್ನಾಟಕದ ವಾದಿರಾಜ್, ಚೆನ್ನೈನ ಜಾನಕಿರಾಮ್ ಬರೋಡದ ನಾಗಜೀಬಾಯಿ ಪಟೇಲ್, ಹೈದರಾಬಾದಿನ ಯಾದಗಿರಿರಾವ್, ಬೆಂಗಳೂರಿನ ಯೂಸೂಫ್ ಅರಕ್ಕಲ್, ಮೊದಲಾದವರು ಪಾಲ್ಗೊಂಡು ಶಿಲ್ಪಗಳನ್ನು ಸೃಷ್ಟಿಸುವ ಪ್ರಕ್ರಿಯೆಯ ನಡುವೆ ವೆಂಕಟಾಚಲಪತಿಯವರ ಹಾಜರಿ. ಶಿಲ್ಪಿಗಳ



ಚಿತ್ರ: 37. Heritage of Karnataka, Mural - Working stage, clay, 12′x8′, 1985.



ನಿರ್ವಹಣೆಗಳತ್ತ ನೋಟ. "ಅವರ ತಂತ್ರಗಾರಿಕೆ ಎಲ್ಲಾ ನೋಡುವ ಭಾಗ್ಯ ಲಭಿಸಿತ್ತು. ನಂತರವೇ ನಾನು ಸಮಕಾಲೀನ ಶಿಲ್ಪಗಳನ್ನು ಮಾಡಲಾರಂಭಿಸಿದೆ" ಎಂದು ವೆಂಕಟಾಚಲಪತಿ ಹೇಳಿಕೊಂಡಿದ್ದಾರೆ. ಸಹಜವೇ: ಜಾನಕಿರಾಮ್, ನಾಗ್‌ಜೀಬಾಯಿ ಪಟೇಲ್‌ರಂಥ ಪರಸ್ಪರ ವೈರುಧ್ಯಮಯ ಶಿಲ್ಪಕಾರರ ಸೃಷ್ಟಿಪ್ರಕ್ರಿಯೆಯನ್ನು ಹತ್ತಿರ ಕುಳಿತು ನೋಡಿದವರಿಗೆ ನಾಗ್‌ಜಿಬಾಯ್ ಪಟೇಲ್‌ರ ಸಮಕಾಲೀನತೆಯ ತಾತ್ವಿಕತೆ ಜಾನಕೀರಾಮ್‌ರವರ ಜನಪದೀಯ ಸಾತ್ವಿಕ ಕುಶಲತೆಗಳನ್ನು ಅರಗಿಸಿಕೊಂಡು ಬಿಟ್ಟರೆ ಆತ್ಮವಿಶ್ವಾಸ ಆಕಾಶದೆತ್ತರಕ್ಕೆ ಜಿಗಿಯಬಲ್ಲದು.

ರಾಜ್ಯ ಲಲಿತ ಕಲಾ ಅಕಾಡೆಮಿಯ ವಾರ್ಷಿಕ ಕಲಾಪ್ರದರ್ಶನಗಳು ವೆಂಕಟಪ್ಪ ಕಲಾ ಗ್ಯಾಲರಿ ಆಗುವ ಮೊದಲು ವಿಶ್ವೇಶ್ವರಯ್ಯ ವಾಣಿಜ್ಯ ಕೇಂದ್ರದಲ್ಲಿ ನಡೆಯುತ್ತಿದ್ದವು. ಮಲ್ಲೇಶ್ವರದಲ್ಲಿ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಪ್ರದರ್ಶನಗಳಾಗುತ್ತಿದ್ದವು. ಥಿಯೋಸಾಫಿಕಲ್ ಸೊಸೈಟಿಯ ಆಶ್ರಯದಲ್ಲಿ ಕಲಾವಿಮರ್ಶಕ ಜಿ. ವೆಂಕಟಾಚಲಂ ಅಂದಿನ ಸಂದರ್ಭದ, ದೇಶದ ಅತ್ಯುತ್ತಮ ಕಲಾವಿದರ ಕಲಾಕೃತಿಗಳನ್ನು ಸಂಗ್ರಹಿಸಿ ಕಂಟೋನ್‌ಮೆಂಟ್ ಭಾಗದಲ್ಲಿ ಆಗಾಗ ಪ್ರದರ್ಶಿಸುತ್ತಿದ್ದರು. ಜೆ.ಹೆಚ್. ಕಸಿನ್ಸ್, ಜಿ. ವೆಂಕಟಾಚಲಂ ಇಂಗ್ಲೀಷಿನಲ್ಲಿ ದೃಶ್ಯಕಲೆಯ ವಿಮರ್ಶೆ ಬರೆಯುತ್ತಿದ್ದರು. ಇಂತಹ ಪ್ರದರ್ಶನಗಳನ್ನು ನೋಡುವ ಆಸಕ್ತಿಯನ್ನು ವೆಂಕಟಾಚಲಪತಿ ಬೆಳೆಸಿಕೊಂಡಿದ್ದರು.

ಕಲಾಮಂದಿರದಲ್ಲಿ ಎಸ್.ಎಸ್. ಕುಕ್ಕೆ, ಹೆಚ್.ಎಸ್. ಇನಾಮತಿ, ಎಸ್.ಆರ್. ಸ್ವಾಮಿಯವರುಗಳನ್ನು, ಚಿತ್ರಕಲಾ ಪರಿಷತ್ತಿನಲ್ಲಿ ಸುಬ್ರಹ್ಮಣ್ಯರಾಜುರವರನ್ನು ಭೇಟಿಯಾಗುತ್ತಿದ್ದರು. ಹೊರಗೆ ಯಲವಟ್ಟಿ, ಪಟೇಲ್, ಮುನೌಳಿ, ಆರ್.ಎಂ. ಹಡಪದ್, ಧನಂಜಯ ಶಿಲ್ಪಿ, ವಿ.ಜಿ. ಅಂದಾನಿ, ಶಂಕರ್ ಪಾಟೀಲ್, ಮೊದಲಾದವರು ವೆಂಕಟಾಚಲಪತಿಯವರಿಗೆ ಹಲವು ರೀತಿಗಳಲ್ಲಿ ಸಲಹೆ ಸೂಚನೆಗಳನ್ನು ನೀಡಿದ್ದಾರೆ.

ಶಿಲ್ಪಿ ವಾದಿರಾಜರ ಪರಿಚಯವೊಂದು ಅಪರೂಪದ ನೆನಪುಗಳನ್ನು ಕಾಡುವಂತಿದೆ. ವೆಂಕಟಾಚಲಪತಿ 'ಇಂಡೋ ನಿಪ್ಪನ್ ಕ್ರಾಫ್ಟ್ ಸೆಂಟರ್' ಪ್ರಾರಂಭವಾಗಿ ಅದರಲ್ಲಿ ಸಂಜೆಯ ಅವಧಿಗಳಲ್ಲಿ ಮರಗೆತ್ತನೆ ಕಲಿಯುತ್ತಿದ್ದ ಸಂದರ್ಭ. ಕನಕಾಮೂರ್ತಿಯವರು ಕಲಾಮಂದಿರದಲ್ಲಿದ್ದುದರಿಂದ ಅವರ ಮೂಲಕ ವಾದಿರಾಜರಿಗೆ ವೆಂಕಟಾಚಲಪತಿಯವರ ಬಗ್ಗೆ ಗೊತ್ತಿತ್ತು. ನಂತರದಲ್ಲಿ ಆ ಪರಿಚಯ ಹೆಚ್ಚು ಗಾಢತೆಯನ್ನು ಪಡೆಯಿತು. ವೆಂಕಟಾಚಲಪತಿ ತಾವು ಕಲಿತ ಪ್ರತಿ ಹೊಸ ಮಾಧ್ಯಮ ಮತ್ತು ತಂತ್ರಗಳನ್ನು ವಾದಿರಾಜರಿಗೆ ತಿಳಿಸುತ್ತಿದ್ದರು. ವಾದಿರಾಜರೂ ಆ ಹೊಸ ಮಾಧ್ಯಮ ಮತ್ತು ತಂತ್ರಗಳನ್ನು ಪ್ರಯೋಗ ಮಾಡುತ್ತಿದ್ದರು. ಫೈಬರ್ ಗಾಜು, ಸಿಲಿಕಾನ್ ರಬ್ಬರ್ ಇತ್ಯಾದಿಗಳನ್ನು ಸಂಪ್ರದಾಯ ಶಿಲ್ಪಿಯಾದರೂ ವಾದಿರಾಜರು ಪ್ರಯೋಗಿಸಿ ನೋಡುತ್ತಿದ್ದರು. ಪ್ರತಿದಿನವೂ ಇಬ್ಬರೂ ಭೇಟಿಯಾಗುತ್ತಿದ್ದರು. ಒಂದು ದಿನ ನೋಡದಿದ್ದರೆ ವಾದಿರಾಜರು




Picture. 38, Standing figure, Bronze, 16'x5',

ವೆಂಕಟಾಚಲಪತಿಯವರ ಮನೆಗೇ ಬಂದು ಬಿಡುತ್ತಿದ್ದರು; ಗುರುಕುಲ ಪದ್ಧತಿಯವರಲ್ಲವೆ! ಅವರಿಬ್ಬರ ನಡುವೆ ಅಂತಹ ಆತ್ಮೀಯತೆ.

ಬಿಂದು-ರೇಖಾ ರೂಪಗಳು


ಶಿಲ್ಪವೊಂದರ ಸೃಷ್ಟಿ ಪ್ರಕ್ರಿಯೆಯ ಹಿಂದೆ ಹಲವು ಆಯಾಮಗಳ ಸಿದ್ಧತೆಗಳಿವೆ. ಕಲ್ಪನಾಲೋಕ ಹಾಗೂ ವಾಸ್ತವ ಲೋಕಗಳನ್ನು ಹೊಂದಿಸಿಕೊಂಡ ಮನಸ್ಥಿತಿಯ ನಡುವ ಆಗಾಗ ಅಥವಾ ರೇಖಿಸಬೇಕೆಂದಾಗ ಮೂಡುವ ಆವೇಗಯುತ ಸ್ಕೆಚ್‌ಗಳು ಬಿಂದು-ರೇಖೆ ಹಾಗೂ ಮೈವಳಿಕೆಗಳನ್ನು ಅರಗಿಸಿಕೊಂಡು ಮೂಡಿಬರುತ್ತವೆ. ವೆಂಕಟಾಚಲಪತಿಯವರೂ ಶಿಲ್ಪ ಸೃಷ್ಟಿ ಪ್ರಕ್ರಿಯೆಗೆ ಪೂರಕವಾಗಿ ಸಾಕಷ್ಟು ಪೂರ್ವ ಸಿದ್ಧತೆಗಳನ್ನು ಮಾಡುತ್ತಾರೆ. ಐತಿಹಾಸಿಕ ವ್ಯಕ್ತಿಗಳ ಭಾವಶಿಲ್ಪ ಸೃಷ್ಟಿಯಲ್ಲಿ ತೊಡಗಬೇಕಿದ್ದರೆ ಐತಿಹಾಸಿಕ ಅಂಶಗಳನ್ನೇ ಅಲ್ಲದೆ ಆ ವ್ಯಕ್ತಿಯ ಭಾವಚಿತ್ರಗಳನ್ನು ಸಂಗ್ರಹಿಸಿ ಅಧ್ಯಯನ ಮಾಡುವುದರ ಜತೆಜತೆಗೇ ರೇಖಾಚಿತ್ರಗಳನ್ನೂ ರೇಖಿಸಿ ಅಂತಿಮವಾಗಿ, ನಿರ್ದಿಷ್ಟವಾಗಿ ಭಾವಶಿಲ್ಪದಲ್ಲಿ ಕಾಣಿಸಿಕೊಳ್ಳಬೇಕಾದ ರೂಪವನ್ನು ಗ್ರಹಿಸುತ್ತಾರೆ. ನಂತರ ಸೂಕ್ತ ಮಾಧ್ಯಮದಲ್ಲಿ ರೂಪಗೊಳಿಸುತ್ತಾರೆ. ಸಮಕಾಲೀನ ವ್ಯಕ್ತಿಗಳಾದರೇ ಅವರ ವ್ಯಕ್ತಿತ್ವ – ಭಾವವೈವಿಧ್ಯಗಳನ್ನು ಗಮನಿಸಿ, ಅನುಭವಿಸಿ ರೇಖಿಸಿ ರೂಪಿಸುತ್ತಾರೆ. ಹಾಗೆಯೇ ನಿರ್ದಿಷ್ಟ ಮಾಧ್ಯಮದಲ್ಲಿ ಭಾವಶಿಲ್ಪವಾಗಿಸುತ್ತಾರೆ; ಸೂಕ್ತ, ಅಗತ್ಯವಾದಷ್ಟು ಸಮಯವನ್ನು ದುಡಿಸಿಕೊಳ್ಳುತ್ತಾರೆ. ಹೀಗೆ ಅವರಿಂದ ಮೂಡಿ ಬಂದಿರುವ ರೇಖಾಚಿತ್ರ, ಸ್ಕೆಚ್‌ಗಳೇ ನಮಗೆ ಚಲಪತಿಯವರ ಮತ್ತೊಂದು ಮುಖವನ್ನು ತೋರುತ್ತವೆ. ಹಾಗೆ ನೋಡಿದರೆ ಭಾರತೀಯ ದೃಶ್ಯಕಲಾ ಮೀಮಾಂಸೆಯಲ್ಲಿ ಒಬ್ಬ ಚಿತ್ರಕಾರ ಅಥವಾ ಶಿಲ್ಪಿಯಾದವನು ಏನೆಲ್ಲಾ ಕಲೆಗಳನ್ನು, ಸೂತ್ರಗಳನ್ನು ಕಲಿತು ಪೂರ್ವಸಿದ್ಧತೆ ಮಾಡಿಕೊಂಡು ಪಕ್ವಗೊಂಡಿರಬೇಕು ಎಂಬುದರ ಸೂಕ್ಷ್ಮ ವಿವರಗಳಿವೆ. ಭರತನ 'ನಾಟ್ಯಶಾಸ್ತ್ರ', ವಿಷ್ಣುಧರ್ಮೋತ್ತರದ 'ಚಿತ್ರಸೂತ್ರ', ನಗ್ನಜಿತನ 'ಚಿತ್ರಲಕ್ಷಣ', ಮೊದಲಾದ ಪಠ್ಯಗಳು ಹೇಳುವುದು ಅವನ್ನೆ. ಆ ಎಲ್ಲ ಅಂಶಗಳನ್ನು ಬಲ್ಲವರಂತೆ ಪಕ್ವಗೊಂಡಿರುವ ಮನಸ್ಸು ಹಾಗೂ ಕೈ ಬೆರಳುಗಳನ್ನು ಹೊಂದಿರುವ ಶಿಲ್ಪಿ ವೆಂಕಟಾಚಲಪತಿ. ಈ ಪಕ್ವತೆಯನ್ನು ಅವರು ಪಠ್ಯಗಳ ಅಧ್ಯಯನಕ್ಕಿಂತಲೂ ನಾಲ್ಕು ದಶಕಗಳ ಅನುಭವದಿಂದ ಅರಗಿಸಿಕೊಂಡಿರುವುದು ಸ್ಪಷ್ಟ.

ಚಲಪತಿಯವರ ರೇಖಾಕಾರಗಳು ಮುಗ್ಧಮನಸ್ಸಿನ ಪ್ರತಿಕ್ರಿಯೆಗಳಂತೆ ಒಮ್ಮೊಮ್ಮೆ ಅನ್ನಿಸುವುದೂ ಉಂಟು. 'ಮುಗ್ಧ ಸಂವೇದನೆ'ಯ ಹಾಜರಿ ಅವರಲ್ಲಿ ಇನ್ನೂ ಉಳಿದು ಕೊಂಡಿರುವುದಕ್ಕೆ ಪುರಾವೆಗಳಿವೆ. ಪಿಕಾಸೋ, ಪಾಲ್‌ಕ್ಲೇ, ಹೆನ್ರಿಮೂರ್, ಹೆಬ್ಬಾರ್‌ರವರ ವ್ಯಕ್ತಿತ್ವಗಳು ಈ ಸಂವೇದನೆಗೆ ಸಾಕ್ಷಿಯಂತೆ ಅವರ ಅಭಿವ್ಯಕ್ತಿಗಳಲ್ಲಿ ಕಾಣಿಸಿಕೊಂಡಿಲ್ಲವೆ! ಅತಿ ಜಾಣತನದ, ಬುದ್ಧಿವಂತಿಕೆಯ




ಚಿತ್ರ: 39. 'Bull', medium,
Bronze, 14'x10',
1990-95.

ಅಭಿವ್ಯಕ್ತಿಗಳೂ ವೆಂಕಟಾಚಲಪತಿಯವರು ಸೃಷ್ಟಿಸಿರುವ ರೇಖಾಚಿತ್ರಗಳಲ್ಲಿ, ಶಿಲ್ಪ ಸಮೂಹದಲ್ಲಿ ಇಲ್ಲವೇ ಇಲ್ಲ ಎನ್ನಲಾರೆ. ಆದರೆ ಅವರ ಬಹುತೇಕ ವೈಯಕ್ತಿಕ ಗ್ರಹಿಕೆಗಳ ಅಭಿವ್ಯಕ್ತಿಯು ಮೂರು ಆಯಾಮಗಳ ಶಿಲ್ಪದ ಸುತ್ತಲಿನ ಅವಕಾಶದಲ್ಲಿ **(Space)** ಆಡಿರುವ ಆಟದಂತಿದೆ. ಪ್ರಭಾವಗಳು ಇಲ್ಲದೆ ಸೃಷ್ಟಿಸುವುದು ಪ್ರಸ್ತುತ ಸಂದರ್ಭದಲ್ಲಿ ಸಾಧ್ಯವೆ? ಚಲಪತಿಯವರು ಸುತ್ತಲಿನ ಅವಕಾಶ-ಆಕ್ರಮಿಸುವ, ಆವರಿಸುವ ಆತ್ಯಂತಿಕ ಆಟದಲ್ಲಿ ಆನಂದದಿಂದ ನಿರತರಾಗಿ ಹಲವು ಪ್ರಭಾವಗಳನ್ನು ಅರಗಿಸಿಕೊಂಡಿದ್ದಾರೆ. 'ಪ್ರಭಾವದ ಆತಂಕ' ಮೀರಿಯೂ ಅವರು ಸೃಷ್ಟಿಸಿದ್ದಾರೆ. ಮಾನಸಿಕ ದೂರವನ್ನೂ ಗಣಿಸಿದ್ದಾರೆ. ಅಲ್ಲದೆ ನಿರಂತರ ಸೃಷ್ಟಿಸುವ ಪ್ರಕ್ರಿಯೆಯಲ್ಲಿ ಮೂರು ಆಯಾಮ ಮೀರುವ ಆಶಯದ ನಡುವೆ ಉದ್ದ, ಅಗಲಗಳ ಎರಡು ಆಯಾಮದ ಚಿತ್ರಗಳೂ, ರೇಖಾಚಿತ್ರಗಳೂ ಅವರಿಂದ ಆಗಾಗ ಮೂಡಿ ಬಂದಿರುವುದು ಗಮನಾರ್ಹ.



ಚಿತ್ರ: 42. "Harmony-13', Mysore Stone, 13"x25", 2005-6.



ಚಿತ್ರ: 43. "Harmony-15', Mysore Stone, 21"x11"x13", 2006.

ಹಾಗೆ ಹಿಂತಿರುಗಿ ನೋಡಿದರೆ ವೆಂಕಟಾಚಲಪತಿ ದೇವನಹಳ್ಳಿಯಲ್ಲಿ ಸಂಪ್ರದಾಯ ಶಿಲ್ಪ ಹಾಗೂ ಕಲಾಮಂದಿರದಲ್ಲಿ ಸಮಕಾಲೀನ ಚಿತ್ರ, ಶಿಲ್ಪಗಳ ಬಗ್ಗೆ ಕಲಿತರೂ ನಂತರ ಅವರು ಶಿಲ್ಪಪ್ರಕಾರವನ್ನೇ ಅಭಿವ್ಯಕ್ತಿಗೆ ಪೂರಕ ಎಂದು ಆಯ್ಕೆಮಾಡಿಕೊಂಡವರು. ಉತ್ತಮವಾಗಿ, ಶಾಸ್ತ್ರೀಯವಾಗಿ ಶಿಲ್ಪಗಳನ್ನೂ ಸೃಷ್ಟಿಸಬಲ್ಲರು. ಹಾಗಾಗಿಯೇ ಅವರಿಗೆ ಜಕಣಾಚಾರಿ ಪ್ರಶಸ್ತಿಯೂ ಸಂದಿತು. ಬಸವನಗುಡಿಯ ಕಲಾಮಂದಿರದ ಕಲಿಕೆಯ ಕಾಲದಲ್ಲಿಯೇ ಅಲ್ಲಿನ ವಿಶಿಷ್ಟ ಸಾಂಸ್ಕೃತಿಕ ಪರಿವೇಷದ ಕಾರಣದಿಂದ ನಾಟಕ, ಸಾಹಿತ್ಯ, ನೃತ್ಯ, ಸಂಗೀತ ಇತ್ಯಾದಿ ಕಲೆಗಳ ಸಂಬಂಧಿತ ವ್ಯಕ್ತಿತ್ವಗಳಿಗೆ ಹತ್ತಿರವಾದರು. 'ಚಿತ್ರಾ', 'ಸಮುದಾಯ' ನಾಟಕ ತಂಡಗಳಪ್ರಕಟಣೆಗಳಿಗೆ ಮುಖಪುಟಗಳನ್ನು ಚಿತ್ರಿಸಿಕೊಟ್ಟರು. ಮುದ್ರಣಮಾಧ್ಯಮಕ್ಕೆ ಅನುಕೂಲವಾದ ತಂತ್ರಗಳನ್ನು ದುಡಿಸಿಕೊಂಡು ಅಮಿತ್ ಸರ್ಕಾರ್‌ರೊಂದಿಗೆ ಸಮುದಾಯದ ವಾರ್ತಾ ಪತ್ರಗಳಿಗೆ ಮುಖಪುಟ ಚಿತ್ರ ರಚಿಸಿಕೊಟ್ಟಿರುವ ವೆಂಕಟಾಚಲಪತಿ ಕವಿ ಸುಮತೀಂದ್ರನಾಡಿಗ್‌ರ 'ಪಂಚಭೂತಗಳು' ಕಾವ್ಯ ಸಂಕಲನಕ್ಕೆ ಸಾಂದರ್ಭಿಕ ರೇಖಾಚಿತ್ರಗಳನ್ನು ರೇಖಿಸಿಕೊಟ್ಟಿರುವುದೊಂದು ಗಣನೀಯ ಕೊಡುಗೆ. ನಾಡಿಗ್‌ರ ಮಕ್ಕಳ ಪುಟ್ಟ ಪುಸ್ತಕವೊಂದರಲ್ಲಿಯೂ ಚಲಪತಿಯುವರ ರೇಖಾಚಿತ್ರಗಳಿವೆ. ಅವರ ರೇಖಾಪ್ರೀತಿ ನಿರಂತರ.

ಭಾವ ಶಿಲ್ಪಲೋಕದಲ್ಲಿ...

ವೆಂಕಟಾಚಲಪತಿ 2014ರ ಸಂದರ್ಭದಲ್ಲಿ ನಮ್ಮ ಅತ್ಯುತ್ತಮ ಭಾವಶಿಲ್ಪಿಗಳಲ್ಲಿ ಮೊದಲಿಗರು. ಬಹುಹಿಂದೆ ಕಲಾಮಂದಿರದ ಸಂದರ್ಭದಲ್ಲಿಯೇ ದಿ॥ ಅ.ನ. ಸುಬ್ಬರಾಯರ ಕಂಚಿನ ಮಾಧ್ಯಮದ ಭಾವಪೂರ್ಣ, ಜೀವಂತಿಕೆಯ ಶಿಲ್ಪ ಸೃಷ್ಟಿಸಿದವರು. 2014ರ ದಿ॥ ಎ.ಎಸ್. ಮೂರ್ತಿಯವರ ಭಾವಶಿಲ್ಪವೂ ಗಣನೀಯ. ಕನಕಾಮೂರ್ತಿ ಹಾಗೂ ಚಲಪತಿಯುವರು ಹಲವಾರು ಜನರನ್ನು ಮಾಡೆಲ್‌ಗಳನ್ನಾಗಿಸಿ ಹಲವು ಭಾವಶಿಲ್ಪಗಳನ್ನು ರಚಿಸಿ ಭಾವಶಿಲ್ಪ ಸೃಷ್ಟಿಯ ಒಳಹೊರ ನೋಟಗಳನ್ನು ಅರಗಿಸಿಕೊಂಡವರೇ ಆಗಿದ್ದಾರೆ. ದಶಕಗಳ ನಂತರ ವೆಂಕಟಾಚಲಪತಿ ಕನ್ನಡದ ಸಂದರ್ಭದ ಅಪರೂಪದ ಸಮಕಾಲೀನ ಶಿಲ್ಪಿ, ಅದರಲ್ಲಿಯೂ ಭಾವಶಿಲ್ಪಿಯಾಗಿ ಪಕ್ವ ಗೊಂಡದ್ದು ಬಹುಮುಖ್ಯ ಬೆಳವಣಿಗೆ. ಕನ್ನಡ ಸಾಂಸ್ಕೃತಿಕ ರಂಗದ ಸಂಪರ್ಕವೂ ಸಾಕಷ್ಟು ಪ್ರಭಾವಿಸಿದೆ. ಸಾಹಿತ್ಯ ರಂಗದ ಹಲವರೊಂದಿಗಿನ ಒಡನಾಟವೂ ಶಿಲ್ಪಿ ಚಲಪತಿಯವರ ಮನಸ್ಸಿನ ವಿಕಾಸ, ಸಂತೋಷಗಳಿಗೆ ಕಾರಣವಾಗಿದೆ. ಹಾಗೆಯೇ ಆ ಸಂಪರ್ಕ ಕೊಂಡಿಯು ಹಲವರ ಭಾವಶಿಲ್ಪಗಳನ್ನು ಸೃಷ್ಟಿಸುವ ಸಂದರ್ಭ ಉಂಟಾಗುವಂತೆ ಮಾಡುವ ಮೂಲಕ ವೆಂಕಟಾಚಲಪತಿಯುವರು ಕನ್ನಡ ಸಾಂಸ್ಕೃತಿಕ ರಂಗಕ್ಕೆ ಅತಿ ಹತ್ತಿರವಾದರು. ಅಷ್ಟೇ ಅಲ್ಲ ಸಾಹಿತ್ಯ ರಂಗದ ಹಲವು ದಿಗ್ಗಜರ ಭಾವಶಿಲ್ಪಗಳು

ಚಿತ್ರ: 44. ಶಿಲ್ಪ ಸೃಷ್ಟಿ ಪ್ರಕ್ರಿಯೆಯಲ್ಲಿ ವೆಂಕಟಾಚಲಪತಿ. 'ನೋವು' ಶಿಲ್ಪ



ಚಲಪತಿಯವರಿಂದ ಮೂಡಿಬಂದು ರಾಜ್ಯದ ರಾಜಧಾನಿ ಬೆಂಗಳೂರಿನ ಹಲವೆಡೆಗಳಲ್ಲಿಯೇ ಅಲ್ಲದೇ ರಾಜ್ಯದ ಹಲವು ಪ್ರಮುಖ ಕೇಂದ್ರಗಳಲ್ಲಿ ಸಾರ್ವಜನಿಕರಿಗೆ ಪ್ರತಿದಿನವೂ ಕಾಣುವಂತೆ ಪ್ರತಿಷ್ಠಾಪನೆಗೊಂಡವು. ಈ ಬೆಳವಣಿಗೆಯ ಹಿನ್ನೆಲೆಯಲ್ಲಿ ಜಿ.ಎಸ್. ಶಿವರುದ್ರಪ್ಪ, ಸುಮತೀಂದ್ರನಾಡಿಗ್, ಚಿದಾನಂದಮೂರ್ತಿ, ಹೆಚ್.ಎಸ್. ವೆಂಕಟೇಶ್ಮೂರ್ತಿ, ಕೆ.ಜಿ. ಸೋಮಶೇಖರರಾವ್ ಮೊದಲಾದ ಹಲವರು ಇಲ್ಲಿ ನೆನಪಾಗುತ್ತಾರೆ. ಕವಿ ಸುಮತೀಂದ್ರ ನಾಡಿಗ್‌ರವರ 'ಪಂಚಭೂತಗಳು' ಕಾವ್ಯ ಸಂಕಲನಕ್ಕೆ, ವೆಂಕಟಾಚಲಪತಿ ರೇಖಾಚಿತ್ರಗಳನ್ನು ರೇಖಿಸಿ ಕೊಟ್ಟಿದ್ದಾರೆ. ಅದೊಂದು ವಿಶಿಷ್ಟ ಸಂದರ್ಭ. ಕವಿ–ಶಿಲ್ಪಿ ಇಬ್ಬರ ಅನನ್ಯ ಪರಸ್ಪರ ಅದು; ಅಕ್ಷರ




ಕಾವ್ಯಾಭಿವ್ಯಕ್ತಿಗೆ ಪ್ರತಿಕ್ರಿಯಾರೂಪದ ಸಾಂದರ್ಭಿಕ, ದೃಶ್ಯಮೂಲದ ರೇಖಾಚಿತ್ರ ಅಭಿವ್ಯಕ್ತಿ ಅದು. ಎಷ್ಟೊಂದು ಪ್ರಭಾವಶಾಲಿಯಾದ ಪರಸ್ಪರತೆ ಅದು ಎಂದರೆ, ವೆಂಕಟಾಚಲಪತಿಯವರ ಸ್ಟುಡಿಯೋದ ಹೊರಭತ್ತಿಯಲ್ಲಿ ವಿಶ್ರಮಾದ್ಯಮದಲ್ಲಿ 'ಪಂಚಭೂತಗಳು' ಕಾವ್ಯ ಪ್ರಭಾವಿತ ಭಿತ್ತಿ ಶಿಲ್ಪ ಮೂಡಿಬಂದಿತು!

ರಾಷ್ಟ್ರಕವಿ ಜಿ.ಎಸ್.ಎಸ್. ರವರ ಭಾವಶಿಲ್ಪವೇ ಅಲ್ಲದೆ ಇನ್ನೂ ಹಲವರ ಶಿಲ್ಪಗಳಿಗಾಗಿ ವೆಂಕಟಾಚಲಪತಿ ತಮ್ಮ ಸೂಕ್ಷ್ಮ ಸಂವೇದನಾಶೀಲತೆಯನ್ನು ದುಡಿಸಿಕೊಂಡಿದ್ದಾರೆ. ಸರ್ವಜ್ಞ, ಶ್ರೀ ಶಿವಕುಮಾರಸ್ವಾಮಿ, ಡಾ॥ ರಾಜ್‌ಕುಮಾರ್ ಭಾವಶಿಲ್ಪಗಳು ಕೆಲವೊಮ್ಮೆ ಪೂರ್ಣಪ್ರಮಾಣದಲ್ಲಿ, ಹಲವೊಮ್ಮೆ ಎದೆಮಟ್ಟದ


ಭಾವಶಿಲ್ಪಗಳಾಗಿ ಕಾಣಿಸಿಕೊಂಡಿವೆ. ತಮ್ಮ ಕೈ ಬೆರಳುಗಳನ್ನು ಅನನ್ಯ ರೀತಿಯಲ್ಲಿ ದುಡಿಸಿಕೊಳ್ಳುವ ಸಾಮರ್ಥ್ಯದ ಚಲಪತಿ ಶಿಲ್ಪಕ್ಕೆ ಭಾವಪೂರ್ಣ ಏರಿಳಿತಗಳ, ಮೈವಳಿಕೆಗಳನ್ನು ಅಲಂಕರಿಸುವ ರೀತಿ ಸೃಜನಶೀಲವಾದುದು. "ನನ್ನ ನಾಲ್ಕು ದಶಕಗಳ ಕಲಾಜೀವನದಲ್ಲಿ ಕಾಲಕಾಲಕ್ಕೆ ಆದ ಬದಲಾವಣೆಗಳನ್ನು ಗ್ರಹಿಸಿ ಎಲ್ಲಾ ಶೈಲಿ ಹಾಗೂ ಸಂಪ್ರದಾಯಗಳಲ್ಲಿ ಸಮರ್ಪಕವಾಗಿ ಶಿಲ್ಪ ಸೃಷ್ಟಿಸುತ್ತಾ ಬಂದಿದ್ದೇನೆ" ಎನ್ನುವ ವೆಂಕಟಾಚಲಪತಿ ಭಾವಶಿಲ್ಪ ಪ್ರಕಾರದಲ್ಲಿಯೂ ಹಲವು ಮಾಧ್ಯಮಗಳಲ್ಲಿ, ಶೈಲಿಗಳಲ್ಲಿ ಪ್ರಯೋಗಮಾಡಿದವರೇ ಆಗಿದ್ದಾರೆ. ಅಂತಿಮವಾಗಿ ಅವರದೇ ಆದ ಸಂಯೋಜನೆ, ತಂತ್ರ, ಮೈವಳಿಕೆ ಉಬ್ಬು ತಗ್ಗು ಇತ್ಯಾದಿಗಳ ಸಮ್ಮಿಲನದಂತಹ ಹಾದಿಯ ಭಾವಶಿಲ್ಪಗಳಿಗಾಗಿ ಖ್ಯಾತರಾಗಿದ್ದಾರೆ. ಆದರೂ ಅವರು ಮೂಲತಃ ಟಾಲ್‌ಸ್ಟಾಯ್, ಬಾಲ್‌ಝಾಕ್‌ರವರ ರಿಯಲಿಸ್ಟ್ ಸಂಪ್ರದಾಯದ 'ಸಾಹಿತ್ಯದ ನೈಜತೆ'ಯನ್ನು ತಮ್ಮ ಭಾವಶಿಲ್ಪಗಳಲ್ಲಿ ಅರಗಿಸಿಕೊಂಡವರು. ಒಮ್ಮೆ ವಿಶಿಷ್ಟ ಸಂದರ್ಭ; ಹನುಮಂತನಗರದ ಕಲಾಮಂದಿರದಲ್ಲಿ ಎ.ಎಸ್. ಮೂರ್ತಿ, ಎ.ಎಂ. ಪ್ರಕಾಶ್ ಮೊದಲಾದವರು ಯಾವುದೋ ಕಾರ್ಯಕ್ರಮ ಸಂಯೋಜಿಸಿದ್ದರು;




ನೆನಪಿಲ್ಲ. ನನ್ನನ್ನು ಮಾಡೆಲ್ ಆಗಿಸಿ ವೆಂಕಟಾಚಲಪತಿಯವರು ಜೇಡಿಮಣ್ಣಿನಲ್ಲಿ ಶಿಲ್ಪವಾಗಿಸಲು ಪ್ರಯತ್ನಿಸಿದ್ದುಂಟು. ಕೆಲವು ಗಂಟೆಗಳ ಪ್ರಾತ್ಯಕ್ಷಿಕೆಯಲ್ಲಿ ನನ್ನ ಹೊರ ರೂಪ ಕಾಣಿಸಿಕೊಂಡು ಅನಿವಾರ್ಯ ಕಾರಣಗಳಿಂದ ಆ ಭಾವಶಿಲ್ಪ ಪೂರ್ಣಗೊಳ್ಳಲೇ ಇಲ್ಲ; ಇರಲಿ. ಆದರೆ ಅಂದಿನ ಆ ಕಾರ್ಯಕ್ರಮದಲ್ಲಿ ಭಾವಶಿಲ್ಪಕ್ಕೆ ದುಡಿಸಿಕೊಳ್ಳಲ್ಪಟ್ಟ ಮಾಡೆಲ್‌ನ ಹೊರ ರೂಪವೇ ಅಲ್ಲದೆ ಆ ಸಂದರ್ಭದಲ್ಲಿ ಮಾಡೆಲ್‌ನ ಮನಸ್ಥಿತಿ, ದೇಹದ ಹಾಜರಿ ಅಲ್ಲಿದ್ದೂ ಮನಸ್ಸು ಎಲ್ಲೆಲ್ಲೋ ಪಯಣಿಸುವ ರಾಜಕಾರಣ, ಅಥವಾ ಆಗಾಗ ಬಂದು ಹೋಗುವ ಸಾಧ್ಯತೆಗಳ ಬಗೆಗೆ ನೋಡುಗ–ವಿದ್ಯಾರ್ಥಿಗಳೇ ಅಲ್ಲದೆ ಕಲಾಭಿಮಾನಿಗಳ ನಡುವೆಯೂ ಚರ್ಚೆಯ ಸಂದರ್ಭ ಸೃಷ್ಟಿಯಾಯಿತು; ಕಲಾಮಂದಿರದ ವಿಶೇಷವೇ ಅದು. ವೆಂಕಟಾಚಲಪತಿಯವರು ಕನ್ನಡ ಸಾಹಿತ್ಯ ರಂಗದಲ್ಲಿ ತಮ್ಮ ಭಾವಶಿಲ್ಪ ಸೃಷ್ಟಿಗಳಿಗಾಗಿಯೇ ದಂತಕತೆಯಾಗಿರುವವರು, ಅವರು ಆತ್ಮೀಯತೆಯಿಂದ ಜಿ.ಎಸ್.ಎಸ್, ನಾಡಿಗ್, ಕವಿ ಸಿದ್ದಲಿಂಗಯ್ಯ, ಹೆಚ್.ಎಸ್. ವೆಂಕಟೇಶ್‌ಮೂರ್ತಿ, ಮೊದಲಾದವರೊಂದಿಗೆ ಸಂಭಾಷಿಸುತ್ತಿದ್ದರು. ಹೇಗೆ ನೋಡಿದರೂ ಭಾವ ಶಿಲ್ಪಿಯಾಗಿ ರಾಜ್ಯದ ಬಹುದೊಡ್ಡ ಹೆಸರು ಚಲಪತಿ!



ಚಿತ್ರ: 45. ನೆಲಕ್ಕೆ ಒರಗಿರುವ ಒಂದು ರೂಪ... 1978–79, ಮಾಧ್ಯಮ : ಟೆರಾಕೋಟ. 12 ಇಂಚು ಉದ್ದ x 5ಇಂಚು ಅಗಲ. ಸಂಗ್ರಹ : ನಿಗೂಢ.



ಚಿತ್ರ: 46. ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಭಾವಶಿಲ್ಪ, Bronze, 34" height, Coll : tata Institute of science, Bengaluru. 2010.



ಚಿತ್ರ: 47. Vidhya Chandra Kothari, Bronze 32", Height, 2003.



ಫ್ಲೈಯಿಂಗ್ ಫಿಶ್, ಮಾಧ್ಯಮ ಕಂಚು, 1985.



ಗ್ರೋಥ್, ಮಾಧ್ಯಮ: ಮೈಸೂರು ಕಲ್ಲು, 2005.



ಚಲಿಸುವ ರೂಪ, ಮಾಧ್ಯಮ: ಕಂಚು, 1992.



ಶಿಲ್ಪ–1996, ಮಾಧ್ಯಮ ಕಂಚು.



ಹಾರ್ಮೋನಿ, ಮಾಧ್ಯಮ: ಮೈಸೂರು ಕಲ್ಲು, 2005.



ಸನ್‌ಗಾಡ್, ಮಾಧ್ಯಮ: ಕಂಚು, 1984.



ಹಾರ್ಮೋನಿ, ಮಾಧ್ಯಮ: ಹೆಗ್ಗಡ ದೇವನಕೋಟೆಯ ಕಲ್ಲು, 2012.



ನಾಲ್ವಡಿ ಕೃಷ್ಣರಾಜ ಒಡೆಯರವರ ಕಂಚಿನ ಪ್ರತಿಮೆ, 2012.

ಹಿಂದೆ ಶಿಲ್ಪಿ ರೋಡಿನ್ನನ (1840–1917) ಅಲ್ಪಕಾಲದ ಕಾರ್ಯದರ್ಶಿಯಾಗಿದ್ದ ಕವಿ ರೈನೆರ್ ಮಾರಿಯರಿಲ್ಕೆ ರೋಡಿನ್‌ನ ಭಾವಶಿಲ್ಪವೊಂದರ ಬಗ್ಗೆ ಹೇಳಿರುವ **"…. This Bust is penetrated by such deep feeling, there is such tender modelling of the surface, it is so fine in carriage, so intense in experession, so moved and so awake that it seems as if nature had taken this work out of the sculptor's hands to claim it as one of her most precious possessions".** ಎಂಬ ಮಾತುಗಳು ವೆಂಕಟಾಚಲಪತಿಯವರ ಹಲವು ಭಾವಶಿಲ್ಪಗಳನ್ನು ಕುರಿತೇ ಹೇಳಿದಂತಿವೆ. ಹಾಗೆಯೇ ಇಲ್ಲಿ ಶಿಲ್ಪಿ ರೋಡಿನ್ ಹಾಗೂ ಸಾಹಿತಿ ಬಾಲ್‌ಝಾಕ್ ಬೆಂಬಲಿಗರ ನಡುವಣ ಪರಸ್ಪರ ವಾಕ್ಸಮರ ನಿಮಗೂ ನೆನಪಾಗಬಹುದು. ಅದು 1897. ಇಂಪ್ರೆಷನಿಸಂನ ಆತ್ಯಂತಿಕತೆಯ ಆತ್ಮವೇ ದೃಶ್ಯಾನುಭವಕ್ಕೆ ಒತ್ತು ನೀಡುವಿಕೆ. ರೋಡಿನ್ ತನ್ನ **Monument to Blazac** (1897) ನಲ್ಲಿ ದೃಶ್ಯಾನುಭವದ ಜತೆಜತೆಗೇ ಸಾಂಕೇತಿಕವಾಗಿಯೂ ಭಾವಶಿಲ್ಪವೊಂದನ್ನು ರೂಪಿಸಬಹುದೆಂದು ಬಿಂಬಿಸಿದವನು. ಆದರೆ ಆ ಸಂದರ್ಭದ ಜನಪ್ರಿಯ ಲೇಖಕನಾಗಿದ್ದ ಬಾಲ್‌ಝಾಕ್ ಆ ಭಾವಶಿಲ್ಪ ತನ್ನ ಹಾಗಿಲ್ಲವೆಂದೇ ವಿಮರ್ಶಿಸಿ ಪ್ರಾಯೋಜಕರೊಂದಿಗೆ ಆ ಶಿಲ್ಪವನ್ನು ಒಪ್ಪಿಕೊಳ್ಳಲೇ ಇಲ್ಲ. ಹಲವರಿಂದ ಕಟು ವಿಮರ್ಶೆಗೆ ಒಳಗಾದ ಆ ಶಿಲ್ಪದ ಶಿಲ್ಪಿ ರೋಡಿನ್ 1989ರಲ್ಲಿ ತನ್ನ ಶಿಲ್ಪವನ್ನು ಸಮರ್ಥಿಸಿಕೊಂಡ ರೀತಿ



ಚಿತ್ರ: 48. "Pakir"-a study, Fiber, 20'x14', 2004.



ಗಣನೀಯ : "I no longer have to fight for my sculpture; it has been able to defend itself for a long time. To say that my Balzac was executed in order to hoax the public is an insult that would once have infuriated me... If truth must die, my Balzac will be broken in pieces by future generations; but if truth is eternal, I predict that my statue will make its way alone.... I want to say something that needs to be said clearly. cap my statue, which people are making fun of because they cannot destroy it, is the result of a whole life time of effort; it is the mainspring of my aesthetic theory.... Aesthetic lawmakers are against my Balzac, also the majority of the public and the press. What does it matter? the statue will make its own way into people's minds, either by force or persuasion, There are young sculptors who go and see it and

ಚಿತ್ರ: 50. "Harmony-2"Bronze, 12'x9', 2006.



who think about it while searching for their ideals" ಎಂಬ ಮಾತುಗಳಲ್ಲಿ ಅವನ ಜೀವಧ್ವನಿಯ ದರ್ಶನವಿದೆ; ನಂಬಿಕೆಯ ಪ್ರಾಮಾಣಿಕತೆ ಇದೆ. ಅಂತಿಮವಾಗಿ ಆದದ್ದು ಏನು? ಅವನು ನಂಬಿದಂತೆಯೇ ನಡೆಯಿತು! ಇಂದಿನ ನಮ್ಮ ಸಂದರ್ಭದಲ್ಲಿಯೂ ರೋಡಿನ್‌ನ ಪ್ರಾತಿನಿಧಿಕ ವಿಶ್ವಾತ್ಮಕ ಭಾವಶಿಲ್ಪಗಳಲ್ಲಿ **'Monument to Balzac'** ಒಂದಾಗಿದೆ: ಬಾಲ್‌ಝಾಕ್ ಶಿಲ್ಪವನ್ನು ಸಂರಕ್ಷಿಸಿಡಲಾಗಿದೆ: ಶಾಶ್ವತವಾಗಿ ಸಾರ್ವಜನಿಕವಾಗಿ ಪ್ರದರ್ಶಿಸಲಾಗಿದೆ. ಒಂದು ರೀತಿಯಲ್ಲಿ ಇಂಥದೇ ಸಂದರ್ಭವನ್ನು ಎದುರಿಸಿದವರು ವೆಂಕಟಾಚಲಪತಿ; ಫಲಿತಾಂಶ ಬೇರೆ ಅಷ್ಟೆ.

ಕರ್ನಾಟಕ ಸರ್ಕಾರದ ಸಚಿವಾಲಯ ವಿಧಾನಸೌಧದ ಪಶ್ಚಿಮ ದ್ವಾರದಲ್ಲಿ 1974–75ರಲ್ಲಿ ವೆಂಕಟಾಚಲಪತಿಯವರಿಂದ ಮೂಡಿ ಬಂದ ದೇವರಾಜ ಅರಸುರವರ ಪೂರ್ಣ ಪ್ರಮಾಣದ ಅಂದರೆ 9 ಅಡಿಯ ಶಿಲ್ಪ ಪ್ರತಿಷ್ಠಾಪಿಸಿತು. ಕೆಲವು ಕಾಲ ಆಕರ್ಷಣೆಯ ಕೇಂದ್ರವೂ ಆಗಿತ್ತು. ಇದ್ದಕ್ಕಿದ್ದಂತೆ ಟೀಕೆಗಳ ಸುರಿಮಳೆ. ಎಲ್ಲ ಕಡೆಯಿಂದ ಬಾಣಗಳ ಬೀಸುಮಳೆ. ದೃಶ್ಯಕಲಾ ರಂಗದ ರಾಜಕಾರಣ


ಅದರಲ್ಲಿಯೂ ಇಡೀ ದೇಶದಲ್ಲಿ ನಮ್ಮ ರಾಜ್ಯದಲ್ಲಿಯಂತೆ ಎಲ್ಲಿಯೂ ಕಾಣಲಾರೆವೇನೋ! ಫೀಲ್ಡ್‌ಮಾರ್ಷಲ್ ಕಾರ್ಯಪ್ಪ, ಎಂ.ಜಿ. ರಸ್ತೆಯ ಮೇಯೋಹಾಲ್ ಬಳಿ ಇರುವ ಫರ್ಡಿನಾಂಡ್ ಕಿಟಲ್, ಬೆಂಗಳೂರಿನ ಹೊರಗೆ ಇರುವ ಸರ್ವಜ್ಞ ಪ್ರತಿಮೆಗಳು ಗಮನ ಸೆಳೆಯುವಂತೆ ರೂಪುಗೊಂಡಿವೆ. ಎಲ್ಲರಿಗೂ ತಮ್ಮ ವಿನಯವಂತ ನಡವಳಿಕೆಯಿಂದ ಪ್ರೀತಿಪಾತ್ರರೇ ಆಗಿರುವ ಚಲಪತಿಯವರಿಗೂ ಶತೃಗಳಿದ್ದಾರೆ ಎಂಬುದು ಆಗಲೇ ಗೊತ್ತಾಗಿದ್ದು. ಆ ಶಿಲ್ಪವನ್ನು ಆ ಸ್ಥಳದಿಂದಲೇ ಪಲ್ಲಟಗೊಳಿಸಲಾಯಿತು. ರಾಜ್ಯದ ಹೊರಗಿನ ಶಿಲ್ಪಿಯೊಬ್ಬರಿಂದ ಮೂಡಿಬಂದ ದೇವರಾಜ ಅರಸರ ಶಿಲ್ಪ ಅಲ್ಲಿ ಪ್ರತಿಷ್ಠಾಪಿಸಲ್ಪಟ್ಟಿತು. ಆದರೆ, ವೆಂಕಟಾಚಲಪತಿಯವರ ಸೃಷ್ಟಿಯ ದೇವರಾಜ ಅರಸರ ಪ್ರತಿಮೆ ಏನಾಯಿತು? ಈಗ ಎಲ್ಲದೆ? ನಿಗೂಡ. ವೆಂಕಟಾಚಲಪತಿ ಆ ಸಂದರ್ಭವನ್ನು ಅವರ ವೃತ್ತಿ-ಪ್ರವೃತ್ತಿಯ ಬದುಕಿನ ಕಪ್ಪುಚುಕ್ಕೆ ಎಂದೇ ನೋವಿನಿಂದ ಹೇಳಿಕೊಳ್ಳುತ್ತಾರೆ. ಒಂಬತ್ತು ಅಡಿ ಶಿಲ್ಪವನ್ನು ಹತ್ತು ಅಡಿ ಎತ್ತರದ ಪೀಠದ ಮೇಲೆ ಪ್ರತಿಷ್ಠಾಪಿಸಿದ್ದರಿಂದ ಅರಸು ಶಿಲ್ಪ ಕುಬ್ಜತೆಯನ್ನು ಅರಗಿಸಿಕೊಂಡಂತೆ ಕಾಣುತ್ತಿತ್ತು. ಒಂದು ಶಿಲ್ಪವು ಸೃಷ್ಟಿಯಾದ ಮೇಲೆ ಅದನ್ನು ಸುತ್ತಲಿನ ವಾತಾವರಣದೊಂದಿಗೆ ಪ್ರದರ್ಶಿಸುವ ರೀತಿಯೂ ಎಷ್ಟೊಂದು ಪ್ರಾಮುಖ್ಯತೆ ಹೊಂದಿರುತ್ತದೆ!


ಚಿತ್ರ: 53. "My love : My village" 1993. size : 20 x 30 inches.
Medium : terracotta, Coll : unknown.



ದೇವರಾಜ ಅರಸು ಕುಟುಂಬದವರು, ಸರ್ಕಾರಿ ಅಧಿಕಾರಿಗಳು ಭಾವಪ್ರತಿಮೆ ಚೆನ್ನಾಗಿದೆಯೆಂದು ಒಪ್ಪಿದ ಮೇಲಷ್ಟೇ ಪ್ರತಿಷ್ಠಾಪನೆ, ಅನಾವರಣಗಳು ನಡೆದದ್ದು! ಆದರೆ ಅಂತಿಮವಾಗಿ ಕಟುಟೀಕೆಗಳಿಗೆ ವೆಂಕಟಾಚಲಪತಿ ಪಟ್ಟಭದ್ರ ಹಿತಾಸಕ್ತಿಗಳಿಗೆ ಬಲಿಯಾದರು. ಆ ಸಂದರ್ಭದ ಆತಂಕಮಯ ದಿನಗಳಿಂದ ಚಲಪತಿ ಹೊರಬಂದದ್ದೇ ಒಂದು ಸಾಹಸ. ಒಂದು ರೀತಿಯ ಮಾನಸಿಕ ಹಿಂಸೆ ಅದು. ತಮ್ಮದೇ ವೆಚ್ಚದಲ್ಲಿ ಶಿಲ್ಪವನ್ನು 'ನಿಮಗೆ ಬೇಕಾದಂತೆ' ಪುನರ್ ನಿರ್ಮಿಸಿ ಕೊಡುತ್ತೇನೆಂದರೂ ಸರ್ಕಾರ ವೆಂಕಟಾಚಲಪತಿಯವರಿಗೆ ಅವಕಾಶ ನೀಡಲೇ ಇಲ್ಲ; ಆದರೆ ಅವರ ಮನವಿಯನ್ನು ಸರ್ಕಾರ ಪರಿಗಣಿಸಬೇಕಿತ್ತು. ಆದರೆ ನಂತರ ಆ ಕರಾಳ ದಿನಗಳನ್ನು ಮರೆಯುವಂತೆ ಬೆಂಗಳೂರು ಹಾಗೂ ಹೊರಗೆ ವೆಂಕಟಾಚಲಪತಿಯವರ ಎಷ್ಟೋ ಅಸಾಮಾನ್ಯ ಭಾವಶಿಲ್ಪಗಳು ಅನಾವರಣಗೊಂಡಿವೆ; ಸಾರ್ವಜನಿಕ ಆಕರ್ಷಣೆಯ ಸ್ಥಳಗಳೂ ಆಗಿವೆ. ಆದರೆ ರೋಡಿನ್‌ಗೆ ಅವನ ಸಂದರ್ಭ ಪೂರಕವಾದಂತೆ ವೆಂಕಟಾಚಲಪತಿಯವರಿಗೆ ದೇವರಾಜ ಅರಸರ ಭಾವಶಿಲ್ಪದ ವಿಷಯದಲ್ಲಿ ಆಗಲಿಲ್ಲ ಅಷ್ಟೆ. ಯಾರೂ ಬೇಕಾದರೂ 'ನಾನು ಶಿಲ್ಪಿ' ಎಂದು ಹೇಳಿಕೊಳ್ಳುವ ಸಂದರ್ಭವೂ 2013–14ರಲ್ಲಿ ಹಣದ ಕಾರಣಕ್ಕಾಗಿ ಸೃಷ್ಟಿಯಾಗಿತ್ತು; ಇರಲಿ.

ಚಿತ್ರ: 54. "ಸೂರ್ಯ ಮತ್ತು ನಾಗರೀಕತೆ", 1979. ಮಾಧ್ಯಮ : ಕಂಚು 18 ಇಂಚು ಎತ್ತರ x22 ಇಂಚು ಅಗಲ. ಸಂಗ್ರಹ : ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು.





ಚಿತ್ರ: 55. ವೆಂಕಟಾಚಲಪತಿಯವರ ಸ್ಟುಡಿಯೋದ ಒಂದು ನೋಟ, 2005

ಹತ್ತಾರು ಸಾರ್ವಜನಿಕ ಸ್ಥಳಗಳಲ್ಲಿ ಚಲಪತಿಯವರಿಂದ ಮೂಡಿಬಂದ ದ.ರಾ. ಬೇಂದ್ರೆ, ಗಾಂಧಿ, ಬುದ್ಧ, ಡಾ. ರಾಜ್‌ಕುಮಾರ್, ಕೆ.ಎನ್. ಗುರುಸ್ವಾಮಿ, ಬಿ.ಎಂ. ಶ್ರೀಕಂಠಯ್ಯ, ತೀ.ನಂ. ಶ್ರೀ ಕಂಠಯ್ಯ, ಜಿ.ಎಸ್. ಶಿವರುದ್ರಪ್ಪ, ಎಂ. ಚಿದಾನಂದಮೂರ್ತಿ ಉತ್ತಂಗಿ ಚೆನ್ನಪ್ಪ ಮೊದಲಾದವರ ಭುಜಮಟ್ಟದ ಭಾವಶಿಲ್ಪಗಳು ಪ್ರತಿಷ್ಠಾಪಿಸಲ್ಪಟ್ಟಿವೆ. ಅಂತಾರಾಷ್ಟ್ರೀಯ ಸಿಂಪೋಸಿಯಂ ಒಂದರ ಸಂದರ್ಭದಲ್ಲಿ ತುಮಕೂರಿನ ಎಸ್.ಐ.ಟಿ. ಯಲ್ಲಿ ಅವರಿಂದ ಮೂಡಿಬಂದ ಫೈಬರ್ ಮಾಧ್ಯಮದ ಶಿವಕುಮಾರಸ್ವಾಮಿಯವರ ಭಾವಶಿಲ್ಪದ ದೈವೀಕ ಗ್ರಹಿಕೆ ಅಸಾಮಾನ್ಯ. ಭಾವಶಿಲ್ಪ ಸೃಷ್ಟಿ ಪ್ರಕ್ರಿಯೆಯ ಸಂದರ್ಭದಲ್ಲಿ ಶಿಲ್ಪಿಯ ಮುಂದೆ ಕುಳಿತ ಜೀವಂತ ವ್ಯಕ್ತಿಯ ಚಲನಶೀಲತೆಯು ಶಿಲ್ಪಿಗೆ ಹಲವು ಸಮಸ್ಯೆಗಳನ್ನು ತಂದೊಡ್ಡಬಲ್ಲದು. ಆದರೂ ಆ ಚಲನಶೀಲತೆಯೇ ಶಿಲ್ಪಿಗೆ ಹಲವು ಒಳನೋಟಗಳನ್ನು, ಮಾಡೆಲ್‌ನ ಹೊರ ರೂಪದ ಬಗ್ಗೆ ನೀಡಬಲ್ಲದು; ಭಾವಶಿಲ್ಪ ವಿಶಿಷ್ಟವಾಗಿಯೂ ಮೂಡಿ ಬರುವ ಸಾಧ್ಯತೆಗಳು ಹೆಚ್ಚು. ಆರ್.ಎಸ್. ನಾಯ್ಡು ಭಾವಶಿಲ್ಪಗಳು, ದೇವಿಪ್ರಸಾದ್ ರಾಯ್ ಚೌದುರಿಯುವರದೇ ಆದ 'ಶ್ರೀಮತಿ ಚಾರುಲತಾ ರಾಯ್ ಚೌದುರಿ',





ಚಿತ್ರ: 56. ಒಂದು ಟೆರಾಕೋಟಾ ಭಿತ್ತಿ ಶಿಲ್ಪದ ಆಯ್ದಭಾಗ.

'Study of a Head' 'ಕಾಳಿ-ಬಿಸ್ವಾಸ್' ಭಾವಶಿಲ್ಪಗಳು ಹೊರಮೈ, ದೇಹದ ಚರ್ಮದ ನಯನಾಜೂಕುತನಗಳನ್ನು ಮೀರಿ, ಹತ್ತಿರಕ್ಕೆ ಒರಟಾಗಿ ಕಾಣುವಂತೆ ಹಲವು ರೀತಿಯ ಮೈವಳಿಕೆಗಳನ್ನು ಅರಗಿಸಿಕೊಂಡಿವೆ.

ಈ ಮೈವಳಿಕೆಗಳನ್ನು ಅರಗಿಸಿ ಕೊಂಡಿರುವಿಕೆಯಲ್ಲಿ ವೆಂಕಟಾಚಲಪತಿಯವರ ಅನುಭವದ ಆಳದ ಪ್ರಭಾವವಿದೆ. ನಮ್ಮ ನಡುವೆ ವೆಂಕಟಾಚಲಪತಿಯವರ ಹಲವು ಭಾವಶಿಲ್ಪಗಳು ಜೀವಂತಿಕೆಯಿಂದಿರಲು ಅವರು ದುಡಿಸಿಕೊಳ್ಳುವ ಅವರ ಅಸಾಮಾನ್ಯ ಬೆರಳುಗಳ ಚಲನಶೀಲತೆಯ ಗುರುತುಗಳೂ ಕೆಲವೊಮ್ಮೆ ಅವರ ವಿಶೇಷ ಲಕ್ಷಣವಾಗಿ ಕಾಣುತ್ತಿವೆ. ಸಿದ್ಧಗಂಗಾ ಶಿವಕುಮಾರ ಸ್ವಾಮಿಯವರ ಭಾವಶಿಲ್ಪವೂ ಈ ರೀತಿಯ ಶಿಲ್ಪಗಳಲ್ಲಿ ಒಂದು. ಈ ಮೊದಲು ಪ್ರಸ್ತಾಪಿಸಿರುವಂತೆ ನೆರಳು, ಬೆಳಕು ಹಾಗೂ ಮೈವಳಿಕೆಗಳ ಚಲನೆಗಳು ಭಾವಶಿಲ್ಪವೊಂದರ ಸೃಷ್ಟಿಪ್ರಕ್ರಿಯೆಯ ಸಂದರ್ಭದಲ್ಲಿ ಪ್ರಭಾವಿಸುವ ಅಂಶಗಳಲ್ಲಿ ಬಹುಮುಖ್ಯವಾದವು. ಶಿಲ್ಪಿಯ ಮುಂದೆ ಕುಳಿತ ವ್ಯಕ್ತಿಯ ಶರೀರ ವಿನ್ಯಾಸ, ಒಂದು ಭಂಗಿಯಿಂದ ಮತ್ತೊಂದು ಭಂಗಿಗೆ ಸಂಕ್ರಮುಗೊಳ್ಳುವಾಗ, ಆ ಪ್ರಕ್ರಿಯೆ ಸೂಕ್ಷ್ಮವಾಗಿ

ಪುನಾರಾವರ್ತಿತಗೊಳ್ಳುವಾಗ ರೂಪದರ್ಶಿಯ ಹೊರ ಆಕಾರದ ಹಲವು ನೋಟಗಳು ಶಿಲ್ಪಿಯನ್ನು ಮುಟ್ಟುವುದರಿಂದ ಭಾವಶಿಲ್ಪ ಹೆಚ್ಚು ನೈಜತೆಗೆ ಹತ್ತಿರವಾಗಿ ನಿರೂಪಿಸಲ್ಪಡುತ್ತದೆ. ಆದರೆ ಈ ವಿಶಿಷ್ಟ ಸಾಧ್ಯತೆಯು ಸ್ತಬ್ಧ ಅಥವಾ ಅಚಲವಸ್ತುಗಳನ್ನು ನಿರೂಪಿಸುವಾಗ ಸಾಧ್ಯವಾಗದು. ಆದರೆ ಈ ಮಿತಿಯನ್ನು ಮೀರಲು ಶಿಲ್ಪಿಗಳು ತಮ್ಮವೇ ಆದ ದಾರಿಗಳನ್ನು ಹುಡುಕಿಕೊಳ್ಳಬಹುದಾಗಿದೆ.



ಚಿತ್ರ: 57.
'Joy Riding' - 1992.
medium - Bronze,
13x10 inches.
Coll : central lalit Kala Academy, Regional center, Chennai.



ಚಿತ್ರ: 58. ದೇವರಾಜ ಅರಸ್, 1994. ಎತ್ತರ : 9 ಅಡಿ. ಮಾಧ್ಯಮ : ಕಂಚು. ಸಂಗ್ರಹ : ?!

ಆಧುನಿಕತೆಯ ಅನ್ವೇಷಣೆಯಲ್ಲಿ ....

ವೆಂಕಟಾಚಲಪತಿ ಶಿಲ್ಪ ಮಾಧ್ಯಮಕ್ಕೆ ಹೊಂದಿಕೊಂಡ ರೀತಿಯೇ ಒಂದು ರೀತಿಯಲ್ಲಿ ಸೌಂದರ್ಯಾತ್ಮಕ ಸಂಭ್ರಮ ಎನ್ನಬಹುದು. ಅಕಾಡೆಮಿಕ್ ಕಲಿಕೆಯ ಜತೆಜತೆಗೇ ಅವರು ಎದುರಿಸಿದ ಸಂದರ್ಭಗಳು, ಭೇಟಿಯಾದ ರಾಷ್ಟ್ರದ ಖ್ಯಾತಶಿಲ್ಪಿಗಳು ಪ್ರದರ್ಶನಗಳು, ಶಿಲ್ಪಕಲೆಯ ಸಂಪ್ರದಾಯ, ಆಧುನಿಕ ಹಾಗೂ ಸಮಕಾಲೀನ ಗ್ರಂಥಗಳ ಪರಿಚಯ, ಇತ್ಯಾದಿಗಳು ಅವರನ್ನು ಸಾಕಷ್ಟು ಪ್ರಭಾವಿಸಿವೆ. ದೇಶ–ವಿದೇಶಗಳ ಅಸಾಮಾನ್ಯ ಶಿಲ್ಪಿಗಳಿಂದ ಸ್ಫೂರ್ತಿಯನ್ನೂ ಪಡೆದಿದ್ದಾರೆ. ಸುತ್ತಲಿನ ಬೆಳವಣಿಗೆಗಳನ್ನು ಸೂಕ್ಷ್ಮತೆಯಿಂದ ಗ್ರಹಿಸುವ ಕುತೂಹಲವೂ ವಿನಯವೂ ಅವರಿಗಿವೆ. ಹಾಗಾಗಿಯೇ ಅವರ ಶಿಲ್ಪ ಸೃಷ್ಟಿಯಲ್ಲಿ ಸಾಕಷ್ಟು ವೈವಿಧ್ಯತೆಯೇ ಅಲ್ಲದೆ ವೈರುಧ್ಯವನ್ನೂ ಗಮನಿಸಬಹುದು. ಏಕಕಾಲಕ್ಕೆ ಹಲವು ಶೈಲಿಗಳಲ್ಲಿ ಸೃಷ್ಟಿಸುವ ಅನಿವಾರ್ಯತೆಗಳನ್ನು ಅವರು ಎದುರಿಸುವ ಸಂದರ್ಭಗಳು ಉಂಟಾಗುತ್ತಲೇ ಇವೆ. ಬಹುಶಃ ಕುವೆಂಪುರವರು ಹೇಳಿರುವಂತೆ "ಪ್ರಜ್ಞೆ ಎಂಬುದು ಅಖಂಡ... ವಿದ್ಯುತ್ ಇದ್ದಹಾಗೆ. ಇಲ್ಲಿ ಹೀಗೆ ಅಲ್ಲಿ ಹಾಗೆ ವ್ಯಕ್ತವಾಗುತ್ತದೆ. ಒಂದೇಶಕ್ತಿ, ಒಂದೇ ಜೀವ, ಮನೆಯ ಆ ಬಾಗಿಲಲ್ಲೂ ಹೋಗಿಬರುತ್ತೆ, ಈ ಬಾಗಿಲಲ್ಲೂ ಓಡಾಡುತ್ತೆ..." ಎಂಬುದು ನೆನಪಾಗುತ್ತದೆ.[13]

ಜಾಗತೀಕರಣದ ಅಬ್ಬರದಲ್ಲಿ ಕಳೆದುಹೋಗದೆ, ಕೊಳ್ಳುವವರೊಂದಿಗೆ ರಾಜಿಮಾಡಿಕೊಂಡಂತೆ ಹಲವು ರೀತಿಯ ಶಿಲ್ಪಗಳನ್ನು ಸೃಷ್ಟಿಸಿಕೊಟ್ಟರೂ, ತಮ್ಮ ಒಳಗಿನ ಅಭಿವ್ಯಕ್ತಿಸಬೇಕೆಂಬ ಒತ್ತಡದ ತೀವ್ರತೆಯಿಂದಲೇ ತೊಡಗಿಕೊಳ್ಳುವ ಅವರು ಮಾಧ್ಯಮಗಳೊಂದಿಗೆ ಮುಖಾಮುಖಿಯಾಗುವ ರೀತಿಯೇ ವಿಶಿಷ್ಟ. ಹಾಗಾಗಿಯೇ ಅವರ ಅಭಿವ್ಯಕ್ತಿಯು ಆಧುನಿಕತೆಯ ಹೊಳಹುಗಳ ಹೊಳಪು ಹೊಂದಿರುವುದು ಸಾಧ್ಯವಾಗಿದೆ.

ಹಾಗೆ ನೋಡಿದರೆ ವಿಶ್ವದ ಆಧುನಿಕ ಶಿಲ್ಪಿಗಳ ಅತ್ಯುತ್ತಮ ಹೊಳಹುಗಳನ್ನು ಅರಗಿಸಿಕೊಂಡ ವೆಂಕಟಾಚಲಪತಿ "ಶಿಲ್ಪದಲ್ಲಿನ ಶೈಲಿಗಳಾದ ವಾಸ್ತವದ ಕ್ಲಾಸಿಕಲ್ ಶೈಲಿ, ಸಮಕಾಲೀನ ಶಿಲ್ಪಶೈಲಿ, ಇಂದಿನ ಇನ್‌ಸ್ಟಾಲೇಷನ್‌ವರೆಗಿನ ಸಮಕಾಲೀನ ಶಿಲ್ಪಶೈಲಿಗಳಲ್ಲಿ ಕೆಲಸಮಾಡಿದ್ದೇನೆ" ಎಂದು ಹೇಳಿಕೊಂಡಿದ್ದಾರೆ. ಹೌದು: ಜಾನಪದ, ಸಂಪ್ರದಾಯ, ಆಧುನಿಕ, ಸಮಕಾಲೀನ ಶಿಲ್ಪಗಳೇ ಅಲ್ಲದೆ ಇನ್‌ಸ್ಟಾಲೇಷನ್ ಅಭಿವ್ಯಕ್ತಿಗೂ ಕಾರಣರಾಗಿದ್ದಾರೆ; ಜೀವಂತಿಕೆಯ ಸೃಷ್ಟಿಶೀಲತೆ ಅವರದು.

ಅವರ ದೃಷ್ಟಿ ಬದಲಾದಂತೆ ಅವರ ದೃಶ್ಯಲೋಕವೂ ಹೊಸ ಹೊಸ ಆಯಾಮಗಳನ್ನು ಕೆಲವೊಮ್ಮೆ ಪಲ್ಲಟಗಳನ್ನು ಪಡೆದುಕೊಂಡಿದೆ. ವೆಂಕಟಾಚಲಪತಿಯವರ ಶಿಲ್ಪವೊಂದರ ಅನುಭವ ವ್ಯಾಪ್ತಿ ಅಥವಾ ಗ್ರಹಿಕೆಯ ಆಯಾಮ ಬದಲಾದಂತೆ ಮಾಧ್ಯಮವೂ ಬದಲಾಗುತ್ತದೆ. ಈ ಅಂಶವನ್ನು ನಮ್ಮ ಸಮಕಾಲೀನ ಶಿಲ್ಪಿಗಳಾದ ಯೂಸೂಪ್ ಅರಕ್ಕಲ್, ತೇಜೇಂದ್ರಸಿಂಗ್ ಬೌನಿ,

ತ್ರ: 59. 2002-03, Medium :
Iysore stone. 76x40 inches.
oll : Sculpture garden,
annada and culture
epartmnet. Bengaluru.





ಚಿತ್ರ: 60. 'ನೋವು', 1985 16x12
ಇಂಚುಗಳು ಮಾಧ್ಯಮ : ಮೈಸೂರು
ಹೆಗ್ಗಡದೇವನ ಕೋಟೆ ಶಿಲೆ ಸಂಗ್ರಹ:
ಅಮೆರಿಕೆಯ ಖಾಸಗಿ ಸಂಗ್ರಹಾಲಯ.



ಚಿತ್ರ: 61. ಭಾವಶಿಲ್ಪ : ಹಾನಗಲ್ ಸ್ವಾಮಿಗಳು. 2010. ಮಾಧ್ಯಮ : ಕಂಚು

ಪುಷ್ಪಮಾಲ, ದೇಶಪಾಂಡೆ, ಲಲಿತಾ ಶಂಕರ್, ಗೋಪಿನಾಥ್, ಶಿವಾನಂದ ಬಂಟನೂರ, ಜಾನ್‌ದೇವರಾಜ್, ಉದಯವೀರಸಿಂಗ್, ಎಂ.ಸಿ. ರಮೇಶ್ ನಾಗಪ್ಪಪ್ರಧಾನಿ, ಜಗನ್ನಾಥ ಜಕ್ಕೇಪಲ್ಲಿ, ಮೊದಲಾದವರ ಶಿಲ್ಪಗಳಲ್ಲಿಯೂ ಗಮನಿಸಬಹುದು. ವೆಂಕಟಾಚಲಪತಿಯವರು ದುಡಿಸಿಕೊಂಡ ಮಾಧ್ಯಮಗಳೂ ವೈವಿಧ್ಯಮಯ. ಹೊಸ ಹೊಸ ಮಾಧ್ಯಮಗಳಿಗಾಗಿ ಕೈಚಾಚುತ್ತಲೇ ಇರುವ ಚಟುವಟಿಕೆಯ ಮನಸ್ಥಿತಿ ಅವರದು.

ಸುತ್ತಲಿನ ಜನಸಮೂಹವನ್ನು ಹೆಚ್ಚು ಪ್ರೀತಿಸುವ ಚಲಪತಿ "ಕ್ರಿಯಾತ್ಮಕವಾಗಿ, ಭಾವಾಭಿವ್ಯಕ್ತಿ ಸಂವೇದನೆಗಳನ್ನು ನೀಡುವ ಶಿಲ್ಪಗಳು ಜನಸಾಮಾನ್ಯರನ್ನು ಮುಟ್ಟಬಲ್ಲವು" ಎನ್ನುತ್ತ ಇವೇ ಉತ್ತಮ ಶಿಲ್ಪದ ಲಕ್ಷಣಗಳು "ಸಂಪ್ರದಾಯ ಶಿಲ್ಪವಾಗಲಿ, ಸಮಕಾಲೀನ ಶಿಲ್ಪವಾಗಲಿ ಅದರ ಪಕ್ವತೆಗೆ ಸಾಕಷ್ಟು ಸಿದ್ಧತೆ, ಪರಿಶ್ರಮ, ಗ್ರಹಿಕೆ, ಯೋಜನಾಕ್ರಮಗಳು, ಮುಕ್ತವಾದ ಅಭಿವ್ಯಕ್ತಿಗೆ ಅಗತ್ಯ" ಎನ್ನುತ್ತಾರೆ. ಶಿಲ್ಪವೊಂದರ ಸೃಷ್ಟಿಗೆ ಉತ್ತಮ ಸಂಯೋಜನೆ ತಂತ್ರಗಾರಿಕೆ, ಶಿಲ್ಪಕ್ಕೆ ಬೇಕಾಗುವ ಘನ (mass), ಮೈವಳಿಕೆ (texture), ಉಬ್ಬು- ತಗ್ಗು ಇತ್ಯಾದಿಗಳನ್ನು ದುಡಿಸಿಕೊಳ್ಳುವುದೂ ಅಗತ್ಯ ಎನ್ನುತ್ತಾರೆ. ಹೀಗೆ "ಶಿಲ್ಪವೊಂದರ ಸೃಷ್ಟಿ ಪ್ರಕ್ರಿಯೆಯಲ್ಲಿ ಶಿಲ್ಪದ ಸೃಜನಶೀಲತೆಯ ಹೊಳಹು ಲೇಪಗೊಂಡು ಪೂರ್ಣತೆಯನ್ನು ಸಾಧಿಸುತ್ತದೆ. ನಂತರ ಪ್ರದರ್ಶನಗೊಂಡು ಸಮಾಜವನ್ನು ಮುಟ್ಟುವ ಪ್ರಯತ್ನ ನಡೆಯುತ್ತದೆ" ಎನ್ನುವ ಚಲಪತಿ ದಶಕಗಳ ಸೃಷ್ಟಿ ಪ್ರಕ್ರಿಯೆಯಲ್ಲಿ ಹಲವು ಮಾಧ್ಯಮ-ಶೈಲಿಗಳಲ್ಲಿ ಕಾಣಿಸಿಕೊಂಡಿದ್ದಾರೆ.

ಸಂಪ್ರದಾಯ ಮಾಧ್ಯಮಗಳಾದ ಕಲ್ಲು, ಕಂಚು, ಮತ್ತು ಮರಗಳೇ ಅಲ್ಲದೇ ತಾಂತ್ರಿಕತೆಯ ಬೆಳವಣಿಗೆಯ ಫಲವಾಗಿ ಲಭ್ಯವಾದ ಹೊಸಮಾಧ್ಯಮಗಳಲ್ಲಿ ಫೈಬರ್ ಗಾಜು, ಥರ್ಮಾಕೋಲ್, ಸಿಲಿಕಾನ್, ರಬ್ಬರ್ ಇತ್ಯಾದಿಗಳನ್ನು ದುಡಿಸಿಕೊಂಡು ಚಲಪತಿ ಸೃಷ್ಟಿಸಿದ್ದಾರೆ; ಮಿಶ್ರಮಾಧ್ಯಮದಲ್ಲಿಯೂ ಶಿಲ್ಪಗಳು ಸೃಷ್ಟಿಯಾಗಿವೆ. ಅವರ ನಾಲ್ಕು ದಶಕಗಳ ಅನುಭವ ಲೋಕ ಹಲವು ಸಾಧ್ಯತೆಗಳಿಗೆ ಕಾರಣವಾಗಿದೆ. ಪರಿಸರ ಜಾಗೃತಿ ಉದ್ದೇಶಿತ ಅವರ ಇನ್‌ಸ್ಟಾಲೇಷನ್ ಅಭಿವ್ಯಕ್ತಿಯೊಂದು ಬೆಂಗಳೂರಿನ ಜಯನಗರದ ಸಾರ್ವಜನಿಕ ಉದ್ಯಾನದಲ್ಲಿ ರೂಪುಗೊಂಡಿತ್ತು.[14] ಅವರು ಹಲವು ಮಾಧ್ಯಮಗಳನ್ನು ನೆರವಾಗಿಸಿಕೊಂಡಿದ್ದರು.

ಯಾವುದೇ ಮಾಧ್ಯಮ ಆಯ್ಕೆ ಮಾಡಿಕೊಂಡರೂ ಆ ಮಾಧ್ಯಮದ ವಿಶಿಷ್ಟತೆಯನ್ನು ಆತ್ಯಂತಿಕವಾಗಿ ದುಡಿಸಿಕೊಳ್ಳುವುದು ಅತಿ ಅಗತ್ಯ. ಇಲ್ಲದಿದ್ದಲ್ಲಿ ಅದೇ ಮಾಧ್ಯಮ ಆಯ್ಕೆ ಮಾಡಿಕೊಂಡ ಉದ್ದೇಶ ಈಡರದೇ ಹೋಗಬಹುದು. ಹಾಗಾಗಿಯೇ ಹೆನ್ರಿಮೂರ್ ಕಲ್ಲನ್ನು ಬೆಣ್ಣೆಯಂತೆ ನುಣುಪಾಗಿ ದುಡಿಸಿಕೊಳ್ಳುವುದು ಅನಗತ್ಯ ಎಂದದ್ದು. ಚಲಪತಿಯವರು ಸಹ ಹಲವು ಮೂಲದ ಶಿಲೆಗಳನ್ನು ಹಲವು ರೀತಿಗಳಲ್ಲಿ ದುಡಿಸಿಕೊಂಡಿರುವುದನ್ನು ಗಮನಿಸಬಹುದು.

ಕಲಾವಿದನ ಅಭಿವ್ಯಕ್ತಿಗೆ ಬದಲಾಗುವ, ಕಾಲವೂ ನೀಡುವ ಹೊಸ ಮಾಧ್ಯಮಗಳನ್ನು ಸೂಕ್ತ ರೀತಿಯಲ್ಲಿ ದುಡಿಸಿಕೊಳ್ಳುವ ಪ್ರಯತ್ನಗಳೂ ವೆಂಕಟಾಚಲಪತಿಯವರಲ್ಲಿ ಒಂದು ರೀತಿಯ ದೃಶ್ಯಧ್ಯಾನದಂತೆ ನಡೆದಿವೆ. ವಿನತ ವಿನಮ್ರ ಅಭ್ಯಾಸ, ಶ್ರಮ ಸಹಿಷ್ಣುತೆ, ಕಲಿಯುವ ಹಸಿವು, ಮಾಧ್ಯಮದೊಂದಿಗೆ ಆಡುವ ಆಟಗಳನ್ನು ಅವರ ವೈವಿಧ್ಯಮಯ ಅಭಿವ್ಯಕ್ತಿಗಳಲ್ಲಿ ದರ್ಶಿಸಬಹುದಾಗಿದೆ.

ಸಂಪ್ರದಾಯ – ಜಾನಪದೀಯ ಸತ್ವಗಳ ಹಿನ್ನೆಲೆ...

1979–80 ರ ಹೊತ್ತಿಗೆ ಬೆಂಗಳೂರಿನಲ್ಲಿ ಅಪರೂಪಕ್ಕೆ ಎನ್ನುವಂತಾದರೂ ವಿಶಿಷ್ಟ ಸಂದರ್ಭ ಸೃಷ್ಟಿಯ ದೃಶ್ಯಕಲಾ ಚಟುವಟಿಕೆಗಳು ನಡೆಯುತ್ತಿದ್ದವು. ಆ ಸಂದರ್ಭದಲ್ಲಿ ಎಸ್.ಎನ್. ಚಂದ್ರಶೇಖರ್, ಬಿ.ವಿ.ಕೆ. ಶಾಸ್ತ್ರಿಯವರುಗಳು ಕಲಾಚಟುವಟಿಕೆಗಳ ಬಗ್ಗೆ ಬರೆಯುತ್ತಿದ್ದರು; ಸಂಗೀತ, ನೃತ್ಯ, ಚಿತ್ರ, ಶಿಲ್ಪ ಹೀಗೆ ವೈವಿಧ್ಯಮಯ ಸಾಂಸ್ಕೃತಿಕ ಬರಹಗಳ ಆವರಣ. ಆವರೆಗೆ ಅಥವಾ ಆ ಹೊತ್ತಿಗೆ ಕಲಾಮಂದಿರದಲ್ಲಿ ಕಲಿತು – ಬೆಳೆದ ವಾತಾವರಣದ ಹಿನ್ನೆಲೆಯಲ್ಲಿಯೂ ಮೊದಲಿನ ದೇವನಹಳ್ಳಿಯ ಹನುಮಂತಾಚಾರ್ಯರ ಶಿಲ್ಪಕಲಾ ಶಾಲೆಯ ಸಂಪ್ರದಾಯ ಮತ್ತು ಸಮಕಾಲೀನ ಚಟುವಟಿಕೆಗಳ ಸಂಪರ್ಕವೂ ವೆಂಕಟಾಚಲಪತಿಯವರಿಗೆ ಇದ್ದಿತು.

ಹಾಗಾಗಿಯೇ ಅವರು ಸೃಷ್ಟಿಸುತ್ತಿದ್ದ ಶಿಲ್ಪಗಳಲ್ಲಿ ಸಂಪ್ರದಾಯದ ಹೊಳಹು ಹೆಚ್ಚು ಪ್ರಖರವಾಗಿಯೇ ಕಂಡರೂ ಜಾನಪದೀಯ ಸತ್ವಗಳನ್ನೂ ಅರಗಿಸಿಕೊಂಡಂತಹ ದೃಷ್ಟಿಯ ದರ್ಶನ. ಹಾಗೆ ನೋಡಿದರೆ ಬಹುಶಃ ಸಮುದಾಯ ವಾರ್ತಾಪತ್ರಗಳ ಮುಖಪುಟಗಳಲ್ಲೂ ಈ ಅಂಶ ಸುಸ್ಪಷ್ಟ. 1979ರ ಫೆಬ್ರವರಿ, ಮೇ ಸಂಚಿಕೆಗಳನ್ನು ಈ ದೃಷ್ಟಿಯಿಂದ ಗಮನಿಸಿ. ಆದರೆ ಫೆಬ್ರವರಿ 15ರ ಸಮುದಾಯ ವಾರ್ತಾಪತ್ರದಲ್ಲಿ 'ಬೆಂಗಳೂರು ಪ್ರೇಕ್ಷಕ ಎಷ್ಟು ಪ್ರಬುದ್ಧ?' ಪ್ರಸನ್ನರ ಸಂಪಾದಕೀಯ ಬರಹ ಗಣನೀಯ. ವೆಂಕಟಾಚಲಪತಿಯವರ 'ಸೂರ್ಯ ಮತ್ತು ರಾಹು' ಬಹುಮಾನಿತ ಶಿಲಾಶಿಲ್ಪದ ಕುರಿತ ದಾಖಲೆಯಿದ್ದ ಲಲಿತಕಲಾ ಅಕಾಡೆಮಿಯ ವಾರ್ಷಿಕ ಕಲಾಪ್ರದರ್ಶನ ಕುರಿತ 'ತಂತ್ರದಲ್ಲಿ ಪ್ರೌಢತೆ, ವಸ್ತುವಿನ ದೃಷ್ಟಿಯಿಂದ ನಿರಾಶೆ..', ವಸಂತ್‌ರವರ ಬರಹವೂ ಇದ್ದಿತು! ಹಾಗೆಯೇ ದಕ್ಷಿಣದ ಪ್ರಾದೇಶಿಕ ಸತ್ವ ತುಂಬಿಕೊಂಡ ಕಲಾವಿದ ತೋಟಾವೈಕುಂಠಂ ಕಲಾನಿರ್ದೇಶನ ಮಾಡಿದ್ದ, ತೆಲಂಗಾಣ ಹೋರಾಟ ಕುರಿತ ಗೌತಮ್ ಘೋಶ್ ನಿರ್ದೇಶನದ 'ಮಾಭೂಮಿ' ತೆಲುಗು ಚಲನಚಿತ್ರ ವಿಮರ್ಶೆ (ಎಸ್. ಮಾಲತಿ)ಯೂ ಇದ್ದಿತು. ಅದೊಂದು ವಿಶಿಷ್ಟ ಸಂದರ್ಭದ ಸಾಂಸ್ಕೃತಿಕ ಪತ್ರಿಕೆಯಾಗಿ ಮೂಡಿ ಬಂದಿತ್ತು. ಮುಖಪುಟದಲ್ಲಿ ಖಡ್ಗ ಹಿಡಿದ ಅರಸನ ಉಡ್‌ಕಟ್ ಪ್ರಿಂಟ್ ವೆಂಕಟಾಚಲಪತಿಯಿಂದ ಮೂಡಿಬಂದಿತ್ತು. ಬಹುಶಃ ಸಂಪಾದಕರ ಸೂಚನೆಯನ್ನು ಅವಲಂಬಿಸಿ ಈ ಪ್ರಿಂಟ್ ಮೂಡಿ ಬಂದಿರಬಹುದು ಎಂದು ಊಹಿಸಬಹುದಾದರೂ ಸಮುದಾಯದ ಸಾಮಾಜಿಕ ಆಶಯಗಳನ್ನು ಮೀರಿ ಕಲಾಮಂದಿರದ ನಾಟಕಗಳ ರೂಪಗಳ


ಅಂಕುರಾರ್ಪಣೆಯಂತಹ ಶಿಲ್ಪ. ಈ ಹಿನ್ನೆಲೆಯಲ್ಲಿಯೂ ಅವರ 1979-80ರ ಸೃಷ್ಟಿ, ಹೆಬ್ಬಾರರು ಕರ್ನಾಟಕಕ್ಕೆ ತಂದು ಕೊಟ್ಟ ಹೊಸ ಆಧುನಿಕತೆಯ ಆಶಯದ ಬೆಳಕಿನಲ್ಲಿ ಕಾಣಿಸಿಕೊಂಡ 'ಸೂರ್ಯ-ಕೇತು' ಶಿಲ್ಪವೂ ಜನಪದೀಯ ಸತ್ವಗಳನ್ನು ಹೊಸದೃಷ್ಟಿಯಿಂದ ನಿರ್ವಹಿಸಿಕೊಂಡ ಆಧುನಿಕ ಶಿಲ್ಪವೇ ಆಗಿತ್ತು; ವಾರ್ಷಿಕ ಪುರಸ್ಕಾರವನ್ನೂ ಪಡೆಯಿತು. 'ಚೆಲುವಿ', 'ತಾಯಿ ಮಗು' ಸಹ ಇದೇ ಹಾದಿಗೆ ಸೇರಿದ ಶಿಲ್ಪಗಳೇ ಆಗಿವೆ, 1981ರ Pain ಕಪ್ಪುಶಿಲೆಯ ಶಿಲ್ಪವೂ ಜಾನಪದೀಯ ಸೊಗಡಿನ ಸೂಕ್ಷ್ಮ ಹೊಳಹು ಹೊಂದಿತ್ತು.



ಚಿತ್ರ: 62. ಭಾವಶಿಲ್ಪ : ಜನರಲ್ ಕಾರ್ಯಪ್ಪ, 2011
ಎತ್ತರ : 40 ಇಂಚು.
ಮಾಧ್ಯಮ : ಕಂಚು ಸಂಗ್ರಹ
: ಮಡಿಕೇರಿ ಜೂನಿಯರ್ ಕಾಲೇಜ್, ಮಡಿಕೇರಿ.



ಆದರೂ ಸಂಪ್ರದಾಯ ಶಿಲ್ಪ ಸೃಷ್ಟಿಗೆ ದೊಡ್ಡ ರೀತಿಯಲ್ಲಿ ಬಳಸಲ್ಪಡುತ್ತಿದ್ದ ಶಿಲೆಯ ಪರಂಪರೆ ಸ್ವಲ್ಪ ಸ್ವಲ್ಪವೇ ಆಧುನಿಕತೆಯ ಸ್ಪರ್ಶ ಪಡೆಯುತ್ತಾ ಹೋದ ಅನುಭವದ ಸಂದರ್ಭ ಅದು. ವಿಶೇಷವಾಗಿ 1981ರಲ್ಲಿ ಬೆಂಗಳೂರಿನ ಬ್ರಿಗೇಡ್ ರಸ್ತೆಯ ರಾಮ್‌ನೀಲ್ ಗ್ಯಾಲರಿಯಲ್ಲಿ ಪ್ರದರ್ಶಿಸಿದ ಈ ಶಿಲ್ಪಸಂಕುಲ ಅಂತಾರಾಷ್ಟ್ರೀಯ ಅಂಗವಿಕಲರ ವರ್ಷದ ನೆನಪೂ ತಂದು ಕೊಂಡಿತ್ತು. ಕಲ್ಲು ಚಲಪತಿಯವರಿಗೆ ಯಾವ ಆಕಾರದಲ್ಲಿ ಪೂರೈಸಲಾಯಿತೋ ಆ ಆಕಾರದಲ್ಲಿಯೇ ಅವರಿಗೆ ಕಾಣಿಸಿಕೊಂಡ ದೃಶ್ಯಾತ್ಮಕ ಕಲ್ಪನಾ ರೂಪವನ್ನು ಕಂಡುಕೊಳ್ಳುವ ಹಾದಿಯಲ್ಲಿ ಮೂಡಿ ಬಂದ ಶಿಲ್ಪಗಳು ಅವು. ಕಪ್ಪು ಕಲ್ಲಿನ ಘನತೆಯಲ್ಲಿ ಹೆಣ್ಣಿನ ರೂಪಗಳ ಉಬ್ಬು ತಗ್ಗುಗಳನ್ನು ಬಹುಷಃ ನಮ್ಮಲ್ಲಿ ಅದೇ ಮೊದಲ ಬಾರಿಗೆ ಹಾ[illegible] ಗ್ರಹಿಸಲಾಗಿತ್ತು; ವೈರುಧ್ಯಮಯ ಅನುಭವ ನೀಡಿತು. ರಾಲ್ಫ್ ಬ್ರೌನ್, ಎಫ್. ಇ. ಮೆಕಾವಿಲಿಯಮ್ ರಂಥವರ ಶಿಲ್ಪದ ನೋಟಗಳು ಕ್ರಮವಾಗಿ ಪ್ರಾರಂಭದ 'ಸೂರ್ಯ ಮತ್ತು ಕೇತು' ಹಾಗೂ ನೆಲಕ್ಕೊರಗಿದ ಆಕರ್ಷಕ ಶಿಲ್ಪವೊಂದರಲ್ಲಿ ಅನುಭವಿಸಬಹುದಿತ್ತು. ಪ್ರಭಾವಗಳನ್ನು ಅರಗಿಸಿಕೊಳ್ಳಬಲ್ಲ, 'ಪ್ರಭಾವದ ಆತಂಕ'ವನ್ನೂ ಮೀರಬಲ್ಲ ಸಾಮರ್ಥ್ಯವನ್ನೂ ವೆಂಕಟಾಚಲಪತಿಯವರು ಪಡೆದುಕೊಳ್ಳಲು ಬಹಳ ವರ್ಷಗಳು ಬೇಕಾಗಲಿಲ್ಲ.[15] ಈ ಹಿಂದೆ ದಾಖಲಿಸಿರುವಂತೆ ದಶಕಗಳ ಅನುಭವ, ದಿಗ್ಗಜರಲ್ಲಿ ಕಲಿತ ಹಿನ್ನೆಲೆ, ಅಸಾಮಾನ್ಯರ ನಡುವ ನಡೆದಾಟ, ಇಡೀ ರಾಷ್ಟ್ರ, ವಿಶ್ವದ ದೃಶ್ಯ ಕಲಾರಂಗದ ಆಗುಹೋಗುಗಳ ಪರಿಚಯ, ದೇಶದ ಪ್ರಮುಖ ಕಲಾಕೇಂದ್ರ ಹಾಗೂ ಕಲಾವಿದ / ಕಲಾವಿದೆಯರ ಸಂಪರ್ಕಗಳ ಜತೆಜತೆಗೇ ತೀವ್ರತೆಯಿಂದ ಸದಾ ಸೃಷ್ಟಿ ಪ್ರಕ್ರಿಯೆಯಲ್ಲಿ ತೊಡಗಿರುವಿಕೆ ಇತ್ಯಾದಿಗಳು ಅವರೊಳಗಿನ ಶಿಲ್ಪಿಗೆ ಅಸಾಮಾನ್ಯ ಶಕ್ತಿಯನ್ನು ನೀಡಿವೆ. ಹಾಗಾಗಿ ಯಾವುದೂ,



ಚಿತ್ರ: 63. 'ಕರ್ನಾಟಕ ಪರಂಪರೆ'
ಸಂಪ್ರದಾಯ ಹಿನ್ನೆಲೆಯ
ಆಧುನಿಕ ಕಲ್ಪನಾ ಲಹರಿ.

ಯಾರದೂ ಅವಷ್ಟಕ್ಕೆ ಅವೇ ಅನನ್ಯ ಕೃತಿಗಳೇನೂ ಅಲ್ಲ, ಎಂಬ ಸತ್ಯ ಅವರಿಗೆ ಅನುಭವವಾಗಿದೆ. ನಮ್ಮ ಭೂತಕಾಲ ಹಾಗೂ ವರ್ತಮಾನ ಕಾಲದ ವ್ಯಕ್ತಿ, ಕೃತಿ ಹಾಗೂ ಸಂದರ್ಭಗಳು ಪ್ರಭಾವಿಸಬಲ್ಲಷ್ಟು ಶಕ್ತಿಯುತವಾಗಿದ್ದಲ್ಲಿ ಅವು ನಮ್ಮನ್ನು ಪ್ರಭಾವಿಸುವುದು ಸಹಜವೇ ಸರಿ. ಆದರೆ 'ಪ್ರಭಾವದ ಆತಂಕ'ವನ್ನು ಮೀರುವಂತಹ ನಮ್ಮತನದ ಸ್ಪರ್ಶ ನಮ್ಮ ಕೃತಿಗಳಲ್ಲಿ ಇರಬೇಕೆಂಬ ಸತ್ಯವೂ ವೆಂಕಟಾಚಲಪತಿಯವರಿಗಿದೆ. ಹಾಗಾಗಿ ಅವರ ಬಹುತೇಕ ಶಿಲ್ಪಗಳು 'ಶಿಲ್ಪಿಯೊಳಗಿನ ಶಿಲ್ಪಿ'ಯನ್ನೂ ಮೀರಿ ಅವರನ್ನೇ ನೆನಪು ಮಾಡುತ್ತವೆ. 'ತಾಯಿ ಮತ್ತು ಮಗು' ವಸ್ತುವಿನ ಎಷ್ಟೊಂದು ಚಿತ್ರ, ಶಿಲ್ಪಗಳನ್ನು ನಾವು ದೃಶ್ಯಕಲೆಯ ಇತಿಹಾಸದಲ್ಲಿ ನೋಡುವುದಿಲ್ಲ! ಪ್ರಿಕಾಸೋನ ರೇಖಾಚಿತ್ರ, ಹೆನ್ರಿಮೂರ್ ಮತ್ತಿತರರ ಶಿಲ್ಪಗಳೂ ನೆನಪಾಗುತ್ತವಲ್ಲವೆ? ಎಷ್ಟೊಂದು ವೈವಿಧ್ಯತೆ! ಆದರೆ ವೆಂಕಟಾಚಲಪತಿಯವರ 'ತಾಯಿ–ಮಗು' ಅವರದೇ ಆದ ರೀತಿಯಲ್ಲಿ ಮೂಡಿ ಬಂದಿದೆ ಎಂಬುದು ಗಮನಾರ್ಹ. ವಿಶ್ವಾತ್ಮಕ ವಸ್ತು– ರೂಪಗಳನ್ನು ಹಿಂದೆಯಷ್ಟೇ ಅಲ್ಲ ಇಂದಿನವರು ಹೇಗೆ ತಮ್ಮದೇ ಆದ ರೀತಿಗಳಲ್ಲಿ ಗ್ರಹಿಸುತ್ತಾರೆಯೋ ಹಾಗೆ ಮುಂದೆಯೂ ಅವುಗಳು ಆ ಸಂದರ್ಭಕ್ಕೆ ಪೂರಕವಾಗಿ ಅಭಿವ್ಯಕ್ತಿಗಳಲ್ಲಿ ಕಾಣಿಸಿಕೊಳ್ಳುವುದು ಸಹಜ.

'ಸೂರ್ಯ–ಕೇತು' ಶಿಲ್ಪ ಕಲ್ಲಿನ ಒರಟುತನವನ್ನು ದುಡಿಸಿಕೊಂಡು ಸುತ್ತಲೂ ನೋಡುವಂತೆ ಮಾಡಿತಲ್ಲದೆ ಎರಡೂ ಬದಿ ವಿಭಿನ್ನ ದೃಶ್ಯ ಲೋಕ ಬಿಂಬಿಸಿತು. ಬಹುಷಃ 1982ರಲ್ಲಿ ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ಮ್ಯೂಸಿಯಂನಲ್ಲಿ Techno Art Camp ನಡೆದದ್ದೂ ಚಲಪತಿಯವರ ಸೃಷ್ಟಿ ಸಾಮರ್ಥ್ಯದ ದೃಷ್ಟಿಗೆ ಹೆಚ್ಚಿನ ಆಳವನ್ನು ನೀಡಿರಬೇಕು. ಅಂದಿನ ಭಾರತೀಯ ಸಂದರ್ಭದ ಖ್ಯಾತ



ಚಿತ್ರ: 64. ರೆವರೆಂಡ್ ಕಿಟ್ಟಲ್,
ಎಮ್.ಜಿ. ರಸ್ತೆ, ಬೆಂಗಳೂರು, 2003.

ಶಿಲ್ಪಿಗಳೆಲ್ಲಾ ಪಾಲ್ಗೊಂಡು ವೈಜ್ಞಾನಿಕ ತಾಂತ್ರಿಕತೆಯನ್ನು ದುಡಿಸಿಕೊಂಡು ತಮ್ಮ ಅನುಭವ ಗ್ರಹಿಕೆಗಳಿಗೆ ರೂಪ ನೀಡಿ ಸೃಷ್ಟಿಸಿದರು. ಕೆಲವರ ಸೃಷ್ಟಿಗಳಂತೂ ಮಾಂತ್ರಿಕ ಅನುಭವ ನೀಡುವಂತಿದ್ದವು. ಹಾಗೆಯೇ ವೆಂಕಟಾಚಲಪತಿಯವರು ಭಾಗವಹಿಸಿದ ಕೆಲವು ಅಖಿಲ ಭಾರತ ಶಿಲ್ಪ ಶಿಬಿರಗಳಲ್ಲಿ ಅಂದಿನ ಅಸಾಮಾನ್ಯ ಶಿಲ್ಪಿಗಳ ಜತೆಜತೆಗೇ ಉತ್ಸಾಹದ, ಸೃಷ್ಟಿ ಶೀಲ ಶಿಲ್ಪಗಳನ್ನು ಸೃಷ್ಟಿಸಿದ ಸಂದರ್ಭ. ಇತರರಿಂದ ಕಲಿತ ಹಲವು ಅನುಭವಗಳು ಅವರ ಅಂತರಂಗದ ದೃಢ ವಿಶ್ವಾಸವನ್ನು ಹೆಚ್ಚಿಸಿದ ಸಂದರ್ಭ ಸೃಷ್ಟಿಸಿದವು. ನಂತರ ಅವರು ಹಲವು ಮಾಧ್ಯಮಗಳಲ್ಲಿ ಮೂರು ಆಯಾಮಗಳಲ್ಲಿ ಸುತ್ತಲಿನ ಅವಕಾಶ (ಸ್ಪೇಸ್)ವನ್ನು ಅತಿಕ್ರಮಿಸುವ ಪ್ರಯತ್ನಗಳ ಶಿಲ್ಪಗಳನ್ನು ಸೃಷ್ಟಿಸಿದರು. 'Moving Form', 'seated Figure, 'Thinker' ಮೊದಲಾದ ಶಿಲ್ಪಗಳು ಅವರಿಂದ ಮೂಡಿಬಂದವು. 1984–85ರ ಅವಧಿಯಲ್ಲಿ ರಾಜ್ಯ ಯುವಕ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದ 'ಯುವ ಬರಹಗಾರರ ಮತ್ತು ಕಲಾವಿದರ ಗಿಲ್ಡ್'ನ ದೃಶ್ಯಕಲೆಯ ಕಾರ್ಯಕ್ರಮಗಳನ್ನು ಆಯೋಜಿಸುವ ಹೊಣೆಯ ನಾನು ರಾಜ್ಯದ ಒಳಗಿನ ಹಾಗೂ ಹೊರಗಿನ ಕಲಾವಿದ / ಕಲಾವಿದೆಯರ ಕಲಾ ಪ್ರದರ್ಶನಗಳನ್ನು ಕರ್ನಾಟಕ ಚಿತ್ರಕಲಾ ಪರಿಷತ್ತಿನ ಗ್ಯಾಲರಿಗಳಲ್ಲಿ ನಡೆಯುವಂತೆ ಇತರ ಮಿತ್ರರೇ ಅಲ್ಲದೆ ಚಿತ್ರಕಲಾ ಪರಿಷತ್ತು ಹಾಗೂ ಐ.ಟಿ.ಸಿ. ಕಂಪನಿಗಳ ಪ್ರಾಯೋಜಕತ್ವದಲ್ಲಿ ನೋಡಿಕೊಳ್ಳುತ್ತಿದ್ದ ಸಂದರ್ಭ. ಪ್ರತಿ ಸೋಮವಾರ ಉದ್ಘಾಟನೆಗೊಳ್ಳುತ್ತಿದ್ದ EMWAE ಒಂದು ವರ್ಷಕ್ಕೂ ಹೆಚ್ಚು ಕಾಲ ನಡೆಯಿತು. ವಿಶೇಷವೆಂದರೆ ಎಲ್ಲವೂ ಬಹುತೇಕ ಚಿತ್ರಕೃತಿಗಳು, ಗುಂಪು ಪ್ರದರ್ಶನಗಳಲ್ಲಿ ಮಾತ್ರ ಕೆಲವು ಶಿಲ್ಪಗಳಿರುತ್ತಿದ್ದವು. ಆದರೆ ವೆಂಕಟಾಚಲಪತಿಯವರು ನಮ್ಮಲ್ಲಿ ಅವರ ಶಿಲ್ಪಗಳ ಒನ್ ಮ್ಯಾನ್ ಷೋ ಮಾಡಿದರು. ಒನ್‌ಮ್ಯಾನ್ ಷೋ ಅವರಿಗೆ ಹೊಸದೇನೂ ಅಲ್ಲ. ಹಿಂದೆ 1981ರಲ್ಲಿಯೇ ಬ್ರಿಗೇಡ್ ರಸ್ತೆಯ ರಾಮ್‌ನೀಲ್ ಆರ್ಟ್ ಗ್ಯಾಲರಿಯಲ್ಲಿ ಪ್ರದರ್ಶನ ಮಾಡಿದವರು ಅವರು. ಆದರೆ ಚಿತ್ರಕಲಾ ಪರಿಷತ್ತಿನ ನಮ್ಮ EMWAEನಲ್ಲಿ ಮಾಡಿದ್ದೊಂದು ಬೃಹತ್ ಪ್ರಯತ್ನ. ಅತ್ಯಂತ ಶ್ರಮವಹಿಸಿ ವೈವಿಧ್ಯಮಯ ಶಿಲ್ಪಗಳನ್ನು ಪ್ರದರ್ಶಿಸಿದರು. ಪ್ರದರ್ಶನ ಕುರಿತ ಹಲವರ ವಿಮರ್ಶೆಗಳಿಗಾಗಿ ಅನುಬಂಧ ನೋಡಿ. ಡೆಕ್ಕನ್ ಹೆರಾಲ್ಡ್‌ನಲ್ಲಿ ಜಾನಕಿ ನಾಯರ್ "This week the Every Monday visual Art Experience offers the Bangalore public a sample of venkatachalapathy's sculptures... Kaling Mardhna, Ganesh and some other folk terracotta pieces are mounted reliefs, combining the earthiness of the medium with the rusticity of content and style. conversely, the very solidity of stone from which he has drawn pain reinforces the quality of the feeling, in the forceful, yet sleek and open form, heavy metal petals curve away from an invisible centre, there are too the familiar frontal sculptures of the Madras artists, such as image and Head...." ಎಂದು ಬರೆಯುತ್ತಾ ಹೋಗಿದ್ದಾರೆ. ಈ ಪ್ರದರ್ಶನದಲ್ಲಿದ್ದ

ಪ್ಲಾಸ್ಟರ್ ಆಫ್ ಪ್ಯಾರೀಸಿನ Youth Spirit ಶಿಲ್ಪದಲ್ಲಿ ಸುತ್ತಲೂ ಅವಕಾಶವನ್ನು ಬಾಚುವಂತೆ ರೂಪುಗೊಂಡಿದ್ದ ಶಿಲ್ಪದ ಕಲ್ಪನಾಲಹರಿ ಆ ಹೊತ್ತಿಗೆ ಹೊಸತನದ್ದು; ಚಲಪತಿಯವರೊಳಗಿನ ಮಹತ್ವಾಕಾಂಕ್ಷೆಯ ಸಾಂಕೇತಿಕ ಬಿಂಬ ಅದು!

ದೃಷ್ಟಿಪಲ್ಲಟದಿಂದ ದೃಶ್ಯವೂ ಪಲ್ಲಟ....

ಹೊಸ ಗಾಳಿಗೆ ತುಡಿಯುವ ಅವರಿಂದ 1992ರ ಸುಮಾರಿಗೆ ನೆರಳು ಬೆಳಕುಗಳನ್ನು ದುಡಿಸಿಕೊಂಡ ಚೌಕ ಆಯತಗಳ ಆಳದ ಮೂರು ಆಯಾಮಗಳ ಆಟದಂತಹ ಹಲವು ಶಿಲ್ಪಗಳ ಸೃಷ್ಟಿ. 'Environmental sculpture' 1993–94, ಇಲ್ಲಿ ನೆನಪಾಗುತ್ತಿದೆ. ಮಾಧ್ಯಮ ಬದಲಾಗುತ್ತಲೇ ಅಥವಾ ಈಗಾಗಲೇ ಬಳಸುತ್ತಿರುವ ಮಾಧ್ಯಮದಲ್ಲಿ ಅಲ್ಪ ಸ್ವಲ್ಪ ಬದಲಾವಣೆ ಕಂಡರೆ, ಅಭಿವ್ಯಕ್ತಿಯ ಲಕ್ಷಣ ನಿರೂಪಣೆಯೂ ಬದಲಾಗಬಹುದೆ? ಹೌದು. ಹಾಗಾದಾಗ ಶಿಲ್ಪಿಯ ಲಕ್ಷಣ ನಿರೂಪಣೆಯು ದೃಷ್ಟಿಯೂ ಬದಲಾಗುತ್ತದೆ. ಹಾಗಾಗಿ ದೃಷ್ಟಿ ಪಲ್ಲಟಗೊಂಡಾಗ ದೃಶ್ಯವೂ ಪಲ್ಲಟ ಗೊಳ್ಳುತ್ತದೆ. ಹಾಗಾಗಿಯೇ ಅವರ 1977–78ರಲ್ಲಿ ಅತಿ ಕಠಿಣವಾದ ಗ್ರಾನೈಟ್ ಶಿಲೆಯ 'Form' ಶಿಲ್ಪ ಅಮೂರ್ತ ಕಲ್ಪನೆಯಂತೆ ಮೂಡಿ ಬಂದಿದ್ದರೆ 1980ರ ಮಹಾಬಲಿಪುರಂ ಬಳಿಯ ಸ್ವಲ್ಪ ನಯವಾದ ಶಿಲೆಯಲ್ಲಿ ಹೆನ್ರಿಮೂರ್‌ನ ಕಾವ್ಯಮಯತೆಗೆ ಹತ್ತಿರವಾದ 'ಚೆಲುವೆ' ಶಿಲ್ಪ ಮೂಡಿ ಬಂದಿದೆ! ಹಾಗೆಯೇ ಮೈಸೂರಿನ ಕಪ್ಪು ಶಿಲೆಯಲ್ಲಿ 1981ರಲ್ಲಿ 'ಅಂಗವಿಕಲೆ' ಶಿಲ್ಪವೂ ಆ ನಿರ್ದಿಷ್ಟ ಶಿಲೆಯನ್ನು ಇಷ್ಟ ಬಂದ ರೀತಿಯಲ್ಲಿ ನಿರ್ವಹಿಸುವ ಸಾಧ್ಯತೆಗಳಿಗೆ ಪೂರಕವಾಗಿಯೇ ಮೂಡಿ ಬಂದಿದೆ.

ಮೋರಿಸೆಲಿಪ್ಸಿ, ಮಲೆವಿಚ್, ಹೆನ್ರಿಮೂರ್, ಮೊದಲಾದವರ ಪ್ರಭಾವಗಳ ಜತೆಜತೆಗೇ ಮಾಧ್ಯಮದ ವಿಶಿಷ್ಟ ಸಂದರ್ಭ ಅವರ ವಾಸ್ತುಶಿಲ್ಪಸದೃಶ್ಯ ಅಗಲ ದಪ್ಪ ಹಾಗೂ ಎತ್ತರಗಳ ಶಿಲ್ಪಗಳು ನೆರಳು – ಬೆಳಕುಗಳ ಆಟದ ಕಲ್ಪನೆಯ ಫಲಗಳಂತೆ ಮೂಡಿ ಬಂದಿವೆ.

ಬೆಳಕಿನ ಚಲನಶೀಲತೆಯ ವೈವಿಧ್ಯ–ವೈರುಧ್ಯಗಳು ದೃಶ್ಯ ಕಲಾವಿದ / ಕಲಾವಿದೆಯರ ದೃಷ್ಟಿಯನ್ನು ಸಾಕಷ್ಟು ಕಾಡಿವೆ. ಕೆ.ವೆಂಕಟಪ್ಪ ಸಹ ತಮ್ಮ ಉಬ್ಬು ಶಿಲ್ಪಗಳೊಂದಿಗೆ ರಾತ್ರಿಗಳಲ್ಲಿ ಆಡಿದ ಆಟದಲ್ಲಿ ದೀಪದ / ಟಾರ್ಚಿನ ಬೆಳಕಿನ ಪಾತ್ರ ನೆನಪು ಮಾಡಿಕೊಳ್ಳಿ. ಇಂತಹ ಕೌತಕಮಯ ಬದುಕಿನ ಭ್ರಮಾತ್ಮಕ ಆಟಗಳ ಕಾರಣಗಳಿಂದಾಗಿಯೇ ಅಚ್ಚರಿಗಳು ಸಾಧಿತವಾಗಿವೆಯಲ್ಲವೆ! ಶಿಲ್ಪಗಳಿಗೆ ಚಲನಶೀಲತೆಯನ್ನು ಶಿಲ್ಪಿ ಕಾಲ್ಡರ್ ತಂದುಕೊಂಡದ್ದು ಇಲ್ಲಿ ನೆನಪಾಗುತ್ತದೆ. ವೆಂಕಟಾಚಲಪತಿಯವರ VITMನಲ್ಲಿ Techno Art Campನಲ್ಲಿ ನಮ್ಮ ಶಿಲ್ಪಿಗಳು ಸಾಧಿಸಿದ್ದು ಅದನ್ನೆ! ಭ್ರಮೆಯನ್ನು ವಾಸ್ತವದ ದೃಶ್ಯಾನುಭವವಾಗಿಸಿದರು. ದೃಷ್ಟಿ ದೃಶ್ಯಗಳ ಪಲ್ಲಟದ ಆ ಪ್ರತಿಕ್ಷಣವನ್ನೂ ಅನುಭವಿಸಿದವರು ವೆಂಕಟಾಚಲಪತಿ.

"1978–79ರ ಸಂದರ್ಭದಲ್ಲಿ ಕ್ರಿಯಾತ್ಮಕ ಶಿಲ್ಪ ಸೃಷ್ಟಿಗೆ ತೊಡಗಿಕೊಂಡೆ" ಎಂದು ವೆಂಕಟಾಚಲಪತಿ ಹೇಳಿಕೊಂಡಿದ್ದಾರೆ. ಈ ಮೊದಲೇ ಹೇಳಿರುವಂತೆ ಹೆಬ್ಬಾರರು ರಾಜ್ಯ ಲಲಿತ ಕಲಾ ಅಕಾಡೆಮಿಗೆ ಅಧ್ಯಕ್ಷರಾಗಿ ಬಂದ ಕಾಲ ಅದು. "Sun Civilization', 'Form' ಶಿಲ್ಪಗಳು ಸೃಜನಶೀಲತೆಯನ್ನು ರೂಢಿಸಿಕೊಂಡಿದ್ದವೇ ಆಗಿದ್ದವು. ಈ ಮೊದಲೇ ಉಲ್ಲೇಖಿಸಿರುವಂತೆ 'Form' ಶಿಲ್ಪ ಗ್ರಾನೈಟ್‌ಶಿಲೆಯಲ್ಲಿ ಮೂಡಿ ಬಂದಿದ್ದು ವೀಕ್ಷಕರು ಶಿಲ್ಪದ ಅವಕಾಶದ (space) ಸುತ್ತಲೂ ದೃಷ್ಟಿ ಹಾಯಿಸಿದರೂ ಒಂದು ನಿರ್ದಿಷ್ಟ ರೂಪವನ್ನು ಕಾಣಲಾರರು.

ಅದೊಂದು ರೂಪ ಮೀರಿದ ಅಮೂರ್ತ ಕಲ್ಪನೆ. ಸಂಪ್ರದಾಯಕ್ಕೆ ಹೆಚ್ಚಿನ ಮನ್ನಣೆಯ ಆ ಸಂದರ್ಭದಲ್ಲಿ, ಅದೂ ಸಾಂಸ್ಥಿಕತೆಯನ್ನು, ಅತಿ ಪಾಂಡಿತ್ಯ ಪೂರ್ವಕ ದೃಷ್ಟಿಯನ್ನು ಮೀರಿದ, ನಿರ್ಲಕ್ಷಿಸುವ ಸೃಷ್ಟಿಯಂತೆಯೂ ನೋಡುಗರು ಭಾವಿಸುವಂತಹ ಸಾಧ್ಯತೆಗಳಿದ್ದ ಶಿಲ್ಪ ಅದು. ಹಾಗೆ ನೋಡಿದರೆ ಅದು ವೆಂಕಟಾಚಲಪತಿಯವರ ಶಿಲ್ಪಸೃಷ್ಟಿಪ್ರಕ್ರಿಯೆಯ ಪ್ರಾರಂಭದ ಶಿಲ್ಪಗಳಲ್ಲಿಯೇ ಗಣನೀಯವಾದದ್ದು. ಅವರ ಮೊದಲನೆಯ ಶಿಲ್ಪ ಅದು! ಈ ಸೃಷ್ಟಿಯನ್ನು ಇನ್ನೂ ಹಲವು ರೀತಿಗಳಲ್ಲಿ ನೋಡುವ ಸಾಧ್ಯತೆಗಳು ನಿಮ್ಮ ಮುಂದೆ ಇವೆ.



ಚಿತ್ರ: 65 "Pain", 1986-87,
Medium: Ston (Heggadadevanakote).
Size: 20"x16",



ಚಿತ್ರ: 66. 'ಕಾಳಿಂಗ ಮರ್ಧನ' 1984–85, 40 ಇಂಚು ಅಗಲ x16 ಇಂಚು ಎತ್ತರ. ಸಂಗ್ರಹ : ಅನಾಮಿಕ.

ಪ್ಲಾಸ್ಟರ್ ಆಫ್ ಪ್ಯಾರೀಸ್ ಮಾಧ್ಯಮವನ್ನು ಸ್ವಚ್ಛಂದ ಛಂದಸ್ಸಿನ ಕಾವ್ಯದಂತೆ ವೆಂಕಟಾಚಲಪತಿ 'Pain' (1984-85), 'reclining man' (1984), 'Mother and child' (1984), 'Youth Spirit' (1986–87) ಮೊದಲಾದ ಶಿಲ್ಪಗಳಲ್ಲಿ ದುಡಿಸಿ ಕೊಂಡಿದ್ದಾರೆ. ರಮ್ಯತೆಗೆ ಹತ್ತಿರವಾದ ಭಾವವೈಭವ. ಹಾಗೆ ನೋಡಿದರೆ ವೆಂಕಟಾಚಲಪತಿಯವರ ಇಡೀ ಸೃಷ್ಟಿ ರಮ್ಯತೆಯನ್ನು ಅವಲಂಬಿಸಿಯೇ ಮೂಡಿ ಬಂದಿದೆ. ಕೇಂದ್ರ ಲಲಿತ ಕಲಾ ಅಕಾಡೆಮಿಯ ಪುರಸ್ಕೃತ ಕಂಚಿನ ಮಾಧ್ಯಮದ ಶಿಲ್ಪವು ವಿಕೃತಿ ಸೌಂದರ್ಯದ ನೆರವು ಪಡೆದುಕೊಂಡಿದ್ದರೂ ರಮ್ಯ ಅನುಭವವನ್ನೇ ನೀಡುತ್ತದೆ; ಹೆನ್ರಿಮೂರ್‌ನ ಇಡೀ ಶಿಲ್ಪಗಳಂತೆ. ಅಚ್ಚರಿಯ ಅಂಶವೆಂದರೆ ಹೆನ್ರಿಮೂರ್‌ನ ಪ್ರಿಂಟ್ ಮಾಧ್ಯಮದ ಅಭಿವ್ಯಕ್ತಿಗಳಲ್ಲಿ ಒರಟುತನದ ಹೊಳಹುಗಳಿವೆ. ಅವನ ಇಂಗ್ಲೆಂಡಿನ stone henge ನ ಪ್ರಿಂಟ್ ಮಾಧ್ಯಮದ ಅಭಿವ್ಯಕ್ತಿಗಳೇ ಇರಲಿ, ಇನ್ನಿತರ ವಸ್ತು, ತಂತ್ರಗಳ ಪ್ರಿಂಟ್‌ಗಳೇ ಇರಲಿ ಒರಟುತನದ ಹಾಜರಿ ಗಮನಾರ್ಹ. ಹಾಗೆಯೇ ವೆಂಕಟಾಚಲಪತಿ ತಮ್ಮ ರೇಖಾಚಿತ್ರಗಳಲ್ಲಿ ಸ್ವಲ್ಪ ಒರಟುತನವನ್ನು ಸಾಧಿಸಿಕೊಂಡಿರುವುದೂ ಗಣನೀಯ. ಆದರೆ ಟೆರಾಕೋಟಾ ಶಿಲ್ಪಗಳನ್ನು ವಿಕೃತಿ



67. ಜಿಂದಾಲ್ ಅಲ್ಯೂಮಿನಿಯಂ ಕಂಪನಿಯಲ್ಲಿ 10 ಅಡಿ ಎತ್ತರದ ಅಲ್ಯೂಮಿನಿಯಂ [illegible]ಕಗಳ ಶಿಲ್ಪ ಸೃಷ್ಟಿಯಲ್ಲಿ ತೊಡಗಿಕೊಂಡಿದ್ದ ವೆಂಕಟಾಚಲಪತಿಯವರೊಂದಿಗೆ ಕಂಪನಿಯ ಕುಶಲಕರ್ಮಿಗಳು.

ಸೌಂದರ್ಯಮೀಮಾಂಸೆಗೆ ಪೂರಕವಾಗಿ ಸೃಷ್ಟಿಸಿದ್ದಾರೆ. ಬಹುತೇಕ ಜಾನಪದೀಯ ಸತ್ವಗಳ ಕಾರಣಕ್ಕಾಗಿ ಅವರ 'FACE' ಅಥವಾ ಕಲ್ಲಿನ ಮಾಧ್ಯಮದ 'ಸೂರ್ಯ ಮತ್ತು ಕೇತು' ಶಿಲ್ಪಗಳೂ ವಿಕೃತಿಯನ್ನು ಗಣನೀಯವಾಗಿ ಅರಗಿಸಿಕೊಂಡಿವೆ. ಹೀಗೆ ಅವರ ಶಿಲ್ಪಗಳು ಹಲವು ಹಾದಿಗಳನ್ನು ಅರಸಿ ಹೊರಟು ನೋಡುಗರಿಗೆ ವೈವಿಧ್ಯಮಯ ಅನುಭವ ಲೋಕಗಳನ್ನು ತೆರೆದು ತೋರುತ್ತವೆ. 2007 ರಿಂದ ವೆಂಕಟಾಚಲಪತಿಯವರು 'Harmony' ಶೀರ್ಷಿಕೆಯ ಶಿಲ್ಪಗಳಿಗೆ ಕಾರಣರಾಗಿದ್ದಾರೆ. ಇದೊಂದು ಪ್ರಕೃತಿ ಹಾಗೂ ಪುರುಷನ ಪರಸ್ಪರದ ವೈಭವೀಕರಣದ ರಮ್ಯಲೋಕ.

"I watch with interest and enthusiasm the evolution of life-force in nature. i try to recreate its many mainfestations in my work. one only needs to watch the beauty of nature and dignity of man to become an artist" ಎಂದು ತಮ್ಮ ಕೆಟಲಾಗ್‌ವೊಂದರಲ್ಲಿ ಹೇಳಿಕೊಂಡಿರುವ ಚಲಪತಿ ಈ ಶೀರ್ಷಿಕೆಯ ಶಿಲ್ಪಗಳಲ್ಲಿ 'ವಸ್ತು ವಿಷಯಕ್ಕೆ ವಿಸ್ತಾರತೆ ಇದೆ' ಎಂದು ಭಾವಿಸಿದ್ದಾರೆ. "Harmony" ಇಲ್ಲಿ ಗಂಡು ಹೆಣ್ಣಿನ ಸಂಬಂಧದ ವಿಷಯವೇ ಅಲ್ಲದೇ ಪ್ರಕೃತಿಯಲ್ಲಿನ ಬೀಜ ಮೊಳಕೆಯೊಡೆಯುವ ಪ್ರಕ್ರಿಯೆಯೂ ಸೃಷ್ಟಿಯ ಸ್ವರೂಪ ಆಗಿದೆ ಎನ್ನುತ್ತಾರೆ.

ಕಂಚಿನ ಮಾಧ್ಯಮದಲ್ಲಿಯೇ ಅಲ್ಲದೆ ಕಲ್ಲಿನಲ್ಲೂ ಮೂಡಿ ಬಂದಿರುವ ಈ ಶಿಲ್ಪ ಸಮೂಹದಲ್ಲಿ ವಾಚ್ಯವಾಗಿಯೇ ಅಲ್ಲದೆ ಸೂಚ್ಯವಾಗಿಯೂ ವಸ್ತು, ಆಶಯಗಳನ್ನು ನಿರ್ವಹಿಸಿಕೊಂಡಿರುವ ಚಲಪತಿ ಇದೇ ಮೊದಲ ಬಾರಿಗೆ ಸಂಕೇತಗಳನ್ನು ದುಡಿಸಿಕೊಂಡಿದ್ದಾರೆ. ಗಂಡು ಹೆಣ್ಣಿನ ಸಂಬಂಧಗಳ ಹಲವು ಒಳನೋಟಗಳು ಗಂಭೀರವಾಗಿ ಕಾಣಿಸಿಕೊಂಡಿವೆ. ಬಾಳ ಸಂಜೆಯ ಸೊಬಗು; ಚಲಪತಿಯವರ ಬದುಕಿನ ತತ್ವಶಾಸ್ತ್ರ, ಪ್ರಕೃತಿಯ ಮೂಲದ ಹುಟ್ಟು – ಬೆಳವಣಿಗೆಗಳ ಆಯಾಮದ ಹಲವು ನೋಟಗಳನ್ನು ನೋಡುಗರೂ ಸ್ಪರ್ಶಿಸುವಂತೆ ಶಿಲ್ಪಿಸಿದ್ದಾರೆ. ನೆರಳು – ಬೆಳಕಿನ ಆಟವೂ ಈ ಶಿಲ್ಪಗಳಿಗೆ ಇಷ್ಟವೇ ಆದಂತಿದೆ.

ಇತಿಹಾಸಪೂರ್ವಕಾಲದಿಂದಲೇ ಪ್ರಕೃತಿಯ ಬಗ್ಗೆ ಅದರ ತಂತ್ರ ಮಾಂತ್ರಿಕ ಗುಣಗಳ ಕಾರಣಕ್ಕಾಗಿ ಭಯ–ಭಕ್ತಿಯಿಂದ ನಡೆದುಕೊಂಡ ಮನುಷ್ಯನು ನಂತರ ಅದನ್ನು ತನ್ನ ಅನುಕೂಲಕ್ಕೆ ನೆರವಾಗಿಸಿಕೊಂಡು ನಾಗರಿಕನಾದ. ಆದರೆ ಕಲಾವಿದರು ಇತಿಹಾಸ ಪೂರ್ವ ಕಾಲದಿಂದಲೇ ಪ್ರಕೃತಿಯ ರೂಪ, ಪ್ರಾಣಿ ಪಕ್ಷಿಗಳನ್ನು ಅವು ಇರುವಂತೆಯೇ ನೈಜವಾಗಿ ಚಿತ್ರಿಸಲು ಪ್ರಯತ್ನಿಸಿದರೂ, ಹಲವು ಸಾಹಸಗಳನ್ನು ಮಾಡಿದರೂ ನಂತರ ಪ್ರಕೃತಿಯ ಸೃಷ್ಟಿಗಳನ್ನು ಸಾಂಕೇತಿಕವಾಗಿ ಗ್ರಹಿಸಲು ಪ್ರಯತ್ನಿಸಿದ್ದೂ ಉಂಟು. ಛತ್ತೀಸ್‌ಗಡದ ಇತಿಹಾಸಪೂರ್ವ ಶಿಲಾಶ್ರಯ ಚಿತ್ರಗಳೇ ಅಲ್ಲದೆ ಘಟ್ಟಮಾದ ಮಂಗಲದ ಶಿಲಾಶ್ರಯ ಚಿತ್ರಗಳಲ್ಲಿ ಈ ಅಂಶ ಸುಸ್ಪಷ್ಟ.

ಹಾಗೆಯೇ ಕ್ಯಾಮರಾ ಕಾಣಿಸಿಕೊಳ್ಳುವುದಕ್ಕಿಂತಲೂ ಮೊದಲು ಹಾಗೂ ಕಾಣಿಸಿಕೊಂಡ ನಂತರದ ದೃಶ್ಯಕಲಾವಿದರ ಅಭಿವ್ಯಕ್ತಿಯ ಸಾಹಸಗಳನ್ನು ಒಮ್ಮೆ ನೆನಪು ಮಾಡಿಕೊಳ್ಳಿ. ದೃಶ್ಯಕಲೆ ಕಂಡು ಕೊಂಡ ಸಾಹಸಮಯ ಆಯಾಮಗಳು


ಪ್ರಾರಂಭದ ಪ್ರಕೃತಿಯ ನಕಲಿನಂತಹ ಕಲೆಗಿಂತ ವಿಭಿನ್ನವೇ ಆಗಿದ್ದವಲ್ಲ. ಆದರೂ ಎಲ್ಲವುಗಳಿಗೂ ಜೀವಧ್ವನಿ ಯಂತಹ ಪ್ರಕೃತಿಯ ಆಗುಹೋಗುಗಳು ದೃಶ್ಯಕಲಾವಿದರನ್ನು ಎಂದೆಂದಿಗೂ ಪ್ರಭಾವಿಸಬಲ್ಲವಷ್ಟೇ ಅಲ್ಲ, ಪ್ರಚೋದಿಸಲೂ ಬಲ್ಲವು. ಹಾಗಾಗಿಯೇ ವೆಂಕಟಾಚಲಪತಿಯವರ 'Harmony' ಕೃತಿ ಮಾಲೆ ಕೆಲವು ವರ್ಷಗಳಿಂದ ನಿರಂತರವಾಗಿ ಮೂಡಿ ಬರುತ್ತಿದೆ. 'ಸಮರಸವೇ ಜೀವನ; ವಿರಸವೇ ಮರಣ' ಜಾಗತೀಕರಣದ ಹಲವು ಅಯೋಮಯ ಬೆಳವಣಿಗೆಗಳ ನಡುವೆ, ಹೆಣ್ಣು ಗಂಡಿನ ನಡುವೆ ಸಮರಸ ಅಥವಾ ಸಾಮರಸ್ಯದ ನಡವಳಿಕೆ ಅತಿ ಅಗತ್ಯ ಎಂದೇ ಭಾವಿಸಿರುವ ಸಂದರ್ಭ ಇದು. ಪ್ರಕೃತಿಯ ನೋಟಗಳೂ ಸಾಮರಸ್ಯತೆಗೆ ಒತ್ತು ನೀಡಿಯೇ ಮುಂದುವರೆಯುವಂತೆ ಕಾಣುತ್ತಿವೆ. ಈ ಸತ್ಯವನ್ನು ಬದುಕಿನಲ್ಲೂ ಕಂಡು ಕೊಳ್ಳುವ ಆಶಯ ವೆಂಕಟಾಚಲಪತಿಯವರದು. ಕರ್ನಾಟಕ ಸರ್ಕಾರದ 2010ರ ಜಕಣಾಚಾರಿ ಪ್ರಶಸ್ತಿಗೆ

68. ವೆಂಕಟಾಚಲಪತಿಯವರೊಂದಿಗೆ ಹಿರಿಯ ಮಗಳು ಬಿ.ವಿ. ಶೃತಿ, ಶ್ರೀಮತಿ ಯಶೋಧಾ ಚಲಪತಿ ಮತ್ತು ಕಿರಿಯ ಮಗಳು ಬಿ.ವಿ. ಶ್ವೇತಾ.



ಪಾತ್ರರಾಗಿರುವ ವೆಂಕಟಾಚಲಪತಿಯವರು ಹಲವು ರೀತಿಯ ಅಧ್ಯಯನ, ವಿಮರ್ಶೆಗಳಿಗೆ ಕಾರಣರಾಗಲಿದ್ದಾರೆ. ಹಲವರ ಗಮನ ಇವರತ್ತ ಹೊರಳಲಿದೆ. 2014ರ ಸಂದರ್ಭದಲ್ಲಿ

ಇಡೀ ಜಗತ್ತಿಗೇ ಅಗತ್ಯವಾದ ವಿಶ್ವಾತ್ಮಕ ಆಶಯದ 'Harmony' ಶಿಲ್ಪಗಳ ಮೂಲಕ ಬದುಕಿನಲ್ಲಿ ಸಾಮರಸ್ಯತೆಯ ತತ್ವ ಅನಿವಾರ್ಯ ಎಂಬ ಅನುಭವ ನೋಡುಗರಿಗೆ ಸಾಧ್ಯವಾಗುವ ನಿಟ್ಟಿನಲ್ಲಿ ಈ ಸರಣಿ ಇನ್ನೂ ಹಲವು ಮುಖಗಳೊಂದಿಗೆ ಮುಖಾಮುಖಿಯಾಗುವ ಸಾಧ್ಯತೆಗಳ ನಾಳೆಗಳು ವೆಂಕಟಾಚಲಪತಿಯವರ ಮುಂದೆ ಇವೆ; ಸವಾಲುಗಳೂ ಇವೆ. ಅ ನಿರಂತರ ಸೃಜನಶೀಲತೆಯ ಸೌಂದರ್ಯಾತ್ಮಕ ಕಾಲದ ಆಟ-ಮಾಟಗಳಿಗೆ ನಾವೆಲ್ಲಾ ಸಾಕ್ಷಿಗಳಾಗೋಣ. ■



69. 1996ರ ಕೇಂದ್ರ ಲಲಿತ ಕಲಾ ಅಕಾಡೆಮಿಯ ವಾರ್ಷಿಕ. ಕಲಾ ಪ್ರದರ್ಶನದ ಪ್ರಶಸ್ತಿಯನ್ನು ಅಂದಿನ ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವರಾಗಿದ್ದ ಸಲ್ಮಾನ್ ಖುರ್ಷೀದ್‌ರವರಿಂದ ಸ್ವೀಕರಿಸುತ್ತಿರುವ ಶಿಲ್ಪಿ ವೆಂಕಟಾಚಲಪತಿ. ಆ ಸಂದರ್ಭದಲ್ಲಿ ಅಕಾಡೆಮಿಯ ಅಧ್ಯಕ್ಷರಾಗಿದ್ದ ಆನಂದ ದೇವ್‌ರವರೂ ಚಿತ್ರದಲ್ಲಿದ್ದಾರೆ.

ಟಿಪ್ಪಣಿಗಳು

1. ದಂಡಾವತಿಮಠ, ಎಂ.ಟಿ.ವಿ. ಆಚಾರ್ಯ, ಆರ್.ಎಂ. ಹಡಪದ್‌ರಂತಹ ಅಪರೂಪದ ಕಲಾಗುರುಗಳೂ ಇಲ್ಲಿ ನೆನಪಾಗುತ್ತಾರೆ.

2. ಅನ್ನದ ಸಮಸ್ಯೆಯನ್ನು ಎದುರಿಸುತ್ತಲೇ ನಾಗರೀಕತೆಯಲ್ಲಿ ಸಂಸ್ಕೃತಿಗಳು ಬೆಳೆದು ಬಂದಿವೆ. ಶಿವರಾಮ ಕಾರಂತರ 'ಕಲೆಯ ದರ್ಶನ', ಅರ್ನ್‌ಸ್ಟ್ ಫಿಶ್ಚರ್‌ರವರ 'The necessity of Art' ಇರಲಿ, ಆನಂದ ಕುಮಾರ ಸ್ವಾಮಿಯವರ 'what is civiliztion? ಸಹ ಮನುಷ್ಯನ ಮೂಲಭೂತ ಅಗತ್ಯ ಅನ್ನ-ಶ್ರಮಗಳ ಬಗ್ಗೆ ಚಿಂತಿಸಿಯೇ ಮುಂದೆ ಹೋಗಿವೆ. ಹಸಿವನ್ನು ಹಿಂಗಿಸಿಕೊಳ್ಳುವ ಹಿನ್ನೆಲೆಯಲ್ಲಿಯೇ ಮಾಂತ್ರಿಕತೆಯ ಇತಿಹಾಸಪೂರ್ವ ಗುಹೆ, ಶಿಲಾಶ್ರಯ ಚಿತ್ರಗಳು ರೂಪು ಗೊಂಡದ್ದು.

   1940ರ ಸಂದರ್ಭ, ಮುಂಬಯಿಯ ಜೆ.ಜೆ. ಕಲಾಶಾಲೆಯಿಂದ ಕಲಿತು ಬಂದ ಉತ್ತರ ಕರ್ನಾಟಕದ ಎಷ್ಟೋ ಕಲಾವಿದರು ಬಡತನಕ್ಕೆ ಬಲಿಯಾದದ್ದು ಉಂಟು. ಮಠಗಳ ಆಶ್ರಯ ಪಡೆದವರು ಮುನ್ನಡೆದರು.

3. ಕವಿ ದ.ರಾ. ಬೇಂದ್ರೆಯವರ ಕವನ 'ನಾನು' ಗಮನಿಸಿ. ಹಾಗೆಯೇ ಹೆಬ್ಬಾರರ ಪಂಚಭೂತಗಳ ಕಲಾಕೃತಿಗಳು ಮೂಡಿಬಂದ ಹಿನ್ನೆಲೆ ಏನಿರಬಹುದು? ಬೇಂದ್ರೆಯವರು 'ನಾನು' ಕವನದಲ್ಲಿ "ನನ್ನ ತಾಯಿಯ ಹಾಲು ನೆತ್ತರವ ಕುಡಿದಂಥ ಜೀವಂತ ಮಮತೆ ನಾನು! ಈ ಐದು ಐದೆಯರ ಪಂಚಪ್ರಾಣಗಳಾಗಿ ಈ ಜೀವ ದೇಹನಿವನು!" ಸಾಲುಗಳನ್ನು ಓದಿ. ಐದು ಐದೆಯರು ಅಂದರೆ ಐವರು ತಾಯಿಯವರು, ಪಂಚಪ್ರಾಣಗಳೇ ಅಲ್ಲದೆ ಕವನದ ಹೊರವಲಯದ ಸಪ್ತಮಾತೃಕೆ ಇತ್ಯಾದಿ ಉಕ್ತಿಗಳನ್ನು ನೆನಪು ಮಾಡಿಕೊಳ್ಳಬಹುದು.

4. ಎಲ್ಲ ದೃಶ್ಯ ಕಲಾವಿದರ ಬಹುತೇಕ ಗ್ರಹಿಕೆಯ ಮೂಲಸತ್ವ ಪಯಣವೇ ಆಗಿದೆ. ರಾಮದಾಸ್ ಅಡ್ಯಂತಾಯರವರ ಮಿಶ್ರಮಾಧ್ಯಮದ ಅಭಿವ್ಯಕ್ತಿಗಳ ಶೀರ್ಷಿಕೆ "Journey". ಅವರಿಗೆ ಅಭಿವ್ಯಕ್ತಿಯೊಂದು ನಿಲ್ಲದ ಬದುಕಿನ ನಿರಂತರ ಪ್ರಕ್ರಿಯೆ. ದೇಶ ಕಾಲಗಳನ್ನು ಮೀರಿ ನಡೆಯುವ ಸೃಷ್ಟಿಶೀಲತೆ.

5. ದೃಶ್ಯಕಲೆಯ ನೋಡುಗರೆಂದರೆ ಯಾರು? ಇದೊಂದು ಮಹಾಪ್ರಶ್ನೆಯಾಗಿ ಕಾಡುತ್ತಿರುವ 21ನೆಯ ಶತಮಾನದ ದೃಶ್ಯಕಲೆಯ ಸಂಕೀರ್ಣ ಸಂದರ್ಭದ ಮಹಾನ್ ಅಚ್ಚರಿ. ಹಲವು ನೆಲೆಯ, ಪ್ರಕಾರದ ಕಲಾಕೃತಿಗಳನ್ನು ನೋಡುವ ಮೂಲಕವೇ ಅನುಭವ ಸಾಧಿಸುವ ಕ್ರಿಯೆಯಲ್ಲಿ ಪಾಲ್ಗೊಳ್ಳುವ ಈ 'ನೋಡುಗರ' ಕುರಿತ ಕುತೂಹಲ ಇದ್ದೇ ಇದೆ.

6. 2011ರ ಸಂದರ್ಭದಲ್ಲಿ ಕರ್ನಾಟಕದಲ್ಲಿಯೇ ಏಕೆ, ಇಡಿ ಭಾರತದಲ್ಲಿ ನಮ್ಮ ಬಹುತೇಕಯುವ ದೃಶ್ಯ ಕಲಾವಿದ / ಕಲಾವಿದೆಯರ ಅಭಿವ್ಯಕ್ತಿಗಳು AutoBiography ಯನ್ನು ನೆನಪಿಸುವ ಹಾಗೆಯೇ ಇದ್ದವು. ಅವರ ಖಾಸಗೀ ಬದುಕಿನ, ಸಂಕೋಚವನ್ನೂ ಮೀರಿದ ಹಲವು ಒಳನೋಟಗಳನ್ನು ನೋಡುಗರೂ ಅನುಭವಿಸುವ ರೀತಿಯಲ್ಲಿ ಮಾನಸಿಕ ದೂರ (Psychicaldistance) ಸಾಧಿಸಿ ಅಭಿವ್ಯಕ್ತಿಸಲಾಗಿತ್ತು. ಹಿರಿಯ ಕಲಾವಿದರನೇಕರೂ ಈ ದೃಷ್ಟಿಗೆ ಹೊರತಲ್ಲ. ಎಸ್.ಜಿ. ವಾಸುದೇವ್, ಕೆ.ಟಿ. ಶಿವಪ್ರಸಾದ್, ವಿ.ಜಿ. ಅಂದಾನಿ, ಯೂಸೂಫ್ ಅರಕ್ಕಲ್, ಮೊದಲಾದವರು ಇಲ್ಲಿ ನೆನಪಾಗುತ್ತಾರೆ. 2011ರ ಸಂದರ್ಭದಲ್ಲಿ ಅಭಿವ್ಯಕ್ತಗೊಂಡ ಯೂಸೂಫ್ ಅರಕ್ಕಲ್‌ರವರ Arto-mobile', ಈ ದೃಷ್ಟಿಯಿಂದ ಯುಬಿಸಿಟಿಯ ಬೆಂಗಳೂರು ಕಲಾಹಬ್ಬದಲ್ಲಿ ಗಮನಸೆಳೆದದ್ದು ಉಂಟು. 1984ರಲ್ಲಿ ಕೊಂಡ ಅವರ ಫಿಯೆಟ್ ಕಾರನ್ನು 2011ರ ಕಾರುಗಳ ವೈಭವ-ಹಣದ ಹೊಳೆಗಳ ನಡುವೆ

ಇತರರು ಗುಜರಿಗೆ ಕಳುಹಿಸಿ ಕೈತೊಳೆದು ಕೊಳ್ಳುತ್ತಿದ್ದರೇನೋ! ಹಾಗೆ ಮಾಡುವುದಕ್ಕೂ ಸಮಯವಿಲ್ಲದವರೂ ಕಡಿಮೆ ಸಂಖ್ಯೆಯಲ್ಲೇನೂ ಇಲ್ಲ; ಇರಲಿ. ಆದರೆ ಯೂಸೂಫ್‌ರ ಕಲಾವಿದನ ಜಾಣ್ಮೆ-ಎಚ್ಚರ-ಸಮಕಾಲೀನತೆಗಳು ಅಂತಹ ಸಾಮಾನ್ಯಕಾರನ್ನು ಕಲಾಕೃತಿಯಾಗಿಸಿದವು. ಯೂಸೂಫ್‌ರ ಈ ಅಭಿವ್ಯಕ್ತಿ 'ಕಲೆ ಮತ್ತು ತಂತ್ರಜ್ಞಾನಗಳ, ಕನಸು ಮತ್ತು ತತ್ವಶಾಸ್ತ್ರಗಳ ಹಾಗೂ ಶಿಲ್ಪ ಮತ್ತು ಇನ್‌ಸ್ಟಾಲೇಷನ್‌ಗಳ ಸಂಗಮ'. 1984ರಲ್ಲಿ ದೃಶ್ಯಕಲೆಯ ಸಂಗ್ರಾಹಕ ಹರೀಶ್ ಪದ್ಮನಾಭರವರಲ್ಲಿ ತಮ್ಮೆರಡು ತೈಲ ವರ್ಣ ಚಿತ್ರ ಹಾಗೂ ಶಿಲ್ಪಗಳಿಗೆ ಬದಲಾಗಿ ಯೂಸೂಫ್ Fiat Millicento ಕಾರನ್ನು ಪಡೆದಿದ್ದರು. ನಂತರದ್ದು ಇತಿಹಾಸ. ಹೊಸ ಕಾರುಗಳು ಅವರ ಅಂಗಳವನ್ನು ಆಕ್ರಮಿಸಿಕೊಂಡರೂ ಮೊದಲ ಕಾರಿನ ಮೇಲಿನ ಪ್ರೀತಿ ಕಾಲಾತೀತ; ಮಾರುವ ಮನಸ್ಸು ಆಗಲಿಲ್ಲ. ಈ 'ಮೊದಲ ಪ್ರೀತಿ' ಯೂಸೂಪ್ ತಮ್ಮ ಕಲಾವಿದ ಮಿತ್ರ ಜೋಸೆಫ್ ಅಂಟೋನಿಯವರೊಂದಿಗೆ collaborate ಆಗಿ ಹಳೆಯಕಾರು ಹೊಸ ರೀತಿಯಲ್ಲಿ ಅವತಾರ ತಾಳಲು ಕಾರಣವಾಯಿತು. ಅದರ ಎಂಜಿನ್, ಗಿಯರ್ ಬಾಕ್ಸ್ ಮತ್ತಿತರ ಚಲನಶೀಲತೆಗೆ ನೆರವಾಗುವ ಭಾಗಗಳನ್ನು ಹೊರತೆಗೆದು ತಾಮ್ರದ ಹಲವು ಆಕಾರ, ಸಾಂಕೇತಿಕ ರೂಪಗಳ ಸಂಯೋಜನೆಗಳನ್ನು ಹೊಂದಿಸಲು ಐದು ವರ್ಷಗಳ ಕಾಲ ಯೋಜಿಸಿ, ಯೋಚಿಸಿ ರೂಪಾಂತರಿಸಲಾಯಿತು. ಸಿಂಧೂ ಕಣಿವೆ ಹಾಗೂ ಈಜಿಪ್ಟ್ ನಾಗರೀಕತೆಗಳ ಹಲವು ಅಂಶಗಳನ್ನು ಕಾರಿನ ಮೇಲ್ಮೈಯಲ್ಲಿ ಹೊಂದಿಸಲಾಗಿದೆ. ಇದೊಂದು ಯಂತ್ರ ಮತ್ತು ತಂತ್ರಜ್ಞಾನಕಾಲಗಳೆರಡರ ರೂಪಕವೇ ಸರಿ; ಕಲಾವಿದ ಹಾಗೂ ನಮ್ಮ ವಿಕಾಸದ ಸಾಂಕೇತಿಕ ಕಥಾನಕವೂ ಹೌದು. ಆದರೆ ಈ ಎಲ್ಲದರ ನಡುವೆಯೂ ವೆಂಕಟಾಚಲಪತಿಯವರ ಶಿಲ್ಪಗಳಲ್ಲಿ ಆತ್ಮ ಚರಿತ್ರೆಯ ಸ್ಫೂರ್ತಿಯಿಂದ ಮೂಡಿಬಂದ ಗ್ರಹಿಕೆಗಳನ್ನು ಅನುಭವಿಸುವುದು ಸಾಧ್ಯವಾಗದು; ರಮ್ಯಲೋಕ ಅದು.

7. ಪಿಕಾಸೋ, ಹೆನ್ರಿಮೂರ್, ರವೀಂದ್ರನಾಥ ಥಾಕೂರ್ ಹೆಬ್ಬಾರ್‌ರಂಥವರಲ್ಲಿ ಅವರ ಅಂತಿಮ ದಿನಗಳಲ್ಲಿ ಸಾಧಿಸಿಕೊಂಡ ಸಂವೇದನೆಯೇ ಈ 'ಮುಗ್ಧತೆ', ಹಾಗಾಗಿ child sensibility ಸಾಧಿಸಲು "ನನಗೆ 40 ವರ್ಷ ಬೇಕಾಯಿತು" ಎಂದು ಪಿಕಾಸೋ ಹೇಳಿಕೊಂಡರೆ ಇತರರು ತಮ್ಮ ಅಭಿವ್ಯಕ್ತಿಗಳೇ ಅಲ್ಲದೆ ಸ್ವಯಂ ವ್ಯಕ್ತಿತ್ವದ ಮೂಲಕವೂ ದರ್ಶಿಸಿದರು. 'small and beautiful', 'simple and beautiful' ಇತ್ಯಾದಿ ಮಾತುಗಳ ಹಿಂದಿನ ಮಹಾ ಆಶಯವೇ ಎಲ್ಲವನ್ನೂ ಅರಗಿಸಿಕೊಂಡು ಮೀರಿ ಬೆಳೆದು ಸರಳೀಕರಿಸಿಕೊಂಡ, ಸುಲಭೀಕರಿಸಿಕೊಂಡ, ಸಂಕ್ಷಿಪ್ತಗೊಳಿಸಿಕೊಂಡ, ಈ ಮಿತ-ಹಿತ-ಮೀಮಾಂಸೆ.

8. ಬೆಂಗಳೂರಿನ ಕೆಂಪೇಗೌಡ ವಿಮಾನ ನಿಲ್ದಾಣವಿರುವುದು ದೇವನಹಳ್ಳಿಯ ಹತ್ತಿರವಷ್ಟೆ. ದೇವನಹಳ್ಳಿಯಲ್ಲಿ ದಿ॥ ಹನುಮಂತಾಚಾರ್ಯರ ಶ್ರೀಮತಿ ಹಾಗೂ ಮಕ್ಕಳ ಮಾರ್ಗದರ್ಶನದಲ್ಲಿ 2014ರ ಸಂದರ್ಭದಲ್ಲಿಯೂ ಶಿಲ್ಪಕಲಾ ಶಾಲೆ ವ್ಯವಸ್ಥಿತವಾಗಿ ಕೆಲಸ ಮಾಡುತ್ತಿತ್ತು.

9. 1919ನೆಯ ಆಗಸ್ಟ್ 17ರಂದು ಬಳೇಪೇಟೆ ಸುಗ್ರೀವನ ಗುಡಿಯ ಪಕ್ಕದ ಮಳಿಗೆಯೊಂದರಲ್ಲಿ ಕಲಾಮಂದಿರ ಪ್ರಾರಂಭವಾಯಿತು. ಕಲೆಯನ್ನು ಒಂದು ವೃತ್ತಿಯನ್ನಾಗಿಸುವ ಉದ್ದೇಶದಿಂದ ತರುಣರಿಗೆ ಕಲಾಶಿಕ್ಷಣದ ಏರ್ಪಾಡು ಮಾಡಿದ ಮೊದಲ ಕಲಾ ಶಾಲೆ ಕಲಾಮಂದಿರ (ನೋಡಿ : ಪು : 95, ಅನಸು. ಕಲಾಚಿಂತನ, ಪ್ರ : ಕಲಾಮಂದಿರ, ಹನುಮಂತನಗರ, ಬೆಂಗಳೂರು-19, ಕಿ.ರಂ. ನಾಗರಾಜರವರು ಸಂಪಾದಿಸಿಕೊಟ್ಟ ಅ.ನ. ಸುಬ್ಬರಾವ್‌ರವರ ಲೇಖನಗಳ ಸಂಗ್ರಹ ಇದು, 1994).

ಕಲಾಶಿಕ್ಷಣ ವಿಭಾಗದಲ್ಲಿ ಪ್ರಾರಂಭದಲ್ಲಿ ಇದ್ದವರು ನಾಲ್ಕು ಮಂದಿ! ಆದರೆ ಆ ವರ್ಷದ ಅಂತ್ಯಕ್ಕೆ 18ಕ್ಕೆ ಏರಿ ಮುಂದೆ ಹೆಚ್ಚಾಗುತ್ತಲೇ ಹೋಯಿತು. ಪ್ರಾರಂಭದಲ್ಲಿ ಕಲಾಮಂದಿರದಲ್ಲಿ ಅನೇಕ ವರ್ಷಗಳು ಶಿಕ್ಷಣ ಉಚಿತವಾಗಿತ್ತು! ಅರ್ಹ ಬಡ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ 5 ರಿಂದ 10 ರೂಪಾಯಿ ವಿದ್ಯಾರ್ಥಿ

ವೇತನವೂ ಇದ್ದಿತು. ವಿದ್ಯಾರ್ಥಿ ವೇತನ ಪಡೆಯುವವರು ಪ್ರಾತಃ ಕಾಲ ಮತ್ತು ಮಧ್ಯಾಹ್ನ ಎರಡೂ ವೇಳೆ ವ್ಯಾಸಂಗ ನಿರತರಾಗಿರಬೇಕಿತ್ತು. ಜತೆಗೆ ಮುಂದೆ ಕಲೆಯನ್ನು ವೃತ್ತಿಯನ್ನಾಗಿ ಸ್ವೀಕರಿಸುವೆನೆಂದು ಭರವಸೆ ನೀಡಬೇಕಿತ್ತು! 'ಸ್ವಾತಂತ್ರ್ಯವೇ ಸ್ವರ್ಗ; ಸ್ವಾವಲಂಬನೆಯೇ ಸ್ವಾತಂತ್ರ್ಯದ ಹಾದಿ' ಎಂಬ ಘೋಷಣೆ ಅ.ನ. ಸುಬ್ಬರಾವ್‌ರವರ ಕಲಾಮಂದಿರದ ಮೂಲಮಂತ್ರ. ಕಲಾಮಂದಿರ ಕೇವಲ ಲಲಿತ ಕಲೆಯನ್ನು ಕಲಿಯುವ ಶಾಲೆಯಾಗಿ ಮಾತ್ರವೇ ಉಳಿಯಲಿಲ್ಲ. ಲಲಿತ ಕಲೆ ಕುಶಲಕಲೆಗಳನ್ನವಲಂಬಿಸಿಯೇ ಬೆಳೆಯಬೇಕೆಂಬ ಆಶಯದಂತೆ ಕಲಾಮಂದಿರದ ಕಾರ್ಯಸೂಚಿ, ಹಾಗೂ ಕಾರ್ಯಕ್ರಮಗಳು ಇರುತ್ತಿದ್ದವು. ಖಾದಿ ಮತ್ತು ಸ್ವದೇಶೀ ಚಳುವಳಿಯ ದಿನಗಳವು : 1922. ಕಲಾವ್ಯಾಸಂಗದೊಂದಿಗೆ ಪ್ರಥಮವಾಗಿ ಕುಶಲ ಕೈಗಾರಿಕೆಯ ವಿಭಾಗವೂ ಕಲಾಮಂದಿರದ ಆಶ್ರಯದಲ್ಲಿ ಪ್ರಾರಂಭವಾಯಿತು. 1922ರಲ್ಲಿ ಗಯಾ ಕಾಂಗ್ರೆಸ್ ಅಧಿವೇಶನಕ್ಕೆ ಸುಬ್ಬರಾವ್‌ರವರು ಸೂಟ್‌ಕೇಸ್‌ಗಳೊಂದಿಗೆ ಹೋಗಿದ್ದರು. ಹಲವು ಪೆಟ್ಟಿಗೆಗಳು ಮಾರಾಟವಾದವು. ಅಧಿವೇಶನದಲ್ಲಿ ಸ್ವದೇಶಿ ವಸ್ತು ಪ್ರದರ್ಶನ ಉದ್ಘಾಟಿಸಿದ ಮೋತಿಲಾಲ್ ನೆಹರುರವರಿಗೆ ಒಂದು ಸೂಟ್‌ಕೇಸ್‌ನ್ನು ಸುಬ್ಬರಾಯರು ಉಡುಗೊರೆಯಾಗಿ ನೀಡಿದರು.

ಅ.ನ. ಸುಬ್ಬರಾವ್‌ರವರು ಬೆಳೆದ ಬಾಲ್ಯದ ಸಂದರ್ಭ, ದೊರೆತ ಅನುಭವಗಳು ಕಲಾಮಂದಿರ ಸ್ಥಾಪಿಸಲು ಕಾರಣವಾಗಿವೆ. ಹೆಚ್ಚಿನ ವಿವರಗಳಿಗೆ ಕಲಾ ಮಂದಿರದ ಪ್ರಕಟಣೆಗಳು 'ಅನಸು – ಕಲಾಚಿಂತನ' 'ಕಲಾರಾಧಕ : ಟಿ.ಎಸ್. ಸುಬ್ರಮಣ್ಯಂ', ಲಲಿತ ಕಲಾ ಅಕಾಡೆಮಿಯ ಹರಿಹರಪ್ರಿಯರವರ 'ಅ.ನ. ಸುಬ್ಬರಾವ್' ಪುಸ್ತಕಗಳನ್ನು ಓದಿ.

10. ಒಂದು ಅಪರೂಪದ ಪುಸ್ತಕ 'ದೃಗ್ದರ್ಶನ', perspective, ದೃಶ್ಯರಚನಾ ವಿಧಾನ. ಗ್ರಂಥಕರ್ತರು: ಅ.ನ. ಸುಬ್ಬರಾವ್, ಕಲಾಮಂದಿರದ ಸಂಸ್ಥಾಪಕರು ಮತ್ತು ನಿರ್ದೇಶಕ ಪ್ರಕಟಣೆ : ಕಲಾಪ್ರಕಾಶನ, ಕಲಾಮಂದಿರ, ಬಸವನಗುಡಿ, ಬೆಂಗಳೂರು–4, 1973. ಬೆಲೆ: 12 ರೂಪಾಯಿ. perspective ಗೆ ದೃಶ್ಯಚಿತ್ರ ಎಂಬ ಪದವನ್ನೂ ಬಳಸಿರುವ ಸುಬ್ಬರಾವ್ ಅಂತಿಮವಾಗಿ ತಾತಾಚಾರ್ಯ ಶರ್ಮರ ಸೂಚನೆಯಂತೆ 'ದೃಗ್ದರ್ಶನ' ಎಂದು ನಾಮಕರಣ ಮಾಡಿದ್ದಾಗಿ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ವಿಷಯಸೂಚಿಯ ವಿಸ್ತಾರವೂ ಗಮನಾರ್ಹ.

ಪ್ರಥಮಭಾಗದಲ್ಲಿ ಮುಖಪತ್ರ ಮತ್ತು ವಿವರಣೆ, ಸಮರ್ಪಣೆ, ಮುನ್ನುಡಿಗಳಿವೆ. ಚಿತ್ರಕಲೆಯ ಸ್ಥಾನ ಮತ್ತು ಚಿತ್ರಾಂಕುರ, ಸಾಂದ್ರಚಿತ್ರದಿಂದ ರೇಖಾಚಿತ್ರ, ಸಮತಲದಲ್ಲಿ ಘನವಸ್ತುಗಳ ಚಿತ್ರರೂಪ ಮತ್ತು ವಸ್ತು ಚಿತ್ರ, ವಸ್ತುಚಿತ್ರ ರಚನಾಕ್ರಮ, ಕಣ್ಣಿನ ರಚನೆ ಮತ್ತು ಕ್ರಿಯೆ, ಚಿತ್ರೀಕರಣದ ವೈವಿಧ್ಯತೆ, ಪ್ರಮಾಣ ಮಾಪಕ, ಅಳತೆಪಟ್ಟಿ, ಎರಡನೆಯ ಭಾಗದಲ್ಲಿ ದೃಗ್ದರ್ಶನ ಸಲಕರಣೆ, ಸಲಕರಣೆಗಳ ವಿವರಣೆ, ದೃಗ್ದರ್ಶನ ಚಿತ್ರ ರಚನಾಕ್ರಮ, ಸಂವಿಧಾನ ಸಿದ್ಧತೆ, ಹಾಗಯೇ ವಿವಿಧ ವಸ್ತುಗಳ ದೃಶ್ಯಚಿತ್ರ–ಸಮಾನಾಂತರ ದೃಶ್ಯಗಳು, ಮೂಲೆನೋಟದ ದೃಶ್ಯಗಳು, ಜ್ಯೋಮಿತಿಯ ಚಿತ್ರಗಳ ನೆರವಿನಿಂದ ದೃಶ್ಯಚಿತ್ರ ರಚನೆ ಇತ್ಯಾದಿ ಶೀರ್ಷಿಕೆಗಳಡಿ ಅಪರೂಪದ ವಿವರಗಳಿವೆ. ವಾಸ್ತುಶಿಲ್ಪ ಕುರಿತ ವಿವಿರಗಳೂ ಗಣನೀಯ. ಪುಸ್ತಕದಲ್ಲಿ ಬಳಸಿರುವ ಇಂಗ್ಲೀಷ್ ಪದಗಳ ಕನ್ನಡ ರೂಪಗಳೂ ಉಪಯುಕ್ತ.

11. ಕೆ.ಕೆ. ಹೆಬ್ಬಾರರ ಅಧ್ಯಕ್ಷತೆಯಲ್ಲಿ ಕರ್ನಾಟಕ ಲಲಿತ ಕಲಾ ಅಕಾಡೆಮಿ 1977ರಲ್ಲಿ ರಚನೆಗೊಂಡಾಗ 1978ರಲ್ಲಿ ಸ್ವಾಯತ್ತತೆ (autonomousbody) ಪಡೆದ ಹೆಗ್ಗಳಿಕೆಗೂ ಪಾತ್ರವಾಯಿತು. ಅಕಾಡೆಮಿಯ ಇತರ ಸದಸ್ಯರು ವಿ.ಜಿ. ಅಂದಾನಿ, ಎಂ.ಟಿ.ವಿ. ಆಚಾರ್ಯ, ರೂಮಾಲೆ ಚನ್ನಬಸವಯ್ಯ, ಆರ್.ಎಂ. ಹಡಪದ್, ಡಿ.ವಿ. ಹಾಲಭಾವಿ, ಎಂ.ಎಫ್. ಹುಸೇನ್, ಎಸ್.ಎ. ಕೃಷ್ಣನ್, ಕೆ.ಬಿ. ಕುಲಕರ್ಣಿ, ಎಂ.ಎಸ್. ನಂಜುಂಡರಾವ್, ಬಿ.ವಿ.ಕೆ. ಶಾಸ್ತ್ರಿ, ಜಿ.ಎಸ್. ಶೆಣೈ, ವಿ.ಜಿ. ಸಿಂಧೂರ್, ವೈ. ಸುಬ್ರಮಣ್ಯ ರಾಜು, ಎಸ್.ಜಿ. ವಾಸುದೇವ್ ಮೊದಲಾದವರಿದ್ದರು. 1978–79ರಲ್ಲಿಯೇ ಹಲವು ಚಟುವಟಿಕೆಗಳು ಹೆಚ್ಚು ಉಪಯುಕ್ತವಾಗುವ ರೀತಿಯಲ್ಲಿ ರಾಜ್ಯದ ಒಳಗೆ ಹಾಗೂ ಹೊರಗೆ ಪ್ರಾರಂಭಿಸಲ್ಪಟ್ಟವು. 10ನೆಯ ರಾಜ್ಯಮಟ್ಟದ ದೃಶ್ಯಕಲಾ ಪ್ರದರ್ಶನ ಬೆಂಗಳೂರಿನ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ನಡೆದ ನಂತರ ಆಗಿನ ಮದರಾಸಿನ (ಚೆನ್ನೈ) ಕೇಂದ್ರ ಲಲಿತ ಕಲಾ ಅಕಾಡೆಮಿಯ ವಿಭಾಗೀಯ ಕೇಂದ್ರದ ಗ್ಯಾಲರಿಯಲ್ಲಿಯೂ

ಪ್ರದರ್ಶಿಸಲ್ಪಟ್ಟಿತು. ಹೀಗೆ ಕನ್ನಡದ ಪ್ರತಿಭೆಗಳ ಚಿತ್ರ ಶಿಲ್ಪಗಳು ರಾಜ್ಯದ ಹೊರಗೆ ಕಾಣಿಸಿಕೊಂಡದ್ದು ಅದೇ ಮೊದಲು. ಈ ಪ್ರದರ್ಶನದಲ್ಲಿ ವೆಂಕಟಾಚಲಪತಿಯವರ SUN GOD ಹೆಬ್ಬಾರರೇ ಅಲ್ಲದೇ ನೋಡುಗರ ಗಮನವನ್ನೂ ಸೆಳೆಯಿತು. ವಿಶೇಷವೆಂದರೆ ಆಗ ಪ್ರಾರಂಭವಾದ ಕಲಾವಾರ್ತೆಯ ಮೊದಲ ಸಂಚಿಕೆಗಳು ಕನ್ನಡ ಇಂಗ್ಲೀಷ್‌ಗಳೆರಡರಲ್ಲೂ ಇದ್ದವು. ಇಡೀ ಭಾರತದ ಕಲಾರಂಗದ ಸಂಕ್ಷಿಪ್ತ ನೋಟ ಅವುಗಳಲ್ಲಿದೆ.

12. Techno Art Camp - 1982

ಬೆಂಗಳೂರಿನ ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ಮ್ಯೂಸಿಯಂ ಆಶ್ರಯದಲ್ಲಿ 1982ರಲ್ಲಿ Techno Art Camp ನಡೆಯಿತು. ಅದೊಂದು ವಿಶಿಷ್ಟ ದೃಷ್ಟಿಯ ಶಿಬಿರ. ಕಲಾವಿದರು ತಂತ್ರಜ್ಞರನ್ನು, ಕಲೆ ಹಾಗೂ ವೈಜ್ಞಾನಿಕ ತಂತ್ರಜ್ಞಾನಗಳನ್ನು ಸಮ್ಮಿಲನ ಗೊಳಿಸಿದ ಅಪರೂಪದ ಸಂದರ್ಭ. ಒಂದು ರೀತಿಯಲ್ಲಿ ಕಲಾವಿದರು ಮತ್ತು ತಂತ್ರಜ್ಞರು ಪರಸ್ಪರ ಸಹಕರಿಸಿ ಅನನ್ಯ ಸೃಷ್ಟಿ ಪ್ರಕ್ರಿಯೆಗೆ ಕಾರಣವಾದ collaborative ಕಲೆಯ ಶಿಬಿರ. (ಹಾಗಾಗಿಯೇ ನಂತರದ ದಿನಗಳಲ್ಲಿ ವಾಸುದೇವ್, ತಮ್ಮ ಕಲಾಸೃಷ್ಟಿಯಲ್ಲಿ ಕುಶಲಿಗಳ, ತಂತ್ರಜ್ಞರ ನೆರವನ್ನು ದೊಡ್ಡ ರೀತಿಯಲ್ಲಿ ದುಡಿಸಿಕೊಂಡರು) ಆ ಸಂದರ್ಭದಲ್ಲಿ ವೆಂಕಟಾಚಲಪತಿ VITM ನಲ್ಲಿ Modeller ಆಗಿಯೇ ಕೆಲಸ ನಿರ್ವಹಿಸುತ್ತಿದ್ದರು. ಶಿಬಿರದಲ್ಲಿ ಅಂದಿನ ಖ್ಯಾತ ಶಿವಸಿಂಗ್, ರಾಘವ ಕನೇರಿಯಾ, ಕನ್ನೈಯಿ ಕುನ್ಹಿರಾಮನ್, ವಿದ್ಯಾ ಶಂಕರ ಸ್ಥಪತಿ, ಜಿ.ಎಸ್. ಶೆಣೈ, ಭಾಸ್ಕರರಾವ್, ವಾಸುದೇವ್, ಸರ್ಬರಿ ರಾಯ್-ಚೌದುರಿ, ದೇಶಪಾಂಡೆ, ಅಂಚನ್‌ರವರುಗಳು ಪಾಲ್ಗೊಂಡು ಸೃಷ್ಟಿಸಿದರು. ಆ ಸಂದರ್ಭದಲ್ಲಿ ಕೆಲವರು ಕಲೆ ಮತ್ತು ತಂತ್ರಜ್ಞಾನ ಬಳಸಿಕೊಂಡ ಸೃಷ್ಟಿಗಳಿಗೆ ಮುಂದೆಯೂ ಕಾರಣರಾಗುವುದಾಗಿ ಶಿಬಿರದ ಸ್ಮರಣಿಕೆಯಂತಹ ಇಂಗ್ಲೀಷ್ ಕೆಟಲಾಗಿನಲ್ಲಿ ಹೇಳಿಕೊಂಡಿದ್ದರು. ಆದರೆ ಹೊರಗಿನವರು ಇರಲಿ ನಮ್ಮವರಲ್ಲಿ ಒಬ್ಬರೂ ತಂತ್ರಜ್ಞಾನ ಆಧಾರಿತ ಒಂದೇ ಒಂದು ಶಿಲ್ಪವನ್ನೂ ಸೃಷ್ಟಿಸಿಲಿಲ್ಲ. ಹಾಗೆ ಆಗಿದ್ದಲ್ಲಿ ಕಾಲ್ಡರ್ ಯಾಂತ್ರಿಕ ಚಲನಶೀಲತೆಯನ್ನು ದುಡಿಸಿಕೊಂಡಂತಹ ಅಭಿವ್ಯಕ್ತಿ ಕ್ರಮಗಳು ನಮ್ಮಲ್ಲೂ ವಿಭಿನ್ನವಾಗಿ ಸಾಧ್ಯವಾಗುತ್ತಿದ್ದವು.

13. ಮಯೂರ 1969ರ ಜನವರಿ ಸಂಚಿಕೆಯ ಕನ್ನಡದ ಪೆಂಪು ಕುವೆಂಪು, ಸಂದರ್ಶನ: ಸುಜನಾ ಗಮನಿಸಿ. ಮಯೂರ 2014ರ ಫೆಬ್ರವರಿಯ 'ನವಿಲುಗರಿ' ಅಂಕಣದಲ್ಲಿ ಪುನಃ ಕಾಣಿಸಿಕೊಂಡಿದೆ, ನೋಡಿ.

14. ವೆಂಕಟಾಚಲಪತಿಯವರು 2004ರಲ್ಲಿ ಬೆಂಗಳೂರಿನ ಜಯನಗರದ 5ನೆಯ ಬ್ಲಾಕಿನ ರಾಘವೇಂದ್ರ ಮಠದ ಹಿಂದಿನ ಸಾರ್ವಜನಿಕ ಉದ್ಯಾನದಲ್ಲಿ "smoke, Noise and The earth" ಇನ್‌ಸ್ಟಾಲೇಷನ್ ಅಭಿವ್ಯಕ್ತಿಗೆ ಕಾರಣರಾದರು. ಇನ್‌ಸ್ಟಾಲೇಷನ್ ಅಭಿವ್ಯಕ್ತಿಗಳು ಸಾಮಾನ್ಯವಾಗಿ ಪ್ರಾಯೋಜಿತ ಮೂಲಗಳಿಂದಲೇ ಸಾಕಾರಗೊಳ್ಳುತ್ತವೆ. ಈ ಇನ್‌ಸ್ಟಾಲೇಷನ್‌ಗೂ ರಾಜ್ಯ ಸರ್ಕಾರದ ಟ್ರಾನ್ಸ್‌ಪೋರ್ಟ್ ಇಲಾಖೆಯ ನೆರವು ಪಡೆಯಲಾಗಿತ್ತು. 'ಸೌಜನ್ಯ ಮಾಸ'ದ ಹಿನ್ನೆಲೆಯಲ್ಲಿ ರೂಪುಗೊಂಡ ಈ ಇನ್‌ಸ್ಟಾಲೇಷನ್ 2004ರ ಜನವರಿ 15–ಫೆಬ್ರವರಿ 13ರ ವರೆಗೆ ವೀಕ್ಷಕರಿಗೆ ತೆರೆದುಕೊಂಡಿತ್ತು. ಸಹಜವಾಗಿ ವೀಕ್ಷಕರ ಪಾಲ್ಗೊಳ್ಳುವಿಕೆಯೂ ಇದ್ದಿತು. ಫೈಬರ್, ತೈಲ, ಜಾಲರಿ, ಕಬ್ಬಿಣ, ಮರ ಮತ್ತು ಕಸಕಡ್ಡಿ ಇತ್ಯಾದಿಗಳಿಂದ ಮೂಡಿ ಬಂದ ಪರಿಸರ ಪರ ಕಾಳಜಿ ಹೊತ್ತ ವೆಂಕಟಾಚಪತಿಯವರ ಅಭಿವ್ಯಕ್ತಿ ಅದು. ವೀಕ್ಷಕರಿಗೆ ಅಂತಿಮವಾಗಿ ಪ್ರಶ್ನಾವಳಿಯೊಂದನ್ನೂ ನೀಡಲಾಗುತ್ತಿತ್ತು. ಪರಿಸರ ಸಂರಕ್ಷಣೆ, ಪ್ರೀತಿಯ ಪರ ಕೆಲವೇ ವಾಕ್ಯಗಳ ಹೇಳಿಕೆಯನ್ನು ಬರೆಯಬೇಕಿತ್ತು. ಪ್ರಶ್ನಾವಳಿಯಲ್ಲಿ ಬೆಂಗಳೂರಿನ ದ್ವಿಚಕ್ರ, ನಾಲ್ಕು ಚಕ್ರ, ಇತ್ಯಾದಿ ಸಂಖ್ಯೆಯ ವಾಹನಗಳ ವಿವರಗಳನ್ನೂ ಕೇಳಲಾಗಿತ್ತು. ಅತ್ಯುತ್ತಮವಾಗಿ ಪ್ರತಿಕ್ರಿಯಿಸಿದವರನ್ನು ಪರಿಸರ ಇಲಾಖೆಯು ಆಯ್ಕೆ ಮಾಡಿ ಅವರಿಗೆ ಹೂ-ಹಣ್ಣು ಬಿಡುವ ಮರಗಳ ಪುಟ್ಟ ಪುಟ್ಟ ಗಿಡಗಳನ್ನು ಪ್ರೋತ್ಸಾಹಕರವಾಗಿ ನೀಡಿತು. ವೆಂಕಟಾಚಲಪತಿಯವರು ಆ ಸಂದರ್ಭದಲ್ಲಿ ಬಿಡುಗಡೆ ಮಾಡಿದ್ದ ಇಂಗ್ಲೀಷ್ ಹೇಳಿಕೆ ಗಮನಿಸಿ:

This installation is the result of the fusion of various materials assembled in

a circular area. It reflects the drastic consequences of the careless attitude towards our environment in general and specifically the result of utter disregard to the vehicle pollution we cause through air and noise, thus endangering our children's ours as well as the health of our dear environment which sustains us all.

This installation is a work which seeks to communicate in broadly three layers.

The wiremesh sculpture filled with real garbage represents the present human existence which is perhaps you and me. Our inner organs bear the blunt of all pollution. Hence, this representaion.


This four feet dia bowl is our earth cut in half, filled with stiumulated contaminated water, made by artistically blending colours and oil. Polluted air carrying dense smoke contaminates all living organisms and plant life, thus affecting our precious water through acid rains.

A fact chart talks to you in the language of Art.

I hope that my installation work will make you contribute to protect our only world and its every organism by resolving to fine tune your vehicles and make it non-polluting and to use the form only when absolutely necessary. We do have a responsibility to our children, to leave a better world for them to live in.

Venkatachalapathy, 2004.

15. 'ಪ್ರಭಾವದ ಆತಂಕ' ತತ್ವದ ಮೂಲ ಆಶಯಗಳಿಗಾಗಿ ಹೆರಾಲ್ಡ್ ಬ್ಲೂಮ್‌ನ Anxiety of influence : A theory of poetry. Oxford university press, US, 1997. ಗಮನಿಸಿ.



ಅನುಬಂಧಗಳು

1. ಕಲ್ಪನೆಯ ಹೊಸ ಚಿಗುರುಗಳು

ಬೆಂಗಳೂರಿನ ಪ್ರತಿಭಾವಂತ ತರುಣ ಶಿಲ್ಪಿಗಳಲ್ಲಿ ಒಬ್ಬರು – ವೆಂಕಟಾಚಲಪತಿ, ಹಳ್ಳಿಯಲ್ಲಿ ಹುಟ್ಟಿ ಬೆಳೆದ ಚಲಪತಿಯವರ ಮೊದಲ ಕಲಾಶಿಕ್ಷಣ ಸಾಂಪ್ರದಾಯಿ, ರೀತಿಯಲ್ಲಿ ದೇವನಹಳ್ಳಿಯ ಖ್ಯಾತ ಶಿಲ್ಪಾಚಾರ್ಯ ಎ.ಸಿ. ಹನುಮಂತಾಚಾರ್ಯರಲ್ಲಿ ಅನಂತರ ಬೆಂಗಳೂರು ಕಲಾಮಂದಿರಲದಲ್ಲಿ...

ಕ್ರಮೇಣ ಅನುಭವ ಪಡೆದು ರಾಜ್ಯ ಲಲಿತಕಲಾ ಅಕಾಡೆಮಿಯ ಬಹುಮಾನವನ್ನು ಪಡೆದಿದ್ದಾರೆ. ರಾಜ್ಯದ ಮತ್ತು ಹೊರಗಿನ ಅನೇಕ ಕಲಾ ಕೇಂದ್ರಗಳಲ್ಲಿ ಶಿಲ್ಪಕಲಾ ಪ್ರದರ್ಶನ ಮಾಡಿದ್ದಾರೆ. ಕೇಂದ್ರ ಲಲಿತಕಲಾ ಅಕಾಡೆಮಿಯ ರಾಷ್ಟ್ರೀಯ ಪ್ರದರ್ಶನದಲ್ಲಿ ಭಾಗವಹಿಸಿದ ಚಲಪತಿಯವರ ಶಿಲ್ಪವೊಂದು ಆ ಅಕಾಡೆಮಿಯಿಂದಲೂ ತನ್ನ ಸಂಗ್ರಹಕ್ಕೆ ತೆಗೆದುಕೊಳ್ಳಲಾಗಿದೆ ಎಂಬ ವಿಷಯ ಗಮನಾರ್ಹ.

ಬ್ರಿಗೇಡ್ ರಸ್ತೆಯಲ್ಲಿರುವ ರಾಂನೀಲ್ ಆರ್ಟ್ ಗ್ಯಾಲರಿಯಲ್ಲಿ ನಡೆಯುತ್ತಿರುವ ವೆಂಕಟಾಚಲಪತಿಯವರ ಶಿಲ್ಪಕಲಾ ಪ್ರದರ್ಶನದಲ್ಲಿ 12 ಶಿಲ್ಪಗಳಿವೆ. ಇವುಗಳಲ್ಲಿ ಶಿಲೆ, ಮಣ್ಣು, ಕಂಚು ಮತ್ತು ಪ್ಲಾಸ್ಟರ್‌ಗಳಿಂದ ರಚಿತವಾದುವಿವೆ.

ಪ್ರದರ್ಶನವನ್ನು ಒಟ್ಟು ಪರಿಶೀಲಿಸಿದಾಗ ಹಂತ ಹಂತವಾಗಿ ಅವರಲ್ಲಿ ಆದ ಬೆಳವಣಿಗೆ ಕಾಣಬರುತ್ತದೆ. ಎರಡು "ಪೋಟ್ರೇಟ್" ಪ್ರಾರಂಭದೆಸೆಯ ಕಲ್ಪನೆಯ ರೀತಿಯವು, ಅದೇ ಫ್ಲೈಯಿಂಗ್ ಫಿಶ್ (?) ಇತ್ತೀಚಿನ ಕಲ್ಪನೆ. ಅಂದವಾಗಿದೆ. ವೆಂಕಟಾಚಲಪತಿಯವರು ಕಲಾ ಕ್ಷೇತ್ರದಲ್ಲಿನ ಆಗು–ಹೋಗುಗಳನ್ನು ಚೆನ್ನಾಗಿ ಗ್ರಹಿಸುತ್ತಿದ್ದಾರೆಂದು ತಿಳಿಯಪಡಿಸುವಂತಿವೆ.

ಬಿ.ವಿ.ಕೆ.

ಪ್ರಜಾವಾಣಿ, 1981

2. ಬೀದಿಯಲ್ಲಿ ಶೋಷಿತ ಮಹಿಳೆ

ಕಲೆ ಸಾಮಾಜಿಕ ಪರಿಸರವನ್ನು ಬಿಟ್ಟು, ಸ್ವತಂತ್ರವಾಗಿ ಬೆಳೆಯಬೇಕೆ? ಸಮಾಜಕ್ಕೂ ಕಲೆಗೂ ಸಂಬಂಧ ಉಂಟೇ ಇಲ್ಲವೇ? ಈ ಪ್ರಶ್ನೆಗಳ ಮೇಲೆ ಸಾಕಷ್ಟು ಜಿಜ್ಞಾಸೆ ಆಗಿದೆ. ಆಗುತ್ತಲೂ ಇದೆ. ಆದರೆ ಒಂದು ಅಂಶ ನಿಜ. ಕಲಾವಿದನು ಸ್ವತಂತ್ರವಾಗಿ ಏಕಾಂಗಿಯಾಗಿ ಕೃತಿ ರಚನೆ ಮಾಡಿದರೂ ಅದನ್ನು ಜನಗಳು ನೋಡಬೇಕು ಎಂಬ ಬಯಕೆಯು ಅವನಿಗೆ ಇರುವುದು, ನೋಡುವವರ ಪ್ರತಿಕ್ರಿಯೆ ಏನು ಎಂಬುದನ್ನು ತಿಳಿವ ಕುತೂಹಲವೂ ಉಂಟು.

ಜಯನಗರದ ನಾಲ್ಕನೆಯಬ್ಲಾಕ್ ಷಾಪಿಂಗ್ ಕಾಂಪ್ಲೆಕ್ಸ್ ಬಳಿ ನಡೆದ ಬಹಿರಂಗ ಕಲಾ ಪ್ರದರ್ಶನವನ್ನು ನೋಡಿದಾಗ ಈ ಪ್ರಶ್ನೆಗಳು ಮನಸ್ಸಿನಲ್ಲಿ ಸುಳಿಯುತ್ತಿದ್ದವು. ಈ ಪ್ರದರ್ಶನವನ್ನು ಏರ್ಪಡಿಸಿದವರು ಜಾನ್ ದೇವರಾಜ್ ಮತ್ತು ಗೆಳೆಯರು ಅಂದರೆ ಮುರುಗೇಶಪ್ಪ, ವೆಂಕಟಾಚಲಪತಿ, ಸುಬ್ರಮಣ್ಯಂ, ಕೆ.ವಿ. ಸುಬ್ರಮಣ್ಯಂ ಅಲ್ಲ, ಈಗಾಗಲೇ ನಗರದಲ್ಲಿ ಕೆಲವು ಕಲಾ ಪ್ರದರ್ಶನಗಳು ಆಗಿವೆ. ಸ್ವಲ್ಪ ಕೋಲಾಹಲವನ್ನು ಮಾಡಿದ್ದಾರೆ. ಈ ಕಲಾವಿದರು ಕಲೆಯನ್ನು ನಾಲ್ಕು ಗೋಡೆಗಳ ಮಧ್ಯದಿಂದ ಗಾಳಿಬೆಳಕು ಚೆನ್ನಾಗಿ ಆಡುವ ಹೊರವಲಯದಲ್ಲಿ ಜನ ಸಂಚಾರದ ಜಾಗದಲ್ಲಿ ಪ್ರದರ್ಶಿಸುವುದು ಪದ್ಧತಿ. ಇದಕ್ಕೆ ಮುಖ್ಯ ಕಾರಣಕಲೆಗೂ ಜನತೆಗೂ ತನ್ಮೂಲಕ ಸಮಾಜಕ್ಕೂ ನಿಕಟ ಸಂಪರ್ಕ ಏರ್ಪಡಿಸುವುದು.

ಪ್ರಸ್ತುತ ಪ್ರದರ್ಶನದ ವಸ್ತು ಮಹಿಳೆ, ಅಂದರೆ ಶೋಷಿತ ಮಹಿಳೆ. ಭಾರತದ ಜನಸಂಖ್ಯೆಯ

ಅರ್ಧದಷ್ಟು ಹೆಂಗಸರೇ ಇದ್ದಾರೆ. ಹೆಸರಿನಲ್ಲಿ ಗಂಡಸರ ಅರ್ಧಾಂಗಿಯರನ್ನಿಸಿದರೂ, ಅವರು ಬಹುತೇಕ ಗಂಡಸರ ನೆರಳಾಗಿ, ಅವರ ಇಚ್ಛೆಗಳ ಒಂದು ಉಪಕರಣವಾಗಿ ಶೋಭಿಸುತ್ತಿದ್ದಾರೆ. ಇದರ ಫಲವಾಗಿ ಪ್ರೀತಿಯಷ್ಟೇ ಕ್ರೌರ್ಯಗಳಿಗೂ ಗುರಿಯಾಗಿದ್ದಾರೆ, ಅದರ ವಿವಿಧ ಮುಖಗಳನ್ನು ನಿರೂಪಿಸಿ ಜನತೆಯಲ್ಲಿ ಸರಿಯಾದ ಪ್ರಜ್ಞೆ ಮೂಡಿಸುವುದೇ ಪ್ರದರ್ಶನದ ಉದ್ದಿಶ್ಯ.

12 ಶಿಲ್ಪ 21 ಚಿತ್ರಗಳಿದ್ದ ಪ್ರದರ್ಶನದಲ್ಲಿ ಕಲಾವಿದರ ವಸ್ತುನಿಷ್ಠೆ ಸ್ಪಷ್ಟವಾಗಿ ಅನುಭವವಾಗುತ್ತಿತ್ತು. ಕೆಲವರದು ಸಾಂಕೇತಿಕವಾಗಿ ಕೆಲವರದು ವಿಡಂಬನರೀತಿಯಲ್ಲಿ.. ಹೀಗೆ ಹೆಣ್ಣಿನ ಜೀವನದ ದಾಸ್ಯ ಸಂಕಟ ಮತ್ತು ಗಂಭೀರತೆಯನ್ನು ಎತ್ತಿ ತೋರುವಂತಿದ್ದುವು. ಸುರುಟಿಕೊಂಡ ಮರಗಳಂತಿದ್ದ ಸರಳ ಶಿಲ್ಪಗಳೂ, ಜ್ಯಾಮಿತಿಯ ಅಂಕಣಗಳಿಂದ ಕೂಡಿದ ಗ್ರಾಫಿಕ್ ಚಿತ್ರಗಳೂ, ಸುಟ್ಟಮಣ್ಣಿನ ಟೆರ್ರಾಕೊಟ್ಟಾ ಮುಂತಾದ ಮಾಧ್ಯಮ ಹಾಗೂ ಶೈಲಿಗಳ ವೈವಿಧ್ಯತೆಯಿಂದ ಕೂಡಿದ ಈ ಪ್ರದರ್ಶನವನ್ನು ನೋಡಲು ಜನಸಂದಣಿ ನೆರೆಯುತ್ತಿದ್ದುದು ನಿಜ. ಆದರೆ ಅವರಲ್ಲಿ, ಎಷ್ಟು ಮಂದಿಗೆ ಶೋಷಿತ ಮಹಿಳೆಯ ಬಗೆಗೆ ವಿಚಾರ ಪ್ರಜ್ಞೆ ಮೂಡಿತು ಹೇಳುವುದು ಕಷ್ಟ ಕಾದು ನೋಡಬೇಕು.

ಬಿ.ವಿ.ಕೆ.

ಪ್ರಜಾವಾಣಿ

3. ವೈವಿಧ್ಯಮಯ ಶೈಲಿಯ ಅಪರೂಪದ ಶಿಲ್ಪಗಳು

ರಾಜ್ಯದಲ್ಲಿ ಅಪರೂಪ ಎನ್ನಬಹುದಾದ ಸಮಕಾಲೀನ ಶಿಲ್ಪಕಲಾಕೃತಿಗಳ ಪ್ರದರ್ಶನವೊಂದು ಇತ್ತೀಚೆಗೆ ಬೆಂಗಳೂರಿನ ರಾಮ್‌ನೀಲ್ ಆರ್ಟ್ ಗ್ಯಾಲರಿಯಲ್ಲಿ ನಡೆಯಿತು. ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಧನಸಹಾಯದಿಂದ ತಮ್ಮ ಕೃತಿಗಳನ್ನು ಪ್ರದರ್ಶಿಸಿದ್ದ ವೆಂಕಟಾಚಲಪತಿಯವರು ದೇವನಹಳ್ಳಿಯ ಶಿಲ್ಪಿಕಲಾ ಶಾಲೆಯಲ್ಲಿ ಶಾಸ್ತ್ರೀಯವಾಗಿ ಶಿಲ್ಪಕಲಾಭ್ಯಾಸ ಮಾಡಿದವರು. ಕೆಲವು ವರ್ಷಗಳಿಂದ ಸಮಕಾಲೀನ ಶಿಲ್ಪಗಳತ್ತು ಒಲವು ತೋರಿ ಹಲವಾರು ಪ್ರಮುಖ ಕಲಾ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಕಳೆದ ವರ್ಷ ರಾಜ್ಯ ಲಲಿತಕಲಾ ಅಕಾಡೆಮಿಯ ಪ್ರದರ್ಶನದಲ್ಲಿ ಪ್ರಶಸ್ತಿಯನ್ನೂ ಗಳಿಸಿದ್ದಾರೆ. ಈಗ ವಿಶ್ವೇಶ್ವರಯ್ಯ ಮ್ಯೂಸಿಯಂನಲ್ಲಿ ಕಲಾವಿದರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಈ ಪ್ರದರ್ಶನದಲ್ಲಿ ಒಟ್ಟು ಹನ್ನೊಂದು ಕೃತಿಗಳಿದ್ದವು; ಕಲ್ಲು, ಕಂಚು, ಪ್ಲಾಸ್ಟರ್ ಆಫ್ ಪ್ಯಾರಿಸ್ ಹಾಗೂ ಟೆರಾಕೋಟಾ ಮಾಧ್ಯಮದಿಂದ ರಚಿಸಿದಂಥವು. ಕಲ್ಲಿನ ನಾಲ್ಕು ಕೃತಿಗಳಲ್ಲಿ 'ಫಾರ್ಮ್' ಕೃತಿಯೊಂದನ್ನು ಬಿಟ್ಟರೆ ಉಳಿದವು ಕರಿಯ ಕಲ್ಲಿನಿಂದ, ನುಣುಪಾದ ಮೇಲ್ಮೈಯಿಂದ ಕೂಡಿವೆ. ಕಷ್ಟಕರವೆನ್ನಬಹುದಾದ ಈ ಮಾಧ್ಯಮದಲ್ಲಿ ಮೂರು ಇತ್ತೀಚೆಗೆ ರಚಿಸಿದವು, ಒಂದೇ ಶೈಲಿಯಿಂದ ಕೂಡಿವೆ. ಇವುಗಳ ಮೇಲ್ಮೈಯಂತೆಯೇ ಅದರಲ್ಲಿರುವ ತ್ರಿಪರಿಮಾಣದ ಆಕಾರಗಳು ಮೃದುವಾದ ತಿರುವುಗಳನ್ನು ಪಡೆಯುವುದರ ಮೂಲಕ ಆಕರ್ಷಕವಾಗಿ ಕಾಣುತ್ತವೆ. ಕಂಚಿನ ಮೂರು ಕೃತಿಗಳಲ್ಲಿ ಪ್ರತಿಯೊಂದು ಬೇರೆಬೇರೆ ಶೈಲಿಯಿಂದ ಕೂಡಿದೆ. 'ಫ್ಲೈಯಿಂಗ್ ಫಿಶ್'ಗೆ ಚಿನ್ನದಂತೆ ಹೊಳೆಯುವ ಮೇಲ್ಮೈ ಕೊಟ್ಟಿದ್ದಾರೆ. ಟೆರಾ ಕೊಟ್ಟಾ ಮಾಧ್ಯಮದಲ್ಲಿನ 'ಲೈಯಿಂಗ್ ಫಾರ್ಮ್' ನುಣುಪಾಗಿಲ್ಲದ, ದೃಢವಾದ, ಘನವಾದ ತಿರುವುಗಳಿಂದ ಕೂಡಿದೆ. ಪ್ರದರ್ಶನದಲ್ಲಿ ಹ್ಯಾಂಡಿಕ್ಯಾಪ್, ಎಕ್ಸ್‌ಪೆಕ್ಟೇಶನ್, ಅಫೆಕ್ಷನ್‌ಗಳನ್ನು ಕಲಾತ್ಮಕ ಹಾಗೂ ಪಕ್ವವಾದ ಸಂಯೋಜನೆಗಳೆನ್ನಬಹುದು. ಪ್ಲಾಸ್ಟರ್ ಕೃತಿಗಳಲ್ಲಿ ಸಂಪ್ರದಾಯಕ್ಕೆ ಹತ್ತಿರವಾದ 'ಪೋರ್ಟ್ರೈಟ್ಸ್'ಗಳು ಪ್ರದರ್ಶನದ ಮೌಲ್ಯವನ್ನು ಮಿತಿಗೊಳಿಸುತ್ತವೆ. ಚಲಪತಿಯವರು ತಮ್ಮದೇ ಆದ ಶೈಲಿಯನ್ನು ಬೆಳೆಸಿಕೊಳ್ಳುವುದರಲ್ಲಿ ಇನ್ನೂ ಅಷ್ಟಾಗಿ ಯಶಸ್ವಿಯಾಗಿಲ್ಲ. ಕೆಲವೆಡೆ ಬೇರೆಬೇರೆ ಪ್ರಭಾವಗಳು ಇಣುಕಿವೆ.

ಪ್ರದರ್ಶಿಸಿರುವ ಸ್ಥಳ ಕಲಾಕೃತಿಗಳ ಸಂಖ್ಯೆಗೆ ಹೋಲಿಸಿದರೆ ಹೊಂದುವಂತಹದಲ್ಲ; ಸ್ಥಳ ಕಿರಿದಾಗಿದೆ. ನಮ್ಮ ರಾಜ್ಯದಲ್ಲಿ ಸಮಕಾಲೀನ ಶಿಲ್ಪಿಗಳು ಬೆರಳೆಣಿಕೆಯಷ್ಟು ಮಾತ್ರ ಇದ್ದಾರೆ. ಇಂಥಾದ್ದರಲ್ಲಿ ಕ್ಲಿಷ್ಟಕರವಾದ ಈ ಮಾಧ್ಯಮಗಳಲ್ಲಿ ಸಾಧನೆ ನಡೆಸಿರುವ ಚಲಪತಿಯವರು ತಮ್ಮ ಪ್ರಥಮ ಏಕ ಕಲಾವಿದ ಪ್ರದರ್ಶನದಲ್ಲಿಯೇ ಸಾಕಷ್ಟು ಗಮನ ಸೆಳೆದು ಇನ್ನೂ ಬೆಳೆಯುವ ಲಕ್ಷಣಗಳನ್ನು ತೋರಿದ್ದಾರೆ.

– ಚಿ.ಸು. ಕೃಷ್ಣ ಸೆಟ್ಟಿ

ಉದಯವಾಣಿ, ಮೇ 9, 1981

ಅನುಬಂಧ: 5

ಗೆಳೆಯ ವೆಂಕಟಾಚಲಪತಿ ಅವರು ಸುಮಾರು 35 ವರ್ಷಗಳಿಂದ ಪರಿಚಿತರು.

ಕಲೆ ಅವರಿಗೆ ತಪಸ್ಸು ಇದ್ದ ಹಾಗೆ. ಸರಳತೆ ಸಜ್ಜನಿಕೆ ಇವರಿಗೆ ಆಭರಣ.

ಸರ್ವಜ್ಞನ ಶಿಲ್ಪ ಸೊಗಸಾಗಿ ಮೂಡಿದೆ.

ಆ ಭವ್ಯ ನಿಲುವು, ಮಂದಸ್ಮಿತ, ಮುಖದ ವರ್ಚಸ್ವಿ ಕಳೆ ಮನೋಜ್ಞವಾಗಿವೆ.

ಸಟ್ಟ ಕಂದು ಬಣ್ಣ ಶಿಲ್ಪಕ್ಕೆ ಭೂಮಿಯ ಗುಣವನ್ನು ಇತ್ತಿದೆ.

ಚಲಪತಿ ಅವರಿಗೆ ಶುಭಾಶಯಗಳು

ಸಿ.ಆರ್. ಸಿಂಹ

16–3–02

ಅನುಬಂಧ: 6

ಕಲಾವಿದ ವೆಂಕಟಾಚಲಪತಿ ಅವರ ಗೃಹಕಲಾಶಾಲೆಯಲ್ಲಿ ರೂಪುಗೊಳ್ಳುತ್ತಿರುವ ಆಚಾರ್ಯ ತೀನಂಶ್ರೀ ಅವರ ಪ್ರತಿಮೆಯ ವೀಕ್ಷಣೆಯ ಸಂದರ್ಭದಲ್ಲಿ ಅವರ ಇನ್ನಿತರ ಕಲಾಸಾಧನೆಗಳನ್ನು ಕಂಡು, ಹುಟ್ಟು ಕಲಾವಿದನ ಸೃಜನ ಶೀಲ ವೈವಿಧ್ಯಕ್ಕೆ ನಾನು ಬೆರಗಾಗಿದ್ದೇನೆ. ವೆಂಕಟಾಚಲಪತಿಯವರ ಈ ಪ್ರತಿಭಾ ಸಾಮರ್ಥ್ಯ, ಈಗಾಗಲೇ ಸಾಕಷ್ಟು ಗಮನ ಹಾಗೂ ಗೌರವ ಪ್ರಶಸ್ತಿಗಳನ್ನು ಪಡೆದುಕೊಂಡಿದೆ. ಈ ಪಂಕ್ತಿಗೆ ಸಹ ಕಲಾವಿದನಾದ ನನ್ನ ಅಭಿನಂದನೆ ಹಾಗೂ ಶುಭಾಶಯಗಳನ್ನು ಸೇರಿಸಲು ಆಶಿಸುತ್ತೇನೆ.

ಜಿ.ಎಸ್. ಶಿವರುದ್ರಪ್ಪ

27–7–1997

7

Shantiniketan

8. 8. 90

Dear Shri Venkata Chalapathiya,

I Think you received my last letter saying thanks for reading me the Electronic Tambura with Shri Dutta.

In this letter I want to remind you to send me the list of Modern machinery and equipments for our new workshop for Direct Metal Sculpture.

you must remember that last time when we visited your Director at your Museum, you were with us that time. He requestd you to collect the names of the equipment of your workshop and send to me the at Department of Sculpture Kala Bhavana VISHVABHARATI SANTINIKETAN, 731235. Since long time past, we did not receive the list from you I am reminaing fore to send me the list as soon as possible.

with Best regards and wishes,

Your sincearly

Sabari Roy

8

v.r. khajuria

300-A Gandhi Nagar,

Jammu Tawi-180004

(India)

20th Nov, 1980

Dear Vankatachalapati ;

Hope this will find you in good health and work. Your letter was received long back but i could not refer due to much business. Hope you will not mind.

I was invited to attand the senlptors Camp by Mr. M.S. Nanjunda Rao, the camp is starting on 22nd Nov: I got his letter was two days ago and unable to book my resavation, but any how I am starting from here to morrow - i.e. 21st Nov: and will reach-Delhi on 22nd Nov: there from I will got train K.K. Express on Sunday the 23rd Nov: 80. Which will reach Bangalore on 24th night.

I never been is Bangalore, therefore people that if you have time, please do camp to the railway station to fieilitate me. I hope you will not mind the trouble.

request, when we meet

pay my regards to you MRs.

with best regards

your's

(V.R. Khajuria)

9. National award for state sculptor

Sculptor Venkatachalapathy has bagged a national award for his Sculpture-95. a vertical mass or seemingly uncontrolled experssive figuration a part of his recently catalyzed interest towards natural, peculiarly shaped pieces of rocks.

Though his award winning sculpture is deceptively raw for he imitated the naturally available rocks one of his earlier series contained miniature models of instrumentally geometrical architectural forms. Thus his portfoilo is vast and varied. In spite of his pragmatic education at the old - fashioned kalamadir and Ken School of Arts, his emergence as a sculptor was a post art school dictum and, he is quite thankful to the kind of job he holds (at the museum) as an artist. that exposed him to different dimensiions of sculpting free of cost! The bane of most artists working in government jobs has been turned into a boon by him. Chalapathy balances his official and personal creation in a tight rope walk schedule. And more than anything. after about two decades of living such an arrangement. he is now habituated or almost addicted it.

The daily routine of Chalapathy stands symbolic of most of our active sculptors style of functioning. Any attempt to probe for a homogeneity in his works and a rigid viewpoint would be a Utopian idea. Because, for Chalapathy and a few others like him, aesthetic involvement is both a creative act and a means to make a living, not exactly in this order.

Venkatachalapathy, instead of wanting to become a sculptor was made into one by circumstance and this has affected the subjectivity in his works also For instance his popularity and creative works (including his award winning entry) are unconnected. He is well known for his 'portrait - busts' of personalities like As Na. Subbarao (artist), Kondajji Basappa. Devaraj Urs (politician), B.M. Shree (literature), etc. "Since portraits are sponsored and the patrons have their own ideal image of that particular celebrity, like this one (he points out towards a clay model of Basavanna, around four feet tall, squatting and involved in the act of writing - a yet to be fully realised sclpture in Bonze to be installed at Gulbarga), any personal modifications I might under take means destroying the sanctity of the popular image of the celebrity. I wouldn't dare invite the wrath of the fans." says Chalapathy, whose statement, though incidental. also summarises his whole philisophy of art which stands somewhere between public demand for popular imagery and an urge to be himself in his work, Only a few people who posse for him have demanded for his personal picturisation of themselves, as against the popular notion of smoothly finished, idealised faces, "Only once in a way you get such models". says Chalapathy.

It might be a bit too early to assess his overall creative outputs (Chalapathy is 48 now). Even if one attempt this exercise it will mean considering his sponsored and personal works pur together which are far apart visually and ideologically. In his more sincere works (in terra-cotta and stone). he concentrates on an intelligent handling of the given media but in the commissioned works the very same concern is blunted.

Granite stone is a very hard media. While working in this he maintains the natural appearance of the piece making only slight alternations. His awarded work belongs to this category, though it is in a different media. i.e. bronze. When he handles the ever flexible clay. which he burns into terracotta. he exploits its

flexibility to the maximum. Irrespective of the final, look of his piece one can ponder over the innumeerable marks, strokes and impressions on the relief surface that speaks volumes of his exuberant handling of the clay.

As such, practising sculptors are few in Karnataka, And amongst them very few respect the individual feel of each medium. Most sculptors possess a tendency to paint 'patina' (a greenish-grey shade). to make their work appear like a grand antique bronze sculpture irrespective of the impermanence that lies beneath. From this point of view. Chalapathy is mostly an adorer of the 'unique quality' in any medium he handles, with the exception of the sponsored pieces.

Express week, Feb 3, 1996



ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಅಖಿಲಭಾರತ ಶಿಲ್ಪ ಕಲಾ ಶಿಬಿರದಲ್ಲಿ ಸನ್ಮಾನ, 2010.

ಪತ್ರಗಳು

ಜಿ.ಎಸ್.ಎಸ್. ಅವರಿಂದ ವೆಂಕಟಾಚಲಪತಿಯವರಿಗೆ...

ಕಲಾವಿದ ವೆಂಕಟಾಚಲಪತಿ ಅವರ ಸ್ವಹ ಕಲಾಕೃತಿಯನ್ನು ಹೊಸಗೊಳ್ಳುತ್ತಿರುವ ಅಭ್ಯಾಸ: ತನ್ನಂತೆ ಅವರ ಪ್ರತಿಭೆಯ ಷಷ್ಟ್ಯಬ್ದಿಯ ಸಂದರ್ಭದಲ್ಲಿ ಅವರ ಇನ್ನಿತರ ಕಲಾಸಾಧನೆಗಳನ್ನು ಕಂಡು, ಹುಟ್ಟು ಕಲಾವಿದನ ಸೃಜನಶೀಲ ವ್ಯಕ್ತಿತ್ವಕ್ಕೆ ನಾನು ಬೆರಗಾಗಿದ್ದೇನೆ. ವೆಂಕಟಾಚಲಪತಿಯವರ ಈ ಪ್ರತಿಭಾ ಸಾಮರ್ಥ್ಯ, ಈಗಾಗಲೇ ಸಾಕಷ್ಟು ಗಮನ ಹಾಗೂ ಗೌರವ-ಪ್ರಶಸ್ತಿಗಳನ್ನು ಪಡೆದು ಕೊಂಡಿದೆ. ಈ ಸಂದರ್ಭಕ್ಕೆ ಸಹಕಲಾವಿದನಾದ ನನ್ನ ಅಭಿನಂದನೆ ಹಾಗೂ ಶುಭಾಶಯಗಳನ್ನು ಕೋರಲು ಬಯಸುತ್ತೇನೆ.

27-7-1997. ಜಿ.ಎಸ್. ಶಿವರುದ್ರಪ್ಪ

ನಟ ಸಿಂಹರವರ ಪತ್ರ

ಗೆಳೆಯ ವೆಂಕಟಾಚಲಪತಿ ಅವರು ಸುಮಾರು
35 ವರ್ಷಗಳಿಂದ ಪರಿಚಿತರು.
ಕಲೆ ಅವರಿಗೆ ತಪಸ್ಸು, [illegible]. ಸರಳತೆ
ಸಜ್ಜನಿಕೆ ಅವರಿಗೆ ಭೂಷಣ.
ಸರ್ವಜ್ಞನ ಶಿಲ್ಪ ಸೊಗಸಾಗಿ ಮೂಡಿದೆ.
ಈ ಭವ್ಯ ನಿಲುವು, ಮಂದಸ್ಮಿತ, ಮುಖದ
ವರ್ಚಸ್ಸು ಕಳೆ ಮನೋಜ್ಞವಾಗಿವೆ.
[illegible] ಕಂಪು ಬಣ್ಣ ಶಿಲ್ಪಕ್ಕೆ ಭೂಮಿಯ
ಗುಣವನ್ನು ಇತ್ತಿದೆ.
ಚಲಪತಿ ಅವರಿಗೆ ಶುಭಾಶಯಗಳು.

ಸಿ. ಆರ್. ಸಿಂಹ
16 - 3 - 02



ಕವಿ ಸುಮತೀಂದ್ರ ನಾಡಿಗ್‌ರವರ ಪತ್ರ...

Venkatachalapathy

unassuming, rustic looking great sculptor

Sri Venkatachalapathi, has won laurels at the State and National levels, but for his simplicity, he would have been ~~[illegible]~~ more well-known, and rich. Pretentious and dramatic ~~[illegible]~~ Van Gogh was not famous in his own life-time but Picasso was. Some people flower late and also get their fame very late. Some like Salvador Dali, become very well-known because he was brilliant, dashing, unconventional, but one wonders if he will endure. Some are like our famous artist M.F. Hussain. K.K. Hebbar could never use the tricks of M.F. Hussain. Some become celebrities because of their historical context, and because of their contacts. But Mr. TIME is a great critic, and a great judge. I know his whims & fancies and also his ~~final correct~~ ultimate judgements. I am confident that he will uphold Venkatachalapathy as a great artist.

Sumatheendra Nadig

17.4.2002
Bangalore

ಶಿಲ್ಪಿ ಸರ್ಬರೀ ರಾಯ್‌ಚೌಧರಿರವರ ಪತ್ರ...

Santiniketan
8. 8. 90

Dear Shri Venkata Chalapathiji
I Think you received my last letter saying thanks for sending me the Electronic Tambura with Shri Dutta.

In this letter I want to remind you to send me the list of Modern machinery and equipments for our new workshop for Direct Metal Sculpture,

you must remember that last time when we visited your Director at your Museum, you were with us that time, He requested you to collect the names of the equipment of your workshop the list and send to me at Department of Sculpture Kala Bhavana VISHVABHARATI SANTINIKETAN, 731235.
Since long time past, we did not received the list ~~for~~ from you I am reminding you to send me the list as soon as possible;

with Best regards and wishes,
Yours sincerely
Sarbari Roy Chowdhury

ಪದಸೂಚಿ




1980ರಲ್ಲಿ ರಾಜ್ಯ ಲಲಿತ ಕಲಾ ಅಕಾಡೆಮಿಯ ವಾರ್ಷಿಕ ಬಹುಮಾನವನ್ನು ಹಾ.ಮಾ. ನಾಯಕರಿಂದ ಸ್ವೀಕರಿಸುತ್ತಿರುವ ವೆಂಕಟಾಚಲಪತಿ. ಚಿತ್ರದಲ್ಲಿ ರಿಜಿಸ್ಟ್ರಾರ್ ಎನ್. ಮರಿಶಾಮಾಚಾರ್ ಇದ್ದಾರೆ.



ರಾಜ್ಯಲಲಿತಕಲಾ ಅಕಾಡೆಮಿಯ 1980ರ ವಾರ್ಷಿಕ ಪ್ರದರ್ಶನದಲ್ಲಿ ಪ್ರದರ್ಶಿತ ತಮ್ಮ ಶಿಲ್ಪದೊಂದಿಗೆ ವೆಂಕಟಾಚಲಪತಿ. ಎಡಬದಿಯಲ್ಲಿ ಕೆ.ಕೆ. ಹೆಬ್ಬಾರರನ್ನು ಗಮನಿಸಬಹುದು.

ದೃಶ್ಯಕಲೆಯ ಇತಿಹಾಸ / ವಿಮರ್ಶೆ



ಕನ್ನಡ ದೃಶ್ಯಸಂಸ್ಕೃತಿಯ ಸಾಕ್ಷರತೆಗೆ ಗಣನೀಯ ಕೊಡುಗೆ ನೀಡಿರುವವರು ಕೆ.ವಿ. ಸುಬ್ರಮಣ್ಯಂ (ಜನನ: 1949, ವಾಗಟ ಅಗ್ರಹಾರ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.). ದೃಶ್ಯ ಕಲಾವಿದ/ಕಲಾವಿದೆಯರ ಅಭಿವ್ಯಕ್ತಿಗಳನ್ನು ಗಂಭೀರ ಕಣ್ಣು ಮನಸ್ಸುಗಳಿಗೇ ಅಲ್ಲದೆ ಸಾಮಾನ್ಯರಿಗೂ ಮುಟ್ಟಿಸುವ ನಿರಂತರ ಪ್ರಯತ್ನ ಅವರಿಂದ ನಡೆದಿದೆ. ಕನ್ನಡ ಪತ್ರಿಕೆ, ಕೆಟಲಾಗ್ ಬರಹಗಳು ಕೆಲವೊಮ್ಮೆ ಇಂಗ್ಲೀಷ್ ಬರಹಗಳು ಹಾಗೂ ಮಾತುಕತೆಗಳು ಅವರಿಂದ ಮೂಡಿ ಬರುವ ಉದ್ದೇಶವೇ ಇದು. ಅವರು ಹಲವು ಪ್ರಕಟಣೆಗಳಲ್ಲಿ ಮುಖ್ಯವಾದವು: 'ವೆಂಕಟಪ್ಪ: ಸಮಕಾಲೀನ ಪುನರವಲೋಕನ', 'ಕರ್ನಾಟಕದ ಆಧುನಿಕ ಶಿಲ್ಪಕಲೆ', 'ಕಲಾ ಸಂವೇದನೆಯ ಒಳನೋಟಗಳು', 'ಮುಖಗಳೊಂದಿಗೆ ಮುಖಾಮುಖಿ', 'ಕನ್ನಡ ಶಿಲ್ಪ ಕಲೆಯ ಸಮಕಾಲೀನ ದೃಶ್ಯ', 'ಇನ್‌ಸ್ಟಾಲೇಷನ್ ಕಲಾ ಪ್ರಪಂಚ', ಹಾಗೂ 'ಶಿಲಾಶ್ರಯ ಕಲೆಯ ದೃಶ್ಯಧ್ಯಾನ'. ಸುಬ್ರಮಣ್ಯಂರವರಿಗೆ ಕರ್ನಾಟಕ ಲಲಿತಕಲಾ ಅಕಾಡೆಮಿಯ ಗೌರವ ಪ್ರಶಸ್ತಿ, ಹರ್ಯಾಣದ ಸುಭದ್ರಾಕುಮಾರಿ ಚೌಹಾಣ್ ಜನ್ಮ ಶತಮಾನೋತ್ಸವ ಸಮ್ಮಾನ್, 2004, ಮದರಾಸಿನ United Writers Association of India, ಫೆಲೋ (2004), ಮೊದಲಾದವು ಸಂದಿವೆ.

ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಕನ್ನಡ ಭವನ, ಬೆಂಗಳೂರು–560002.